# ಕಾರಣಗಳು, ವ್ಯಾವಹಾರಿಕ ಕಾರಣ, ಮತ್ತು ವ್ಯಾವಹಾರಿಕ ಕಾರಣವಾದ

**ರಾಬರ್ಟ್ ಆಡಿ**

## ತಾತ್ಪರ್ಯ

ಕಾರಣಗಳ ಪರಿಕಲ್ಪನೆಗಳು ಆಧಾರ ಅಂಶಗಳಾಗಿ, ವ್ಯಾವಹಾರಿಕ ಕಾರಣವನ್ನು ಸಾಮರ್ಥ್ಯವಾಗಿ, ವ್ಯಾವಹಾರಿಕ ಕಾರಣವಾದವನ್ನು ಪ್ರಕ್ರಿಯೆಯಾಗಿ, ಕ್ರಿಯಾ ಸಿದ್ಧಾಂತದಲ್ಲಿ ಪ್ರಮುಖ ಅಂಶಗಳಾಗಿವೆ. ಈ ಲೇಖನವು ಈ ಪ್ರತಿಯೊಂದರ ಸಂಕ್ಷಿಪ್ತ ವಿವರಣೆಯನ್ನು ಒದಗಿಸುತ್ತದೆ. ಕ್ರಿಯೆಗೆ ಹಲವಾರು ರೀತಿಯ ಕಾರಣವನ್ನು ಪ್ರತ್ಯೇಕಿಸಲಾಗುತ್ತದೆ. ವ್ಯಾವಹಾರಿಕ *'ಕಾರಣ'* ವನ್ನು ಈ ಎರಡು ರೀತಿಯಲ್ಲಿ ನಿರೂಪಿಸಲಾಗಿದೆ: ಬಹು ಮಟ್ಟಿಗೆ ಕಾರಣಗಳಿಗೆ ಒಂದು ರೀತಿಯಲ್ಲಿ ಸ್ಪಂದಿಸಲು ಪ್ರಯೋಗಿಸಲಾಗುವ ಸಾಮರ್ಥ್ಯವಾಗಿ ಮತ್ತು ಅದು ಕೆಲವು ಪ್ರಮಾಣಕ (normative) ತತ್ವಗಳಿಂದ ನಿಯಂತ್ರಿಸಲ್ಪಡುವುದು ಎಂಬುದಾಗಿ. *ವ್ಯಾವಹಾರಿಕ ಕಾರಣವಾದ'* ವನ್ನು ಒಂದು ರೀತಿಯ ಮನಸ್ಸಿನ ಪ್ರಕ್ರಿಯೆ ಎಂದು ವಿವರಿಸಲಾಗುತ್ತದೆ. ಅದರಲ್ಲಿ ಕಾರಣಗಳು ಪ್ರಮೇಯಗಳಾಗಿ (premises) ಪರಿಗಣಿಸಲ್ಪಡುತ್ತವೆ ಮತ್ತು ಆ ಪ್ರಮೇಯಗಳಿಂದ ಒಂದು ವ್ಯಾವಹಾರಿಕ ತೀರ್ಮಾನಕ್ಕೆ ಬರಲಾಗುತ್ತದೆ. ಈ ಲೇಖನದ ಹೆಚ್ಚಿನ ಭಾಗವು ಎರಡು ಸಂಬಂಧಿತ ಕಾರ್ಯಗಳನ್ನು ಕೈಗೊಳ್ಳುತ್ತದೆ: ವ್ಯಾವಹಾರಿಕ ಕಾರಣವಾದದ ಮುಖ್ಯ ವಿಧಗಳು ಮತ್ತು ಅದಕ್ಕೆ ಸಂಬಂಧಿತ ಮೌಲ್ಯಮಾಪನದ ಮಾನದಂಡಗಳನ್ನು ಪ್ರತ್ಯೇಕಿಸುವುದು ಮತ್ತು ವ್ಯಾವಹಾರಿಕ ಕಾರಣವಾದದ ಕೆಲವು ಪ್ರಮುಖ ಸಾರಭೂತವಾದ (substantive) ತತ್ವಗಳನ್ನು ರೂಪಿಸುವುದು. ಈ ತತ್ವಗಳು ಹಲವಾರು ವಿಧದ ಮಾನದಂಡಗಳನ್ನು ನೀಡುತ್ತವೆ: ತಾರ್ಕಿಕ (logical), ನಿರ್ಣಯಾತ್ಮಕ (inferential), ಜ್ಞಾನದ (epistemic) ಮತ್ತು ವಾಸ್ತವಿಕ (material). ಪ್ರಸ್ತುತಪಡಿಸಿರುವ ಸಿದ್ಧಾಂತದಲ್ಲಿ, ಯಾವುದೇ (ಮೂಲಭೂತವಲ್ಲದ) ಉದ್ದೇಶಪೂರ್ವಕ ಕ್ರಿಯೆಯನ್ನು ವ್ಯಾವಹಾರಿಕ ಕಾರಣವಾದದಲ್ಲಿ ಆಧಾರ ಹೊಂದುವಂತೆ ಮಾಡಿದರೂ, ಅದೇ ಕ್ರಿಯೆಗಳನ್ನು ಸಂಬಂಧಿತ ಕಾರಣಕ್ಕೆ (ಗಳಿಗೆ) ಆ ರೀತಿಯ ಆಧಾರ *'ಇಲ್ಲದೆಯೂ'* ನಿರ್ವಹಿಸಬಹುದು, ಮತ್ತು ಎರಡೂ ಸಂದರ್ಭಗಳಲ್ಲೂ ಅವುಗಳ ಸಕಾರಣತೆಯು, ಕಾರಣ (ಗಳು) ಸಮರ್ಪಕ ಆಧಾರವನ್ನು ನೀಡುತ್ತಿದೆಯೇ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಒಂದು ರೀತಿಯ ಕಾರಣವನ್ನು ಸಾಮಾನ್ಯವಾಗಿ ಕ್ಯಾಂಟ್‌ನ ಔಪಾಧಿಕ ಕಡ್ಡಾಯ ನಿಯಮ (ಆಜ್ಞಾರ್ಥಕ)ಗಳಿಂದ (hypothetical imperatives) ಗ್ರಹಿಸಲಾಗುತ್ತದೆ ಎಂದು ಭಾವಿಸಲಾಗಿದೆ. ಅಂತಿಮ ಭಾಗಗಳು, ಔಪಾಧಿಕ ಕಡ್ಡಾಯ ನಿಯಮಗಳನ್ನು ರೂಪಿಸುವುದು ಯಾವುದು ಮತ್ತು ವ್ಯಾವಹಾರಿಕ ಸಕಾರಣತೆಯನ್ನು ವಿವರಿಸಲು ಅಗತ್ಯವಿರುವ ಇತರ ತತ್ವಗಳು ಯಾವುವು ಎಂಬುದನ್ನು ಅನ್ವೇಷಿಸುತ್ತವೆ. ಇಲ್ಲಿ ಮಾಡಬಹುದಾದ ಒಂದು ಪ್ರಮುಖ ತೀರ್ಮಾನವೆಂದರೆ, ವ್ಯಾವಹಾರಿಕ ಕಾರಣದ ಕ್ಷೇತ್ರದಲ್ಲಿ ನಿರುಪಾಧಿಕ ಕಡ್ಡಾಯ

ನಿಯಮಗಳು (categorical imperatives) ಇಲ್ಲದಿದ್ದರೆ ಯಾವುದೇ ಔಪಾಧಿಕ ನಿಯಮಗಳು ಸಹ ಇರಲು ಸಾಧ್ಯವಿಲ್ಲ.

ವ್ಯಾವಹಾರಿಕ ಕಾರಣ ಮತ್ತು ಸೈದ್ಧಾಂತಿಕ ಕಾರಣ ಎರಡನ್ನೂ ಅರ್ಥಮಾಡಿಕೊಳ್ಳುವಲ್ಲಿ ಕಾರಣಗಳು ಬಹಳ ಮುಖ್ಯ. ಆದರೆ ಕಾರಣಗಳಲ್ಲಿ ಹಲವು ಬಗೆಗಳಿವೆ. ಭಾಗಶಃ ಈ ಕಾರಣದಿಂದಾಗಿ, ತತ್ವಶಾಸ್ತ್ರೀಯ ಬರವಣಿಗೆಯು ಸಾಮಾನ್ಯವಾಗಿ ಯಾವುದು ಕಾರಣವೆಂದು ಪರಿಗಣಿಸಲಾಗುತ್ತದೆ ಮತ್ತು ಕಾರಣಗಳು ಹೇಗೆ ವಿವಿಧ ನಿಕಟ ಸಂಬಂಧಿತ ಅಂಶಗಳೊಂದಿಗೆ ಸಂಬಂಧ ಹೊಂದಿವೆ ಎಂಬುದರ ಕುರಿತು ಅಸ್ಪಷ್ಟವಾಗಿದೆ. ಇವುಗಳಲ್ಲಿ ಸಾಮಾನ್ಯ ಸಾಮರ್ಥ್ಯವಾಗಿ *'ಕಾರಣ'* ಒಂದು ಅಂಶವಾಗಿದೆ. ಎರಡನೆಯದು, ಆ ಸಾಮರ್ಥ್ಯದ ಪ್ರಯೋಗವಾಗಿ, ಕಾರಣವಾದ. ನನ್ನ ಅಧ್ಯಯನದ ಕಾಳಜಿಯು ವ್ಯಾವಹಾರಿಕ ಕ್ಷೇತ್ರವಾಗಿದ್ದರೂ, ನಾನು ಚರ್ಚಿಸುವ ಹೆಚ್ಚಿನ ವಿಷಯವು ಸೈದ್ಧಾಂತಿಕ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ನಾನು ಕ್ರಿಯೆಯ ಕಾರಣಗಳ ಸ್ವರೂಪದಿಂದ ಪ್ರಾರಂಭಿಸಿ, ಇವುಗಳನ್ನು ವ್ಯಾವಹಾರಿಕ *'ಕಾರಣ'* ದೊಂದಿಗೆ ಸಂಬಂಧಿಸಲು ಮುಂದುವರೆಯುತ್ತೇನೆ, ಮತ್ತು ನಂತರದಲ್ಲಿ ಇವೆರಡನ್ನೂ ವ್ಯಾವಹಾರಿಕ ಕಾರಣವಾದೊಂದಿಗೆ ಸಂಬಂಧಿಸುತ್ತೇನೆ. ನಾನು ವ್ಯಾವಹಾರಿಕ ಕಾರಣವಾದದ ಮೌಲ್ಯಮಾಪನದ ಕುರಿತು ಮತ್ತು ಅಂತಹ ಕಾರಣವಾದವು ವ್ಯಾವಹಾರಿಕ ಸಕಾರಣತೆಯೊಂದಿಗೆ ಹೇಗೆ ಸಂಬಂಧ ಹೊಂದಿದೆ ಎಂಬುದರ ಕುರಿತು ವಿಶೇಷವಾಗಿ ಆಸಕ್ತಿ ಹೊಂದಿದ್ದೇನೆ.

## I. ಕ್ರಿಯೆಗೆ ಮೂರು ಅತಿವ್ಯಾಪಿಸುವ ಕಾರಣಗಳ ಪ್ರವರ್ಗಗಳು.

ಕ್ರಿಯೆಗೆ ಕನಿಷ್ಠ ಮೂರು ರೀತಿಯ ಮುಖ್ಯ ಕಾರಣಗಳಿವೆ (ಈ ವಿಷಯದಲ್ಲಿ ಕ್ರಿಯೆಗೆ ಹೋಲುವ ಹಾಗೆ ನಂಬಿಕೆಗೂ ಸಹ ಇದೇ ರೀತಿಯ ಪರಿಕಲ್ಪನಾತ್ಮಕ ಪ್ರವರ್ಗಗಳನ್ನು ಗುರುತಿಸಬಹುದು). ಮೊದಲ ವಿಧವು ಪ್ರಮಾಣಕ (Normative), ಎರಡನೆಯದು ಪ್ರೇರಕ (motivational), ಮೂರನೆಯದು ವಿವರಣಾತ್ಮಕವಾಗಿದೆ (explanatory).

ಏನನ್ನಾದರೂ ಮಾಡಲು ಇರುವಂತಹ ಕಾರಣಗಳು (ವಸ್ತುನಿಷ್ಠ ಆಧಾರಗಳ ಅರ್ಥದಲ್ಲಿ) *'ಪ್ರಮಾಣಕ ಕಾರಣಗಳು.'* ಅವು ಎಲ್ಲರಿಗೂ ಅಥವಾ ಕನಿಷ್ಠಪಕ್ಷ ಒಂದು ರೀತಿಯ ಸಾಮಾನ್ಯ ವಿವರಣೆಯುಳ್ಳ ಯಾರಿಗಾದರೂ, ಕೆಲವು ವಿಷಯಗಳನ್ನು ಮಾಡಲು ಹೊಂದಿರುವ ಕಾರಣಗಳು. ಉದಾಹರಣೆಗೆ (ಸಾಮಾನ್ಯ ವ್ಯಕ್ತಿಗಳಿಗೆ) ಹೊರಗಡೆ ಶೀತಗಾಳಿ ಇದ್ದಾಗ ಕೋಟುಗಳನ್ನು ಧರಿಸುವುದು ಮತ್ತು ಹಾಗೆ ಮಾಡಡಿದ್ದರೆ ತಿದ್ದಿಕೊಳ್ಳುವುದು. ಕೆಲವು ಸಾಮಾನ್ಯ ಕಾರಣಗಳು *'ವ್ಯಕ್ತಿ-ಸಂಬಂಧಿತ'* ಆಗಿರುತ್ತವೆ: ಒಬ್ಬ ನಿರ್ದಿಷ್ಟ ವ್ಯಕ್ತಿಗಿರುವ ಕಾರಣಗಳು. ಉದಾಹರಣೆಗೆ ನನಗೆ ಎಂದುಕೊಳ್ಳಿ. *ನನ್ನ* ಸ್ನೇಹಿತನಿಗೆ ಅದು ಸಹಾಯ ಮಾಡುತ್ತದೆ ಎಂಬ ಅಂಶವು ನಾನೊಂದು ಕೆಲಸವನ್ನು ಮಾಡಲು ಒಂದು ಕಾರಣವಾಗಬಹುದು.

ಎರಡನೇ ವಿಶಾಲ ಪ್ರವರ್ಗವೆಂದರೆ ಅದು ಪ್ರೇರಕ ಕಾರಣಗಳು. ಇವುಗಳಲ್ಲಿ ಎರಡು ಮುಖ್ಯ ವಿಧಗಳಿವೆ. ಮೊದಲನೆಯದು *'ಹೊಂದಿರುವ ಕಾರಣಗಳು (possessed reasons)'*: ಯಾರಾದರೂ ಹೊಂದಿರುವ ಕಾರಣಗಳು, ಉದಾಹರಣೆಗೆ, ಬೆಚ್ಚಗಿರಬೇಕು ಎಂಬ ಕಾರಣಕ್ಕೆ ನಾನು ಕೋಟ್ ಧರಿಸಿದಂತೆ. ಎರಡನೆಯ ವಿಧವು ಹೊಂದಿರುವ ಮತ್ತು ಪ್ರೇರೇಪಿಸುವಂತಹ ಕಾರಣಗಳು (ಮತ್ತು ಇದನ್ನು ಕೆಳಗೆ ವಿವರಿಸಲಾಗಿದೆ). ಅಪೇಕ್ಷೆಯ ಮೇಲೆ ಆಧಾರಿತವಾಗಿದ್ದರೆ ಅಂತಹ ಹೊಂದಿರುವ ಕಾರಣವು ವ್ಯಕ್ತಿನಿಷ್ಠದ್ದಾಗಿರುತ್ತದೆ (ಎಲ್ಲಾ ಅಪೇಕ್ಷೆಗಳೂ ಕಾರಣವಾಗಲು ಸಾಧ್ಯವಿಲ್ಲ ಎಂಬುದು ಇದರರ್ಥ). ಕರ್ತೃವು ಏನನ್ನು ಅಪೇಕ್ಷಿಸುತ್ತಾನೆ ಎಂಬುದರಿಂದ *'ಸ್ವತಂತ್ರ'*ವಾಗಿ ನಿಲ್ಲುವ ಮತ್ತು ಆ ಅರ್ಥದಲ್ಲಿ ಬಾಹ್ಯ ಮತ್ತು ವಸ್ತುನಿಷ್ಠ ಎಂದು ಕರೆಯಲ್ಪಡುವ ಪ್ರಮಾಣಕ ಕಾರಣಗಳಿಗೆ ವ್ಯತಿರಿಕ್ತವಾಗಿ

ಅಪೇಕ್ಷೆಗಳನ್ನು ಆಧರಿಸಿದ ಕಾರಣಗಳನ್ನು *'ಆಂತರಿಕ'* ಎಂದು ಕರೆಯಬಹುದು. ಆದರೆ 'ಆಂತರಿಕ' ಎಂಬ ಬಳಕೆಯು ತಪ್ಪು ಅರ್ಥ ನೀಡಬಹುದು. ಏಕೆಂದರೆ ಹೊಂದಿದಂತ ಕಾರಣಗಳು ಸಹ ಪ್ರಮಾಣಕ ಕಾರಣಗಳಾಗಿರುತ್ತವೆ, ಮತ್ತು ಪ್ರಮಾಣಕ ಕಾರಣಗಳಿಗೆ ಅವುಗಳನ್ನು ಹೊಂದಬಹುದಾದಂತಹ *'ಸಾಮರ್ಥ್ಯ'* ಇರಬೇಕಾಗುತ್ತದೆ, ಆದ್ದರಿಂದ ಆ ಅರ್ಥದಲ್ಲಿ ಆಂತರಿಕ. ಸ್ಪಷ್ಟವಾಗಿ ಹೇಳುವುದಾದರೆ, ನಾವು ಹೊಂದಿರುವ ಒಂದು ಕಾರಣವು ಕ್ರಿಯೆಯ ನಿಜವಾದ ಆಧಾರವಾಗಿರಬಹುದು ಅಥವಾ ಆಗದಿರಬಹುದು. ಅಂತಹ ಒಂದು ಕಾರಣಕ್ಕಾಗಿ ನಾವು ಕಾರ್ಯನಿರ್ವಹಿಸಿದಾಗ, ಅದು ಕೇವಲ ಒಂದು ರೀತಿಯಲ್ಲಿ ಪ್ರೇರಕವಾಗಿರದೆ *'ಪ್ರೇರೇಪಿಸುತ್ತದೆ (motivating)'* ಕೂಡ, ಮತ್ತು ಅದೊಂದು ವಿವರಣಾತ್ಮಕ ಪಾತ್ರವನ್ನೂ ವಹಿಸುತ್ತದೆ. ಒಂದು ಕ್ರಿಯೆಯನ್ನು ಪ್ರೇರೇಪಿಸುವ ಕಾರಣದ ರೂಢಮಾದರಿ ಎಂದರೆ ಅಪೇಕ್ಷಿತ ವ್ಯವಹಾರಗಳ ಸ್ಥಿತಿಯನ್ನು ಸಾಧಿಸಿಕೊಳ್ಳುವ *'ಸಲುವಾಗಿ'* ಒಬ್ಬರು ಏನೋವೊಂದನ್ನು ಮಾಡುವುದು.

ಹೊಂದಿರುವಂತ ಕಾರಣಗಳ ಪ್ರವರ್ಗವು ವ್ಯಾವಹಾರಿಕ ಕಾರಣವನ್ನು ಅರ್ಥಮಾಡಿಕೊಳ್ಳಲು ಪ್ರಸ್ತುತವಾದ ಕಾರಣಗಳ ಮೂರನೆಯ ಮುಖ್ಯ ಪ್ರವರ್ಗವಾದ *'ವಿವರಣಾತ್ಮಕ ಕಾರಣಗಳನ್ನು'* ಅತಿವ್ಯಾಪಿಸುತ್ತದೆ: ಅಂದರೆ ಒಂದು ಕ್ರಿಯೆಯು *'ಏಕೆ'* ಸಂಭವಿಸುತ್ತದೆ ಎನ್ನುವುದಕ್ಕೆ ಕಾರಣಗಳು. ಉದಾಹರಣೆಗೆ, ಒಬ್ಬರು ಏಕೆ ಟೋಪಿ ಧರಿಸುತ್ತಾರೆ. ಇವು ವಿಶಿಷ್ಟವಾಗಿಯೂ ಸಹ ಹೊಂದಿದಂತವುಗಳಾಗಿ ಇರುತ್ತದೆ, ಆದ್ದರಿಂದ ಒಬ್ಬರು *'ಹೊಂದಿರುವ'* ಕಾರಣಗಳಾಗುತ್ತವೆ; ಆದರೆ ವಿವರಣಾತ್ಮಕ ಕಾರಣಗಳು ಹೊಂದಿದಂತವುಗಳಾಗಿ ಇರಬೇಕಾಗಿಲ್ಲ. ಯಾವುದೋ ಒಂದು ವಿಭಿನ್ನವಾದದ್ದು, ಉದಾಹರಣೆಗೆ ಮೆದುಳಿನ ಕೆಲವು ಕುಶಲ ನಿರ್ವಹಣೆಗಳು ಒಬ್ಬರು ಕಾರಣವನ್ನು ರೂಪಿಸದೆ ಅಥವಾ ಒದಗಿಸದೆ ಮತ್ತು ಒಂದು ವಿಶಾಲ ಅರ್ಥದಲ್ಲಿಯೂ ಸಹ ಒಂದು ವ್ಯಾವಹಾರಿಕ ಕಾರಣವನ್ನು ರೂಪಿಸದೆ ಒಬ್ಬರು ಏಕೆ ಒಂದನ್ನು ಮಾಡುತ್ತಾರೆ ಎಂಬುದನ್ನು ವಿವರಿಸಬಹುದು. ಆದರೆ ವಿಶಿಷ್ಟವಾಗಿ, ಕ್ರಿಯೆಯ ವಿವರಣಾತ್ಮಕ ಕಾರಣಗಳು ಪ್ರೇರೇಪಿಸುವಂತದ್ದಾಗಿವೆ. ಇವುಗಳು ಕ್ರಿಯೆಗೆ ಮಹತ್ತ್ವವುಳ್ಳ ರೀತಿಯ ಕಾರಣಗಳಾಗಿವೆ. ನಾವು ಏನೋವೊಂದನ್ನು *'ಮಾಡುವುದಕ್ಕೆ ಕಾರಣಗಳು'* ಎಂದು ಇವುಗಳನ್ನು ಕರೆಯಲಾಗುತ್ತದೆ.[1] ಅವು ಕೇವಲ ನಾವು ಹೊಂದಿರುವಂತ ಕಾರಣಗಳು ಮಾತ್ರವಲ್ಲ; ಅವು ವಾಸ್ತವವಾಗಿ ಅವುಗಳ ಆಧಾರದ ಮೇಲೆ ನಮ್ಮನ್ನು ಏನೋವೊಂದನ್ನು ಮಾಡಲು ಪ್ರೇರೇಪಿಸುತ್ತವೆ ಮತ್ತು ಆ ಮೂಲಕ ನಾವು ಅದನ್ನು ಮಾಡಲು ಪ್ರೇರಕ ವಿವರಣೆಯೊಂದನ್ನು ಆಧಾರವನ್ನಾಗಿ ನೀಡುತ್ತವೆ. ಅವು ವಿವರಣಾತ್ಮಕ, ಹೊಂದಿರುವ, ಮತ್ತು ಸಾಮಾನ್ಯವಾಗಿ ಪ್ರಮಾಣಕವೂ ಸಹ ಆಗಿವೆ. ವ್ಯಾವಹಾರಿಕ ಕಾರಣವಾದದ ಆಧಾರದ ಮೇಲೆ ನಾವು ಕಾರ್ಯನಿರ್ವಹಿಸಿದಾಗ ನಾವು ಅಂತಹ ಕಾರಣ ವಿಧಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತೇವೆ.

ನಿಖರವಾಗಿ ಹೇಳುವುದಾದರೆ, ಮೂರು ವಿಧದ ಕಾರಣಗಳಿಗೆ ಸಾಮಾನ್ಯವಾದ ಒಂದು ವಿಷಯವೆಂದರೆ, ಅವು ಅಮೂರ್ತ ಅಂಶಗಳಾಗಿವೆ - ನಂಬಿಕೆಗಳ ವಿಷಯಗಳು ಮತ್ತು ಇತರ ಸಂಜ್ಞಾನಾತ್ಮಕ ಮನೋಭಾವನೆಗಳು, ಪ್ರತಿಪಾದನೆಗಳು, ಮತ್ತು ಅಪೇಕ್ಷೆಗಳ ವಿಷಯಗಳು ಹಾಗೂ ಇತರ ಕಾರ್ಯಪ್ರೇರಕ (conative) ಮನೋಭಾವನೆಗಳು, ವ್ಯವಹಾರಗಳ ಸ್ಥಿತಿಗಳಲ್ಲಿ ಅವು ಅಮೂರ್ತ ಅಂಶಗಳು. ಪ್ರಮಾಣಕ ಕಾರಣಗಳು ಕನಿಷ್ಠಪಕ್ಷ ಈ ಅರ್ಥದಲ್ಲಿ ವಸ್ತುನಿಷ್ಠವಾಗಿರುತ್ತವೆ: ಒಂದು ಪ್ರಮಾಣಕ ಕಾರಣವು ಪ್ರತಿಪಾದನೆಯಾಗಿರುವಾಗ, ಅದನ್ನು ರೂಪಿಸುವ ಪ್ರತಿಪಾದನೆಯು ನಿಜವಾಗಿರುತ್ತದೆ; ಅದು ಪ್ರತಿಪಾದನೆಯಾಗಿ ಇಲ್ಲದಿದ್ದಾಗ, ಅದು ಯಾವುದೋ ಒಂದು ರೀತಿಯಲ್ಲಿ ಸತ್ಯಕ್ಕೆ ಅನುರೂಪವಾಗಿರುತ್ತದೆ. ಉದಾಹರಣೆಗೆ, ನನ್ನ ಒಬ್ಬ ಸ್ನೇಹಿತನಿಗೆ ಸಹಾಯ ಮಾಡಲು ನನಗೆ ಒಂದು ವಸ್ತುನಿಷ್ಠ ಕಾರಣವಿದೆ ಎಂದು ಭಾವಿಸೋಣ, ಮತ್ತು ಅದು "ನನ್ನ ಭರವಸೆಯನ್ನು ಪೂರೈಸಲು" ಎಂಬ ಕ್ರಿಯಾರ್ಥವನ್ನು ಸೂಚಿಸುವ ಒಂದು ಧಾತ್ವರ್ಥವಾಚಿಯನ್ನು (infinitive) ಬಳಸುವುದರ ಮೂಲಕ ವ್ಯಕ್ತವಾಗುತ್ತದೆ. ಈ ಕಾರಣವು ಈ ಸಹಾಯವನ್ನು ನೀಡುವುದು ಒಂದು ಭರವಸೆಯ

ಕರ್ತವ್ಯವಾಗಿದೆ ಎಂಬ ಸತ್ಯಕ್ಕೆ ಅನುರೂಪವಾಗಿದೆ. ಮೂರನೆಯ ರೀತಿಯ ಕಾರಣಕ್ಕೆ ಸಂಬಂಧಿಸಿದಂತೆ, ಒಬ್ಬರು ಹೊಂದಿರುವ ಕಾರಣಗಳು, ಅವು ಅಪೇಕ್ಷೆ, ಭರವಸೆ ಮತ್ತು ಉದ್ದೇಶದಂತಹ ಒಬ್ಬರ ಉದ್ದೇಶಪೂರ್ವಕ ಸ್ಥಿತಿಗಳ ಮೂಲಕ ವ್ಯಕ್ತಪಡಿಸಲ್ಪಡುತ್ತವೆ ಮತ್ತು ಸೂಕ್ತವಾದ ಉದ್ದೇಶಪೂರ್ವಕ ಸ್ಥಿತಿಗಳ ವಿಷಯಗಳಾಗಿರುವುದರಿಂದ ಅವು ಹೊಂದಿರುವಂತದ್ದಾಗುತ್ತವೆ. ಈ ಸ್ಥಿತಿಗಳು ವರ್ತನೆಯ ಮೇಲೆ ಕಾರಕ ಶಕ್ತಿಯ ಪ್ರಭಾವವನ್ನು ಬೀರಬಹುದು ಅಥವಾ ಬೀರದೆ ಇರಬಹುದು.

ವ್ಯಾವಹಾರಿಕ ಕಾರಣದ ಸಿದ್ಧಾಂತದಲ್ಲಿ, ವಿಶ್ಲೇಷಣೆಯು ಮುಖ್ಯವಾಗಿ ಕ್ರಿಯೆಗೆಂದಿರುವ ಪ್ರಮಾಣಕ ಕಾರಣಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಇವು *‘ವ್ಯಾವಹಾರಿಕ ಕಾರಣಗಳು’*, ಅಂದರೆ, ನನ್ನ ಪ್ರಕಾರ ಅವು ನಾವು ಮಾಡಲು ಹೊಂದಿರುವ (ಕೆಲವು) ನಮ್ಮ ಪ್ರಮಾಣಕ ಕಾರಣವನ್ನು ನಿರ್ಧರಿಸುವಂತ ರೀತಿಯದು. ಇದಕ್ಕೆ ಅನುಗುಣವಾಗಿ, ಕ್ರಿಯೆಗೆ ಒಂದು ಅಥವಾ ಹೆಚ್ಚಿನ ಸಂಖ್ಯೆಯಲ್ಲಿ *‘ಪರ್ಯಾಪ್ತ (ಪ್ರಮಾಣಕ)’* ಕಾರಣದ ಆಧಾರದ ಮೇಲೆ, ನಾವು ಏನು ಮಾಡಿದರೆ *‘ಸಕಾರಣ’* ವಾಗಿರುತ್ತದೆ ಎಂಬುದನ್ನು ಅವು ನಿರ್ಧರಿಸುತ್ತವೆ. ಅಂದರೆ ಎಲ್ಲಿ ನಮಗೆ ಏನೋವೊಂದನ್ನು ಮಾಡಲು ವ್ಯಾವಹಾರಿಕ ಕಾರಣವಿರಬಹುದು ಮತ್ತು ಹಾಗೆ ಮಾಡದಿರಲು ಅಂತಹ ಕಾರಣವು ಇಲ್ಲದೆಯೂ ಇರಬಹುದು. (ಒಂದು ನಿರ್ದಿಷ್ಟ ಕಾರ್ಯವನ್ನು ಮಾಡದಿರುವುದು *‘ವಿಚಾರಹೀನ’* ಎಂಬ ಕಲ್ಪನೆಯು *‘ಬಲವಾದ’* ಕಾರಣದ ಪರಿಕಲ್ಪನೆಯನ್ನು ನೀಡುತ್ತದೆ. ಆದರೆ ನಾನು ಈ ಕಲ್ಪನೆಯನ್ನು ಇಲ್ಲಿ ಬದಿಗಿಡುತ್ತೇನೆ.[2])

ಕಾರಣಗಳು, ಅಪೇಕ್ಷೆಗಳು ಮತ್ತು ನಂಬಿಕೆಗಳಂತಹ ಪ್ರತಿಪಾದನೆಯ ಮನೋಭಾವನೆಗಳ ‘*ವಾಸ್ತವಾಂಶ*’ಗಳೇ ಆಗಿದ್ದರೆ, ‘ನೀವು ಹಾಗೆ ಮಾಡಲು ಕಾರಣವೇನು?’ ಎಂಬುದಕ್ಕೆ ಉತ್ತರವಾಗಿ ನಾವು ಅಪೇಕ್ಷೆಯನ್ನು ಉಲ್ಲೇಖಿಸಿ (ಅದರ ವಿಷಯವು ಕಾರಣದೊಂದಿಗೆ ಹೊಂದಿಕೆಯಾದರೂ ಸಹ) ‘ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸಲು ಬಯಸಿದ್ದೆ’ ಎಂದು ಹೇಳುವುದು ಏಕೆ ಸಹಜವಾಗಿದೆ? ಒಂದು ಕಾರಣವೇನೆಂದರೆ, ಈ ಉತ್ತರವು, ‘ಎರಡನ್ನೂ’ ಮಾಡುತ್ತದೆ: ಕಾರಣವನ್ನು ನೀಡುತ್ತದೆ ಮತ್ತು ಅದು ನನ್ನದು (ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸಲು ಬಯಸಿದ್ದೆ) ಎಂದು ಸೂಚಿಸುತ್ತದೆ. ಇನ್ನೊಂದೇನೆಂದರೆ, ‘ನಾನು ಬಯಸಿದ್ದೆ’ ಎಂಬುದು ಅದೇ ವ್ಯಾವಹಾರಿಕ ಕಾರಣವನ್ನು ವ್ಯಕ್ತಪಡಿಸುವ, ನನಗಿದ್ದಿರಬಹುದಾದ ಇತರ ವಿಭಿನ್ನ ಮನೋಭಾವನೆಗಳಿಗೆ ವಿರುದ್ಧವಾಗಿದೆ. ಅವೆಲ್ಲವೂ ಬಯಸಿದ್ದೆ ಎಂಬುದರೊಂದಿಗೆ ಹೊಂದಾಣಿಕೆ ಇದ್ದರೂ ಭಿನ್ನವಾಗಿರುತ್ತವೆ; ಉದಾಹರಣೆಗೆ, ಒಂದು ಕ್ರಿಯೆಯು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ ಎಂದು ಆಶಿಸಿ ಅದನ್ನು ವ್ಯಕ್ತಪಡಿಸುವುದು ಅನಿವಾರ್ಯ ಕರ್ತವ್ಯ ಎಂದು ಭಾವಿಸುವುದು. ‘ಕಾರಣ’ವು, ಈಗಷ್ಟೇ ವಿವರಿಸಿದ ಅಮೂರ್ತ ಪ್ರಕಾರಗಳ ಕಾರಣಗಳನ್ನು ರೂಪಿಸುವ ಅಮೂರ್ತ ಅಂಶಗಳ ವಿಧಗಳನ್ನು ವ್ಯಕ್ತಪಡಿಸುವ ಅಪೇಕ್ಷೆಗಳನ್ನು (ಮತ್ತು ಇತರ ಮನೋಭಾವನೆಗಳು) ಸೂಚಿಸಿದಾಗ ನಾನು *‘ಕಾರಣದ ಸ್ಥಿತಿಗಳ’* ಬಗ್ಗೆ ಮಾತನಾಡಲು ಪ್ರಸ್ತಾಪಿಸುತ್ತೇನೆ.

ಅಪೇಕ್ಷೆಗಳು ಎಲ್ಲಾ ಐದು ರೀತಿಯ ಕಾರಣಗಳನ್ನು ಒದಗಿಸುತ್ತವೆ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಕೆಲವು ಅಪೇಕ್ಷೆಗಳು ಹಾಗೆ ಮಾಡುವುದಿಲ್ಲ. ವಿಚಾರಹೀನ ಅಪೇಕ್ಷೆಗಳು, ಅವು ಪ್ರೇರೇಪಿಸಬಹುದಾದರೂ ಸಹ, ಯಾವುದೇ ಪ್ರಮಾಣಕ ಕಾರಣಗಳನ್ನು ಒದಗಿಸುವುದಿಲ್ಲ. ಅಪೇಕ್ಷಿತ ಗುರಿಯು ಅದು ಆಂತರಿಕವಾಗಿ ಅಸಮಂಜಸವಾಗಿರುವುದರಿಂದ ಅದನ್ನು ಸಾಧಿಸುವುದು ಅಸಾಧ್ಯ ಎಂದು ಕರ್ತೃ (*S*) ಗೆ ಸ್ಪಷ್ಟವಾಗಿ ತಿಳಿದಿದೆ ಎಂದು ಭಾವಿಸೋಣ.[3] ಈ ರೀತಿಯ ಅಸಮಂಜಸವಾದ ಅಪೇಕ್ಷೆಯು ಖಂಡಿತವಾಗಿಯೂ ಅದನ್ನು ಪೂರೈಸುವ ಗುರಿಯನ್ನು ಹೊಂದಿರುವ ಕ್ರಿಯೆಗೆ ಯಾವುದೇ ರೀತಿಯ ಪ್ರಮಾಣಕ ಕಾರಣವನ್ನು ಒದಗಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಒಂದು ಸಾಮಾನ್ಯ ಅಪೇಕ್ಷೆಯು, ಉದಾಹರಣೆಗೆ, ಒಂದು ಉತ್ತಮ ಕಾದಂಬರಿಯನ್ನು ಓದುವ ಬಯಕೆ, ಕನಿಷ್ಠಪಕ್ಷ ಕೆಲವು ಜನರಿಗೆ ಒಂದು ಪ್ರಮಾಣಕ ಕಾರಣವನ್ನು ಒದಗಿಸಬಹುದು

(ಇದರರ್ಥ ಆಧಾರವಾಗಿರುತ್ತದೆ ಎಂದಲ್ಲ). (ಅದು ವ್ಯಕ್ತಿನಿಷ್ಠ, ವಿವರಣಾತ್ಮಕ, ಮತ್ತು ಪ್ರೇರೇಪಿಸುವಂತಹ ಕಾರಣವನ್ನೂ ಸಹ ಒದಗಿಸಬಹುದು. ಆದರೆ ಆ ವಿಷಯವು ಇಲ್ಲಿ ನನ್ನ ಕಾಳಜಿಯಲ್ಲ.[4])

## II. ವ್ಯಾವಹಾರಿಕ ಕಾರಣ

ಯಾವುದೇ ಸಂಭವನೀಯ ದೃಷ್ಟಿಕೋನದ ಪ್ರಕಾರ ವ್ಯಾವಹಾರಿಕ ಕಾರಣ ಎಂಬುದು, ನಿರ್ದಿಷ್ಟವಾಗಿ ಯಾವ ಕಾರಣ ವಿಧದ ಆಧಾರದ ಮೇಲೆ ಕರ್ತೃಗಳು ಕ್ರಿಯೆಗೆಂದಿರುವ (ಪ್ರಮಾಣಕ) ಕಾರಣಗಳಿಗೆ ಸ್ಪಂದಿಸುತ್ತಾರೋ ಅಂತಹದೊಂದು  ಸಕಾರಣವಾದ ಸಾಮರ್ಥ್ಯ. ಇದು ಯಾವುದೋ ಒಂದು ರೀತಿಯಲ್ಲಿ, ನಂಬಿಕೆಗೆಂದಿರುವ ಕಾರಣಗಳಿಗೆ (ಪ್ರಮಾಣಕ) ಸ್ಪಂದಿಸುವ ಸಕಾರಣವಾದ ಸಾಮರ್ಥ್ಯ ಎಂದು ಪರಿಕಲ್ಪಿಸಲಾದ ಸೈದ್ಧಾಂತಿಕ ಕಾರಣಕ್ಕೆ ಸಂವಾದಿಯಾಗಿದೆ ಎಂದು ವ್ಯಾಪಕವಾಗಿ ಒಪ್ಪಿಕೊಳ್ಳಲಾಗಿದೆ. ಸೈದ್ಧಾಂತಿಕ ಕಾರಣವು ವ್ಯಾವಹಾರಿಕ ಕಾರಣಕ್ಕೆ ಸಾದೃಶವಾಗಿರುವುದಷ್ಟೇ ಅಲ್ಲ, ಅದರ ಕಾರ್ಯಾಚರಣೆಗೂ ಸಹ  ಅತ್ಯಗತ್ಯವಾಗಿದೆ. ಕ್ರಿಯೆಯ ಮಾರ್ಗದರ್ಶನಕ್ಕೆ ನಂಬಿಕೆಗಳ ಅಗತ್ಯವಿದೆ: ಅಪೇಕ್ಷೆಗಳು ತಲುಪಬೇಕಾದ ಗುರಿಯನ್ನು ಪ್ರತಿನಿಧಿಸುತ್ತವೆ, ಆದರೆ ಸ್ವತಃ ಯಾವುದೇ ಮಾರ್ಗವನ್ನು ಸೂಚಿಸುವುದಿಲ್ಲ. ಹಾಗಿದ್ದಲ್ಲಿ, ಕೆಲವು ಅಪೇಕ್ಷೆಗಳು ಮತ್ತು ನಂಬಿಕೆಗಳನ್ನು ಹೊಂದಿರುವ ಆಧಾರದ ಮೇಲೆ ಕರ್ತೃವು ತಕ್ಕ ಮಟ್ಟಿಗೆ ವ್ಯಾವಹಾರಿಕವಾಗಿ ವಿಚಾರಶೀಲನಾಗಿರುತ್ತಾನೆ.

ವ್ಯಾವಹಾರಿಕ ಸಕಾರಣಕ್ಕೆಂದಿರುವ ಬಹುಮುಖ್ಯವಾದ ನಂಬಿಕೆಗಳಲ್ಲಿ, ನಮ್ಮ ಪ್ರೇರಕ ಮನೋಭಾವನೆಗಳನ್ನು ಹೇಗೆ ತೃಪ್ತಿಪಡಿಸುವುದು ಎಂದು ಹೇಳುವ ಒಂದು ರೀತಿಯ ಸಾಧನಭೂತದ (instrumental) ನಂಬಿಕೆಗಳು ವಿಶೇಷವಾಗಿ ಮುಖ್ಯವಾಗಿವೆ;  ಅಂತಹ ನಂಬಿಕೆಗಳು ಇರದಿದ್ದರೆ ನಾವು ಕೇವಲ ಅದೃಷ್ಟದಿಂದ ಮಾತ್ರ ನಮ್ಮ ಗುರಿಗಳನ್ನು ಸಾಧಿಸಬಹುದು. ಈ ನಂಬಿಕೆಗಳಲ್ಲಿ ಮತ್ತು ಇತರ ಮಾನಸಿಕ ಅಂಶಗಳಲ್ಲಿ (ಪ್ರೇರಕ ಮತ್ತು ಸಂಜ್ಞಾನಾತ್ಮಕ ಕೂಡ) ಸಕಾರಣತೆಯು ದತ್ತವಾಗಿರುವುದರಿಂದ, ವ್ಯಾವಹಾರಿಕ ಕಾರಣವಾದದಲ್ಲಿ ಮತ್ತು ವಾಸ್ತವವಾಗಿ ಕ್ರಿಯೆಯಲ್ಲಿ ಸಕಾರಣತೆಯನ್ನು ನಿರೀಕ್ಷಿಸಬಹುದು. ನಾನು ಎಲ್ಲಾ ಮೂರು ಸಂದರ್ಭಗಳಲ್ಲಿ ಸಕಾರಣತೆಯನ್ನು ಅನ್ವೇಷಿಸುತ್ತೇನೆ, ಆದರೆ ಮೊದಲು ಕೆಲವು ಮೂಲಭೂತ ಗೃಹೀತಗಳನ್ನು ಮುಂದಿಡುತ್ತೇನೆ.

ಹಲವಾರು ರೀತಿಯ ವ್ಯಾವಹಾರಿಕ ಕಾರಣದ ಸಿದ್ಧಾಂತಗಳಿವೆ. ಉದಾಹರಣೆಗೆ, ಅವು ವ್ಯಕ್ತಿನಿಷ್ಠ ಅಥವಾ ವಸ್ತುನಿಷ್ಠ, ಆಂತರಿಕವಾದಿ ಅಥವಾ ಬಾಹ್ಯವಾದಿ (ಪ್ರೇರಣೆ ಅಥವಾ ಸಮರ್ಥನೆ ಅಥವಾ ಎರಡರ ಬಗ್ಗೆ), ಮತ್ತು ಸಂಜ್ಞಾನಾತ್ಮಕವಾದಿ  ಅಥವಾ ಸಂಜ್ಞಾನಾತ್ಮಕವಾದಿ ಅಲ್ಲದೇ ಇರುವುದು ಆಗಿರಬಹುದು. ನನ್ನ ದೃಷ್ಟಿಯಲ್ಲಿ, ಅತ್ಯಂತ ಸ್ವಾಭಾವಿಕ ಪ್ರಕಾರವೆಂದರೆ (ವಿವರವಾಗಿ ಬೇರೆಡೆ ಮಂಡಿಸಲಾಗಿದೆ[5]),  ಬಹುತ್ವವಾದಿ, ವಸ್ತುನಿಷ್ಠವಾದಿ, ಮತ್ತು,  ಒಂದು ಅರ್ಥದಲ್ಲಿ ಆಂತರಿಕವಾದಿ. ಉದಾಹರಣೆಗೆ, ಅದು ಸಂತೋಷ, ನೋವು, ಮತ್ತು ಇತರ ರೀತಿಯ ಪುರಸ್ಕಾರಕ ಅಥವಾ "ಶಿಕ್ಷಿಸುವ" ಅಂಶಗಳನ್ನು ಪ್ರಮಾಣಕ ಕಾರಣಗಳ ಆಧಾರವಾಗಿ ಗುರುತಿಸುತ್ತದೆ ಮತ್ತು ಒಂದು ಕ್ರಿಯೆಯನ್ನು ಪ್ರೇರೇಪಿಸುವಲ್ಲಿ ಅವುಗಳ ಪಾತ್ರವನ್ನು ವಿವರಿಸಲು ಸಹಾಯ ಮಾಡುವ ರೀತಿಯಲ್ಲಿ ಅಂತಹ ಆಧಾರಗಳು ಕರ್ತೃಗಳಿಗೆ ಆಂತರಿಕವಾಗಿ  ಗ್ರಹಿಸಲು ಸಾಧ್ಯವಾಗುತ್ತದೆ ಎಂದು ಭಾವಿಸುತ್ತದೆ.

ಇದಕ್ಕೆ ಒಂದು ವ್ಯತಿರಿಕ್ತ ಸಿದ್ಧಾಂತವೆಂದರೆ, ಅದು ಹ್ಯೂಮ್‌ನ ಸಿದ್ಧಾಂತವಾದ ಸಾಧನಭೂತವಾದ: ಇದು ಸಾಧನಭೂತವಲ್ಲದ ಅಪೇಕ್ಷೆಗಳನ್ನು (ವಿಶೇಷ ಅಪವಾದನೆಗಳೊಂದಿಗೆ) ಅವುಗಳ ವಾಸ್ತವಾಂಶವನ್ನು ಲೆಕ್ಕಿಸದೆಯೇ ಕ್ರಿಯೆಗೆ ಕಾರಣಗಳ ಆಧಾರಗಳಾಗಿ ತೆಗೆದುಕೊಳ್ಳುತ್ತದೆ. ಖಚಿತವಾಗಿ ಹೇಳುವುದಾದರೆ,

ಅಪೇಕ್ಷೆಗಳನ್ನು ಆಂತರಿಕವಾಗಿ ಗ್ರಹಿಸಬಹುದಾದ ಕಾರಣ ಸಿದ್ಧಾಂತವು ಆಂತರಿಕವಾದಿ ಆಗಿದೆ. ಆದರೆ ಇದು ವ್ಯಕ್ತಿನಿಷ್ಠವಾದಿಯದ್ದು: ಅದು ಕರ್ತೃವಿನ ವ್ಯಕ್ತಿನಿಷ್ಠ (ಕಾರ್ಯಪ್ರೇರಕ) ಮನೋಭಾವನೆಯಿಂದ ಸ್ವತಂತ್ರವಾಗಿರುವ ಕ್ರಿಯೆಗೆ ಯಾವುದೇ ನಿರ್ದಿಷ್ಟ ವಾಸ್ತವಾಂಶಗಳ ವಿಧಗಳು ಕಾರಣಗಳನ್ನು ಒದಗಿಸುವುದಾಗಿ ಪರಿಗಣಿಸುವುದಿಲ್ಲ[6].

ಆದಾಗ್ಯೂ, ನಾವು ಸಕಾರಣತೆಯನ್ನು ಸಾಮರ್ಥ್ಯದ ಪರಿಕಲ್ಪನೆಯಾಗಿ ಪರಿಗಣಿಸಬಹುದು ಮತ್ತು ನಂತರ ಸಂಬಂಧಿತ ಅರ್ಥದಲ್ಲಿ ಸಕಾರಣವಾಗಿರಲು ಸಾಮರ್ಥ್ಯ ಹೊಂದಿರುವ ವ್ಯಕ್ತಿಯನ್ನು ಪ್ರಚೋದಿಸುವ ಕ್ರಿಯೆಗಳಿಗೆ ಕಾರಣಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬಹುದು. ಒಂದು ಕಡೆ, ನಾವು ಒಂದು ರೀತಿಯ ಕ್ಯಾಂಟ್‌ನ ಸಿದ್ಧಾಂತವಾದ ರಾಚನಿಕವಾದದಂತಹ[7] (constructivism) ಅಥವಾ, ಇನ್ನೊಂದು ಕಡೆ, ನಿರ್ಬಂಧಿತ ಸಾಧನಭೂತವಾದದಂತಹ[8] (instrumentalism) ವ್ಯಾವಹಾರಿಕ ಕಾರಣದ ಕಾರ್ಯವಿಧಾನದ ಕಲ್ಪನೆಯನ್ನು ರೂಪಿಸಬಹುದು. ಕ್ಯಾಂಟ್‌ನ ರಾಚನಿಕವಾದವು ಅದನ್ನು ಸರಿಯಾಗಿ ಬಳಸಿಕೊಳ್ಳುವ ಕರ್ತೃಗಳಿಗೆ ವ್ಯಾವಹಾರಿಕ ಬದ್ಧತೆಗಳನ್ನು ನೀಡುವ ನಿರುಪಾಧಿಕ ಕಡ್ಡಾಯ ನಿಯಮದ ಚೌಕಟ್ಟಿನ ಸ್ವರೂಪವನ್ನು ತೆಗೆದುಕೊಳ್ಳುತ್ತದೆ. ಸಾಧನಭೂತವಾದವು ನಾವು ಸಾಧನಭೂತವಲ್ಲದ ಅಪೇಕ್ಷೆಗಳೊಂದಿಗೆ ಪ್ರಾರಂಭಿಸುವಂತೆ ಮಾಡಿ ಅವುಗಳನ್ನು ವಾಸ್ತವಿಕ ಮಾಹಿತಿ ಮತ್ತು ವಿಶಾಲವಾದ ತಾರ್ಕಿಕ ಮಾನದಂಡಗಳಿಂದ ಮಾರ್ಗದರ್ಶಿಸಲ್ಪಟ್ಟ ಪರ್ಯಾಲೋಚನೆಗೆ ಒಡ್ಡಬಹುದು.

ವ್ಯಾವಹಾರಿಕ ಕಾರಣದ ಎಲ್ಲಾ ಸಂಭವನೀಯ ಸಿದ್ಧಾಂತಗಳು ವ್ಯಾವಹಾರಿಕ ಸಕಾರಣತೆಯಲ್ಲಿ ಸೈದ್ಧಾಂತಿಕ ಕಾರಣಕ್ಕೆ ಒಂದು ಪಾತ್ರವನ್ನು ನೀಡುತ್ತವೆ. ಅವೆಲ್ಲವುಗಳಿಗೂ, ನಮಗೆ ಯಾವ ಕ್ರಿಯೆಗಳು ಸಕಾರಣದವಾಗಿವೆ ಎಂಬುದು ನಮ್ಮ ಪರ್ಯಾಯಗಳ ಪರಿಣಾಮಗಳ ಬಗೆಗಿನ ನಮ್ಮ ನಂಬಿಕೆಗಳ ಮೇಲೆ - ವಿಶೇಷವಾಗಿ ನಮ್ಮ ಸಕಾರಣವಾದ ನಂಬಿಕೆಗಳು -ಅವಲಂಬಿತವಾಗಿರುತ್ತದೆ. ಆದರೆ ನನ್ನ ದೃಷ್ಟಿಯಲ್ಲಿ ಕ್ರಿಯೆಯ ಸಕಾರಣತೆಯನ್ನು ಪ್ರಭಾವಿಸುವುದು ಕೇವಲ ಸಾಧನಭೂತ ನಂಬಿಕೆಗಳು ಮಾತ್ರವಲ್ಲ. ಕೆಲವು ಪ್ರಮಾಣಕ ನಂಬಿಕೆಗಳು ಸಹ ವ್ಯಾವಹಾರಿಕ ಪ್ರಭಾವವನ್ನು ಹೊಂದಿವೆ. ನಾವು ಯಾವುದೋ ಒಂದನ್ನು ಸಕಾರಣವಾಗಿ ಒಳ್ಳೆಯದು (ಅಪೇಕ್ಷಣೀಯ, ಮೌಲ್ಯಯುತ, ಉಪಯುಕ್ತ) ಎಂದು ನಂಬಿದರೆ, ಯಾವುದೇ ಸ್ವತಂತ್ರ ಅಪೇಕ್ಷೆಯ ಹೊರತಾಗಿಯೂ ಆ ಮೂಲಕ ಅದನ್ನು ಸಾಧಿಸಲು ನಮ್ಮಲ್ಲಿ ಕ್ರಿಯೆಗೆ ಕಾರಣವಿದೆ. ಸಕಾರಣದ ಕ್ರಿಯೆಯನ್ನು ನಿರ್ಧರಿಸುವಲ್ಲಿ ನಂಬಿಕೆಯ ಈ ಪ್ರಮಾಣಕ ಮತ್ತು ಸಾಧನಭೂತವಾದ ಪಾತ್ರಗಳ ಕಾರಣದಿಂದಾಗಿ, ವ್ಯಾವಹಾರಿಕ ಸಕಾರಣತೆಯನ್ನು ಸೈದ್ಧಾಂತಿಕ ಸಕಾರಣವನ್ನಾಗಿ ಸರಳೀಕರಿಸಬಹುದು ಎಂದು ನಾವು ಭಾವಿಸಬಹುದು. ನಾನು ಇದನ್ನು ಅನುಮಾನಿಸುತ್ತೇನೆ (ಮತ್ತು ಅದರ ವಿರುದ್ಧ ವಾದಿಸಿದ್ದೇನೆ. ನಂಬಿಕೆಯು ಸಕಾರಣತೆಯ ಸಂಬಂಧಕ ಅಂಗಾಂಶವಾಗಿ ವಿಶೇಷ ಪಾತ್ರವನ್ನು ಹೊಂದಿದ್ದರೂ, ವ್ಯಾವಹಾರಿಕ ಮತ್ತು ಸೈದ್ಧಾಂತಿಕ ಕಾರಣವು ಸಂಪೂರ್ಣವಾಗಿ ವಿಭಿನ್ನ ಎಂಬ ದೃಷ್ಟಿಕೋನವನ್ನು ಸಮರ್ಥಿಸಿಕೊಂಡಿದ್ದೇನೆ[9]).

ಸಕಾರಣ ನಂಬಿಕೆಯ ಸೂಕ್ತವಾದ ವಿಶಾಲವಾದ ಸಿದ್ಧಾಂತದ ಪರಿಭಾಷೆಯಲ್ಲಿ ವ್ಯಾವಹಾರಿಕ ಸಕಾರಣವನ್ನು ವಿವರಿಸುವ 'ಸಾಧ್ಯತೆ'ಯನ್ನು ನಿರಾಕರಿಸುವ ಅಗತ್ಯವು ಇಲ್ಲಿಯ ನನ್ನ ಉದ್ದೇಶಗಳಿಗೆ ಇಲ್ಲ. ನಾವು, ಉದಾಹರಣೆಗೆ, ದೇವತಾಶಾಸ್ತ್ರದ (theological) ಅಥವಾ ಪ್ಲೇಟೋ ಅಥವಾ ಕ್ಯಾಂಟ್‌ನ ಸಿದ್ಧಾಂತದ ಮಾನದಂಡಗಳನ್ನು[10] ಬಳಸಿಕೊಂಡು, ನಮಗೆ ಸಹಜವಾಗಿ ಯಾವುದು ಒಳ್ಳೆಯದು ಎಂದು, ಮತ್ತು ಒಳ್ಳೆಯದನ್ನು ಸಾಕಾರಗೊಳಿಸುವಲ್ಲಿ ಅವುಗಳ ಪಾತ್ರದ ಆಧಾರದ ಮೇಲೆ ಅಪೇಕ್ಷೆಗಳು ಮತ್ತು ಕ್ರಿಯೆಗಳು ಸಕಾರಣವಾಗಿವೆ ಎಂದು ನಾವು ಖಚಿತವಾಗಿ ತಿಳಿದುಕೊಳ್ಳಬಹುದು ಎಂಬುದಾಗಿ ವಾದಿಸಬಹುದು. ಈ ಬೌದ್ಧಿಕ ದೃಷ್ಟಿಕೋನವು ನಮ್ಮ ಸಕಾರಣದ ನಂಬಿಕೆಗಳು ನಮ್ಮ ಸಕಾರಣದ ಅಪೇಕ್ಷೆಗಳಿಗೆ ಮತ್ತು ಸಕಾರಣದ ಕ್ರಿಯೆಗಳಿಗೆ

ಆಧಾರವಾಗಿರುತ್ತವೆ ಎಂಬುದನ್ನು ಒಪ್ಪಿಕೊಳ್ಳುತ್ತದೆ. ಆದರೆ ಇದು ವ್ಯಾವಹಾರಿಕ ಕಾರಣದ ಪರಿಕಲ್ಪನಾತ್ಮಕ ಸ್ವಾಯತ್ತತೆಗೆ ಸಮಂಜಸವಾಗಿದೆ ಮತ್ತು ಇದು ನಾನು ಸಮರ್ಥಿಸುವ ವ್ಯತ್ಯಾಸಗಳು ಮತ್ತು ತತ್ತ್ವಗಳನ್ನು ದುರ್ಬಲಗೊಳಿಸುವುದಿಲ್ಲ. ಉದಾಹರಣೆಗೆ, ಮಾನವ ಜೀವನದಲ್ಲಿ ನೋವು 'ಏಕೆ' ಕೆಟ್ಟ ವಿಷಯವಾಗಿದೆ ಎಂಬುದರ ಬೌದ್ಧಿಕ ವಿವರಣೆಯ ಕೊರತೆಯಿದ್ದರೂ ಸಹ, ನೋವಿನಿಂದ ತಪ್ಪಿಸಿಕೊಳ್ಳಲು ಸ್ಪಷ್ಟ ಕಾರಣವಿದೆ ಎಂಬುದನ್ನು ಕಾಣಲು ಸಾಧ್ಯವಾಗಬಹುದು. ಮೇಲಾಗಿ, ಒಂದು ಗುರಿಯನ್ನು ಸಾಧಿಸಲು ಹೆಚ್ಚು ಪರಿಣಾಮಕಾರಿ ಅಲ್ಲದ ವಿಧಾನಕ್ಕಿಂತ ಹೆಚ್ಚು ಪರಿಣಾಮಕಾರಿಯದ ವಿಧಾನಕ್ಕೆ ಆದ್ಯತೆ ನೀಡಲು ಉತ್ತಮವಾದ (ಸ್ಪಷ್ಟ) ಕಾರಣವಿದೆ ಎಂಬ ತತ್ತ್ವವು ಅದನ್ನು ಅಪೇಕ್ಷೆಗಳಂತಹ 'ವ್ಯಾವಹಾರಿಕ' ಅಂಶಗಳ ಸಕಾರಣಾತೆಯು ಮೂಲಭೂತವಲ್ಲ ಎಂಬ ದೃಷ್ಟಿಕೋನದಿಂದ ಸಮರ್ಥಿಸಬಹುದಾದ ಕ್ರಿಯೆಯ ಬಗೆಗಿನ ದೊಡ್ಡ ಸೈದ್ಧಾಂತಿಕ ಪ್ರತಿಪಾದನೆಗಳ ಹೊರತಾಗಿಯೂ ಉತ್ತಮವಾಗಿದೆ ಎಂಬುದನ್ನು ಕಾಣಬಹುದು. ಒಂದು ಅಂತರ್ಬೋಧೆಯ ವಿವರಣೆಯೆಂದರೆ, ವ್ಯರ್ಥ ಪ್ರಯತ್ನವನ್ನು ತಪ್ಪಿಸಲು ಕಾರಣವಿದೆ; ಆದರೆ ವ್ಯಾವಹಾರಿಕ ಕಾರಣದ ಬಗ್ಗೆ ನಾನೇನು ಹೇಳುತ್ತೇನೋ ಅದು ಈ ವಿವರಣೆಯನ್ನು ಅವಲಂಬಿಸುವುದಿಲ್ಲ.

## III. ವ್ಯಾವಹಾರಿಕ ಕಾರಣವಾದದ ಕ್ರಿಯೆ

ನಾನು ವ್ಯಾವಹಾರಿಕ ಕಾರಣವನ್ನು ಸಾಮರ್ಥ್ಯ ಎಂಬಂತೆ ಚರ್ಚಿಸಿದ್ದೇನೆ ಮತ್ತು ವ್ಯಾವಹಾರಿಕ ಕಾರಣಾವಾದ ಕ್ರಿಯೆಯಲ್ಲಿ ಇದು ಸಾಮಾನ್ಯವಾಗಿ ಮತ್ತು ವಿಶಿಷ್ಟವಾಗಿ ವ್ಯಕ್ತವಾಗುವುದು ಸ್ಪಷ್ಟವಾಗಿದೆ ಎಂದು ನಾನು ಭಾವಿಸುತ್ತೇನೆ. ಆದರೆ - ಬಹಳ ಕಾಲದವರೆಗೂ ಇವೆರಡನ್ನು ಪ್ರತ್ಯೇಕಿಸದಂತಹ ನಿದರ್ಶನಗಳನ್ನು ಸಾಹಿತ್ಯವು ಹೊಂದಿದ್ದರೂ - ವ್ಯಾವಹಾರಿಕ ಕಾರಣ ಮತ್ತು ವ್ಯಾವಹಾರಿಕ ಕಾರಣವಾದದ ಕ್ರಿಯೆ ಎರಡು ವಿಭಿನ್ನ ವಿಷಯಗಳಾಗಿವೆ[11]. ಎಲ್ಲಾ ವ್ಯಾವಹಾರಿಕ ಕಾರಣವಾದದ ಕ್ರಿಯೆಯಲ್ಲಿ ವ್ಯಾವಹಾರಿಕ ಕಾರಣವು ಅಭಿವ್ಯಕ್ತವಾಗುತ್ತದೆಯಾದರೂ ಸಹ, ವ್ಯಾವಹಾರಿಕ ಕಾರಣವಾದವು ವ್ಯಾವಹಾರಿಕ ಕಾರಣವನ್ನು ಪೂರ್ಣವಾಗಿ ಚಿತ್ರಿಸುವುದಿಲ್ಲ. $A$ ಅನ್ನು ಮಾಡಲು (ಇಲ್ಲಿ $A$ ಒಂದು ಕ್ರಿಯೆಯನ್ನು ಸೂಚಿಸುವುದು) ಅಥವಾ $A$ ಅನ್ನು ಮಾಡಬೇಕು ಎಂಬ ಉದ್ದೇಶವನ್ನು ಹೊಂದಿದಾಗ, ಯಾವುದೇ ಕಾರಣವಾದವನ್ನು ಒಳಗೊಳ್ಳದೆಯೇ, ತಮ್ಮ ಗುರಿಯನ್ನು ಸಾಧಿಸಲು $B$ ಒಂದು ಉತ್ತಮ ಮಾರ್ಗವೆಂದು ಆದರೆ ವ್ಯಾವಹಾರಿಕವಾಗಿ ಸರಿ ಅಲ್ಲ ಎಂಬುದನ್ನು ತಿಳಿದಿರುವುದು (ಆದರೆ ತಾತ್ಕಾಲಿಕವಾಗಿ ಅದನ್ನು ಮರೆತಿರುವುದು); ನಾವು ಏನೋವೊಂದನ್ನು ಮಾಡಬೇಕಿರುವುದು (ಒಟ್ಟಾರೆ) ಕಡ್ಡಾಯ ಎಂಬ ತೀರ್ಮಾನಕ್ಕೆ ಬಂದು ಆದರೆ ಅದರ ಜೊತೆಗೆ ಹಾಗೆ ಮಾಡಲು ಯಾವುದೇ ಪ್ರೇರಣೆಯಿಲ್ಲದಿರುವುದು, ಅದು ಇನ್ನೊಂದು ರೀತಿಯ (ಸ್ಪಷ್ಟ) ವ್ಯಾವಹಾರಿಕ ಕಾರಣದ ವೈಫಲ್ಯವಾದರೂ ಅದು ಕಾರಣವಾದವನ್ನು ಒಳಗೊಳ್ಳಬೇಕೆಂಬ ಅಗತ್ಯವಿಲ್ಲ;[12] ಹಾಗೆಯೇ, ಖಂಡಿತವಾಗಿಯೂ ನಿದ್ರಾಜನಕದ ನಂತರ (posthypnotic) ದ ಸಲಹೆಯಿಂದ ಪ್ರೇರಿತವಾದ ನೋವಿನ (ಸಾಧನಭೂತವಲ್ಲದ) ಅಪೇಕ್ಷೆ ಹೊಂದುವುದು ವ್ಯಾವಹಾರಿಕ ಆಧಾರಗಳ ಮೇಲೆ(ಸ್ಪಷ್ಟವಾಗಿ) ಸಕಾರಣವಲ್ಲ.

ಇಲ್ಲಿ ಸಹಜವಾಗಿಯೇ ಉದ್ಭವಿಸುವ ಪ್ರಶ್ನೆಯೆಂದರೆ, ವ್ಯಾವಹಾರಿಕ ಕಾರಣವಾದದ ಕ್ರಿಯೆಯನ್ನು ರೂಪಿಸುವುದು ಯಾವುದು ಮತ್ತು ಅದು ವ್ಯಾವಹಾರಿಕ ಕಾರಣವನ್ನು ಹೇಗೆ ವ್ಯಕ್ತಪಡಿಸುತ್ತದೆ ಎಂಬುದು. ಅಂತಹ ಕಾರಣವಾದದ ಕ್ರಿಯೆಯನ್ನು ಏನು ಮಾಡಬೇಕೆಂದು ನಿರ್ಧರಿಸುವ ಗುರಿಯನ್ನು ಹೊಂದಿರುವ ಕಾರಣವಾದದ ಕ್ರಿಯೆಯನ್ನಾಗಿ ವ್ಯಾಪಕವಾಗಿ ಕಲ್ಪಿಸಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಸೈದ್ಧಾಂತಿಕ ಕಾರಣವಾದದ ಕ್ರಿಯೆಯನ್ನು ಒಂದು ವಾಸ್ತವ ಸಂಗತಿಯನ್ನು ನಿರ್ಣಯಿಸುವ ಗುರಿಯನ್ನು ಹೊಂದಿರುವುದಾಗಿ ವ್ಯಾಪಕವಾಗಿ ಕಲ್ಪಿಸಲಾಗಿದೆ.

ಇದು ವಿಶಾಲವಾದ ಅರ್ಥದಲ್ಲಿ ಸರಿಯಾಗಿದೆ, ಆದರೆ ವಿವರಣೆಯನ್ನು ಬೇಡುತ್ತದೆ: ಮೊದಲನೆಯದಾಗಿ, ಯಾವ ಸಂಗತಿಗಳಲ್ಲಿ ಕಾರಣವಾದದ ಕ್ರಿಯೆಯು *'ಪರಿಶೋಧನಾತ್ಮಕ'* ವಾಗಿದೆಯೋ ಅಥವಾ *'ಪ್ರಯೋಗ'*ದ ಲಕ್ಷಣವನ್ನು ಹೊಂದಿದೆಯೋ ಅಂತಹ ಸಂಗತಿಗಳಿಗೆ ಕಾರಣಗಳನ್ನು ಒದಗಿಸುವುದು. ಉದಾಹರಣೆಗೆ ನಾವು ಒಂದು ಯೋಜಿಸಲಾದ ಕ್ರಿಯೆಯ ಯೋಜನೆಯನ್ನು ಹಾಗೆ ಸುಮ್ಮನೆ ಪರಿಗಣಿಸುವಂತ ಸಂದರ್ಭ ಅಥವಾ ಪ್ರಸ್ತಾಪಿಸಿದ ವಾದದ ಪ್ರಮೇಯಗಳನ್ನು ಒಪ್ಪಿಕೊಳ್ಳದೆಯೇ ಆ ಪ್ರಸ್ತಾಪಿಸಿದ ವಾದವನ್ನು ಪರಿಗಣಿಸುವಂತ ಸಂದರ್ಭ; ಎರಡನೆಯದಾಗಿ, 'ಗುರಿ'ಯು ರೂಪಕವಾಗಿರುವುದರಿಂದ ಅದು ಮುಖ್ಯವಾಗಿ ವ್ಯಾವಹಾರಿಕ ಕಾರಣವಾದದ ಕ್ರಿಯೆಯನ್ನು ಸರಿಯಾಗಿ ನಿರ್ಣಯಿಸಲಾಗುವ ಮಾನದಂಡವನ್ನು ಮನಸ್ಸಿಗೆ ತರುವ ಕೆಲಸವನ್ನು ಮಾಡುವುದು.

ವ್ಯಾವಹಾರಿಕ ಕಾರಣವಾದದ ಕ್ರಿಯೆಯ ಬಗ್ಗೆ ಯಾವುದು ವ್ಯಾವಹಾರಿಕ ಎಂಬುದನ್ನು ಗ್ರಹಿಸುವುದು ಕಷ್ಟ.[13] ಅದನ್ನು *'ಕಾರಣವಾದದ'* ಕ್ರಿಯೆಯನ್ನಾಗಿ ಮಾಡುವ ಗುಣಲಕ್ಷಣವೇನು ಎಂಬುದನ್ನು ಗ್ರಹಿಸುವುದೂ ಸಹ ಕಷ್ಟ. ಇದಕ್ಕೆ ಉತ್ತಮ ಆರಂಭವೆಂದರೆ ಕಾರಣವಾದವನ್ನು ನಿರ್ಣಯಕ್ಕೆ ಸಮವೆಂದು ಕಲ್ಪಿಸುವುದು. ವಿಶಾಲವಾದ ಪರಿಭಾಷೆಯಲ್ಲಿ ಹೇಳುವುದಾದರೆ, ಸ್ಥೂಲವಾಗಿ ನಿರ್ಣಯವೆಂದರೆ ಮೊದಲ ಪ್ರತಿಪಾದನೆ (ಗಳು) - ಇದನ್ನು ಪ್ರಮೇಯ (premise) ದ ಸಮುಚ್ಚಯ ಎಂದು ಕರೆಯೋಣ - ಮತ್ತು ನಂತರದ ಪ್ರತಿಪಾದನೆ, ಅಂದರೆ ತೀರ್ಮಾನ (conclusion)ದ ನಡುವೆ ಒಂದು ರೀತಿಯ ಪರಸ್ಪರ ಆಧಾರದ ಸಂಬಂಧದಿಂದ ಮಾರ್ಗದರ್ಶಿಸಲ್ಪಟ್ಟ ಒಂದು ಅಥವಾ ಹೆಚ್ಚಿನ ಪ್ರತಿಪಾದನೆಗಳಿಂದ ಇನ್ನೊಂದು ಪ್ರತಿಪಾದನೆಗೆ ಹೋಗುವ ಒಂದು ರೀತಿಯ ಆಲೋಚನಾ ಪ್ರಕ್ರಿಯೆ. ಈ ಮಾರ್ಗದರ್ಶಾತ್ಮಕ ಅಂಶದಿಂದಲೇ ಭಾಗಶಃ ನಾವು (ಸತ್ಯಾಂಶ ಮೊದಲಾದವುಗಳಿಂದ) ನಿರ್ಣಯವನ್ನು (inference) ಸೂಕ್ತವಾಗಿ ಅನುಗಮನಾತ್ಮಕ (inductive) ಅಥವಾ ನಿಗಮನಾತ್ಮಕ (deductive) ಮಾನಕಗಳಿಂದ ಮೌಲ್ಯಮಾಪನಗೊಂಡ ಒಂದು ರೀತಿಯ ಪರಿವರ್ತನೆ ಎಂದು ಪರಿಗಣಿಸಬಹುದು. ಇದು ಒಂದು ವಿಚಾರಕ್ಕೆ ಸಂಬಂಧಿಸಿದಂತೆ ಪರಸ್ಪರವಾಗಿ ವ್ಯಕ್ತಿಯ ಮನಸ್ಸಿನಲ್ಲಿ ಕಲ್ಪಿತವಾಗುವ ಮುಕ್ತ ಸಂಬಂಧಕ್ಕೆ (free association) ವ್ಯತಿರಿಕ್ತವಾಗಿದೆ. ನಿರ್ಣಯಗಳು ವಿಶಿಷ್ಟವಾಗಿ *'ನಂಬಿಕೆ-ರಚನೆಯ (belief-forming)'* ಸ್ವರೂಪದ್ದಾಗಿರುತ್ತವೆ. ಆದರೆ ಒಬ್ಬರು ಈಗಾಗಲೇ ನಂಬಿರುವ ಏನೋವೊಂದನ್ನು ನಿರ್ಣಯಿಸಬಹುದು, ಅಥವಾ ಒಬ್ಬರು ನಂಬದಿರುವ ಒಂದು ಸಂಗತಿಯಿಂದ ನಂಬದಿರುವ ಇನ್ನೊಂದು ಸಂಗತಿಯ ಬಗ್ಗೆ ನಿರ್ಣಯಕ್ಕೆ ಬರಬಹುದು. ಈ ಕಷ್ಟಕರವಾದ ಕಲ್ಪನೆಗಳನ್ನು ಇಲ್ಲಿ ವಿವರಿಸುವ ಬದಲು, ಕಲ್ಪನೆಯು ಸಾಕಷ್ಟು ಸ್ಪಷ್ಟವಾಗಿದೆ ಎಂದು ಭಾವಿಸಿ ನಿದರ್ಶನಗಳನ್ನು ಚರ್ಚಿಸಲು ಮುಂದುವರೆಯುತ್ತೇನೆ. ಆದಾಗ್ಯೂ, ಎರಡು ಅಂಶಗಳನ್ನು ಇಲ್ಲಿ ಆರಂಭದಲ್ಲಿಯೇ ಹೇಳುವುದು ಅವಶ್ಯಕವಾಗುತ್ತವೆ.

ಮೊದಲನೆಯದಾಗಿ, 'ಕಾರಣವಾದದ' ಕ್ರಿಯೆ ಮತ್ತು 'ನಿರ್ಣಯ'ಗಳೆರಡೂ *'ಪ್ರಕ್ರಿಯೆಗಳನ್ನು'* ಸೂಚಿಸುವಲ್ಲಿ ಉಪಯೋಗವಾಗುತ್ತವೆ ಮತ್ತು ಹಾಗೆಯೇ ಅವು ಅಮೂರ್ತ *'ವಾಸ್ತವಾಂಶಗಳನ್ನು'* ಸಹ ಸೂಚಿಸುತ್ತವೆ. ನೀವು ಮತ್ತು ನಾನು ಇಬ್ಬರೂ ಅದೇ ಪ್ರಮೇಯಗಳಿಂದ ಒಂದೇ ತೀರ್ಮಾನಕ್ಕೆ ಬಂದರೆ, ಅವುಗಳ ಅಮೂರ್ತ ಅರ್ಥಗಳ ಪರಿಭಾಷೆಯಲ್ಲಿ ಅಂದರೆ ನಾವು ಸ್ವೀಕಾರಾರ್ಹ ನಿರ್ಣಯದ (ಮತ್ತು ಕಾರಣವಾದದ ಕ್ರಿಯೆ) ಬಗ್ಗೆ ಮಾತನಾಡಬಹುದಾದ ಅರ್ಥಗಳಲ್ಲಿ, ನಾವು ಒಂದೇ ರೀತಿಯ ನಿರ್ಣಯವನ್ನು ಮಾಡುತ್ತೇವೆ, ಮತ್ತು ಅದೇ ಕಾರಣವಾದದ ಕ್ರಿಯೆಯಲ್ಲಿ ತೊಡಗಿರುತ್ತೇವೆ. ಆದರೆ ಚರ್ಚಿಸುತ್ತಿರುವ ನಿಜವಾದ ಮಾನಸಿಕ ಪ್ರಕ್ರಿಯೆಗಳು ಬಹುತೇಕ ಗುಣಾತ್ಮಕವಾಗಿ ಒಂದೇ ಆಗಿರುತ್ತವೆ. ನನ್ನ ಪರಿಭಾಷೆಯಲ್ಲಿ, ಅಮೂರ್ತ ಅರ್ಥದಲ್ಲಿ ಒಂದೇ ನಿರ್ಣಯದ ಎರಡು ನಿರ್ಣಯಾತ್ಮಕ *'ಸೂಚಕಗಳಿವೆ (tokening)'*. (ಯಾವುದೇ ವಾಕ್ಯದಲ್ಲಿ ಸೂಚಕವಿದೆ ಎಂದು ಪೂರ್ವಭಾವಿಸದಿದ್ದರೂ ಸಹ ಸಾಮಾನ್ಯವಾಗಿ ಒಂದು ಇದ್ದೆ ಇರುತ್ತದೆ; ಸೂಚಕಗಳನ್ನು ಅರ್ಥಕ್ಕೆ ಸಂಬಂಧಿಸಿದಂತೆ ವರ್ಗೀಕರಿಸಲಾಗಿರುತ್ತದೆ ಮತ್ತು ಅಮೂರ್ತವಾದ ವಾದದಲ್ಲಿ ಸರಳ *'ನಿರೂಪಣೆ'* ಗಳಾಗಿ ಸಹ ಕಲ್ಪಿಸಬಹುದು.)

ನಾವು ಒಂದೇ ವಾದದ ಎರಡು ಸೂಚಕಗಳಿವೆ ಎಂದು ಸಹ ಹೇಳಬಹುದು. ಹಾಗೆ ಹೇಳುವಾಗ 'ವಾದ'ವು ಸಹ 'ಕಾರಣವಾದ'ದಂತೆಯೇ ದ್ವಂದ್ವ ಉಪಯೋಗವನ್ನು ಹೊಂದಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು[14].

ಎರಡನೆಯದಾಗಿ, ವ್ಯಾವಹಾರಿಕ ಕಾರಣವಾದದ ಕ್ರಿಯೆಯು ವಿಶಾಲವಾಗಿ ಪ್ರತಿಪಾದನೆಯಾಗಿ ಇರುವುದರಲ್ಲಿ ಸೈದ್ಧಾಂತಿಕ ಕಾರಣವಾದದ ಕ್ರಿಯೆಯಂತಿದ್ದರೆ ಆಗ ಅದು ವ್ಯಾವಹಾರಿಕ ತೀರ್ಮಾನವಾಗಿರಬಹುದಾದರೂ, ಅದರ ಅಂತಿಮ ಅಂಶವು ಕ್ರಿಯೆಯೋ ಅಥವಾ ಉದ್ದೇಶವೋ ಆಗಿರುವುದಿಲ್ಲ. ಉದಾಹರಣೆಗೆ, ನಾನು ಈಗ ಒಬ್ಬ ಸ್ನೇಹಿತನ ಪರವಾಗಿ ಮಾತನಾಡಬೇಕು ಎಂಬುದು ತಕ್ಷಣವೇ ಆ ಕ್ರಿಯೆಯನ್ನು ಮಾಡುವುದರಲ್ಲಿ ಪರಿಣಮಿಸುತ್ತದೆ. ಅರಿಸ್ಟಾಟಲ್ ನ ತತ್ವಶಾಸ್ತ್ರದ ಬಗ್ಗೆ ಅವರ ಅರ್ಥೈಸುವಿಕೆಯನ್ನು ಅನುಸರಿಸಿ, ಆನ್ಸ್ಕೋಂಬ್ (Anscombe) ಅಂತಿಮದ ಅಂಶವನ್ನು ಕ್ರಿಯೆ ಎಂದು ಪರಿಗಣಿಸುತ್ತಾರೆ;[15] ಆದರೆ ಈ ದೃಷ್ಟಿಕೋನವು ಸ್ವೀಕಾರಾರ್ಹತೆ ಮತ್ತು ಸಮಂಜಸತೆಯ ಮಾನದಂಡಗಳನ್ನು ಹೊಂದಿದೆ ಎಂದು ಪರಿಗಣಿಸಬಹುದಾದರೂ, ಇವುಗಳನ್ನು ವಿವರಿಸಲು ವ್ಯಾವಹಾರಿಕ ಕಾರಣವಾದದ ಒಂದು ಪ್ರತಿಪಾದನೆಯ ಅರ್ಥವಿವರಣೆಯನ್ನು ಬೇಡುತ್ತದೆ, ಮತ್ತು ಕಾರ್ಯನಿರ್ವಹಿಸಲು ಈ ನಂತರದ ದೃಷ್ಟಿಕೋನವು ತಕ್ಕುದಾಗಿದೆ. ಹೇಗಿದ್ದರೂ, ನಾನು ಕೆಳಗೆ ಹೇಳುವುದರಲ್ಲಿ ಹೆಚ್ಚಿನವು (ಎಲ್ಲವೂ ಅಲ್ಲದಿದ್ದರೂ) 'ಅಂತಿಮ ಅಭಿವ್ಯಕ್ತಿಯಾಗಿ ಕ್ರಿಯೆ (ಮಾಡುವುದರಲ್ಲಿ)' ಎಂಬ ದೃಷ್ಟಿಕೋನದ ಒಂದು ಆವೃತ್ತಿಯಾಗಿ ಪುನಃ ವ್ಯಕ್ತಪಡಿಸಬಹುದಾಗಿದೆ.

## IV. ವ್ಯಾವಹಾರಿಕ ಕಾರಣವಾದದ ಮೌಲ್ಯಮಾಪನದ ಆಯಾಮಗಳು

ವ್ಯಾವಹಾರಿಕ ಕಾರಣವಾದದ ಮೌಲ್ಯಮಾಪನವನ್ನು ಕಾರಣವಾದದ ಆಧಾರದ ಮೇಲೆ ನಡೆಸಿದ ಕ್ರಿಯೆ (ಯಾವುದಾದರೂ ಇದ್ದರೆ) ಯಿಂದ ಪ್ರತ್ಯೇಕಿಸುವುದು ಮುಖ್ಯವಾಗಿದೆ. ಸಾಪೇಕ್ಷ ಒಂದು ಗುರಿಯ ಕ್ರಿಯೆಯ ಪರವಾಗಿ ನಾವು ಸಾಕಷ್ಟು ಸಮಂಜಸವಾಗಿ ಆಲೋಚಿಸಬಹುದು ಆದರೆ ಮತ್ತೊಂದು ಗುರಿಯನ್ನು ಗಮನಿಸದೆ ಹೋಗಬಹುದು, ಮತ್ತು ಆ ಕಾರಣದಿಂದ ಒಂದು (ಸೀಮಿತ) ಒಳ್ಳೆಯ ವ್ಯಾವಹಾರಿಕ ಕಾರಣವಾದದ ಮೇಲೆ ಆಧಾರಿತವಾಗಿದ್ದರೂ, ಸಕಾರಣವಾಗಿ ದೋಷಪೂರಿತವಾದ ಏನೋವೊಂದನ್ನು ಮಾಡಬಹುದು. ಉದಾಹರಣೆಗೆ ಕಾರಣವಾದದ ಕ್ರಿಯೆಯು ಹೆಚ್ಚು ಜಟಿಲವಾಗಿರುವಂತಹ ಸಂದರ್ಭದಲ್ಲಿ, ಕಾರಣವಾದದಲ್ಲಿ ನಾವು ಸಕಾರಣವಾಗಿ ತಪ್ಪಿಸಲು ಸಾಧ್ಯವಾಗದಂತಹ ಕೆಲವು ತಪ್ಪುಗಳನ್ನು ಸಹ ಮಾಡಬಹುದು; ಇದು, ದೋಷಯುಕ್ತ ಕಾರಣವಾದವನ್ನು ಆಧರಿಸಿದರೂ ಸಹ, ಸಂಭವನೀಯ ಮಾನದಂಡಗಳ ಆಧಾರದ ಮೇಲೆ ಒಂದು ಸಕಾರಣವನ್ನು ಹೊಂದಿದಂತ ಕ್ರಿಯೆಗೆ ಕಾರಣವಾಗಬಹುದು.

### *ವ್ಯಾವಹಾರಿಕ ಕಾರಣವಾದದ ಕೆಲವು ಮಾದರಿಗಳು*

ವ್ಯಾವಹಾರಿಕ ಕಾರಣವಾದದ ಕೆಲವು ಸಾಮಾನ್ಯ ಮಾದರಿಗಳನ್ನು ಗಮನದಲ್ಲಿಟ್ಟುಕೊಳ್ಳುವುದು ನೆರವಾಗುವುದು. ನನ್ನ ಪರಿಭಾಷೆಯಲ್ಲಿ ಇದನ್ನು ರೂಪುರೇಷೆ (schemata) ಎನ್ನುತ್ತೇನೆ. ಉಲ್ಲೇಖಕ್ಕಾಗಿ ಒಂದು ಸರಳ ರೀತಿಯ ಮೂಲಭೂತ ರೂಪುರೇಷೆಯನ್ನು ಹೊಂದುವುದು ಉಪಯುಕ್ತವಾಗಿರುತ್ತದೆ.[16] ಇದು ಮೂರು ಅಂಶಗಳನ್ನು ಹೊಂದಿದೆ:

1. ಒಂದು ಉದ್ದೇಶಪೂರ್ವಕ (ಸ್ಥೂಲವಾಗಿ, ಅಂತ್ಯ-ಅಭಿವ್ಯಕ್ತಿ) ಪ್ರಮೇಯ $G$ (ಉದಾ. (ನನಗೆ ಬೇಕು (ಅಗತ್ಯವಿದೆ, ಸಾಧಿಸಬೇಕು, ಈಡೇರಿಸುವ ಕರ್ತವ್ಯವಿದೆ) ಇಲ್ಲಿ $G$ ಒಂದು ಗುರಿಯಾಗಿದೆ);
2. ಒಂದು ಸಾಧನಭೂತ ಪ್ರಮೇಯ (ಉದಾ. $A$ -ಮಾಡುವಿಕೆ ($A$ - ing) $G$ ಅನ್ನು ಸಾಧಿಸುತ್ತದೆ);
3. ಒಂದು ವ್ಯಾವಹಾರಿಕ ತೀರ್ಮಾನ (ಉದಾ., ನಾನು $A$ ಮಾಡಬೇಕು).

“ಪ್ರಧಾನ (major)” ಪ್ರಮೇಯದಲ್ಲಿ ಅಪೇಕ್ಷೆ ಅಷ್ಟೇ ಉದ್ದೇಶವು ಸಹ ಕಾರಣವನ್ನು ಒದಗಿಸುತ್ತದೆ; ಮತ್ತು“ಕಿರು (minor)” ಪ್ರಮೇಯವು ಕೇವಲ ಸಾಧನಭೂತ ವಿಧಾನಗಳನ್ನು ಮಾತ್ರವಲ್ಲದೇ *‘ರಚನಾತ್ಮಕ’* ವಿಧಾನಗಳನ್ನು ಸೂಚಿಸಬಹುದು: ಸ್ವತಃ ಅದರದ್ದೇ ಆದ ಕಾರಣಕ್ಕೆ ಅತ್ಯಗತ್ಯವೆನಿಸುವ ಗುರಿ. ಉದಾಹರಣೆಗೆ, ಹಾಡುವುದು ಹಾಡುವ ಆನಂದಕ್ಕಾಗಿ. ವ್ಯಾವಹಾರಿಕ ಕಾರಣವಾದದ ಕೆಲವು ಪ್ರಮುಖ ಪ್ರಭೇದಗಳನ್ನು ಪರಿಗಣಿಸೋಣ.

ಒಂದು ಸಾಮಾನ್ಯ ಬಗೆಯ ವ್ಯಾವಹಾರಿಕ ಕಾರಣವಾದದಲ್ಲಿ ಪ್ರಧಾನ ಪ್ರಮೇಯವು, ಎಲ್ಲವನ್ನೂ ಪರಿಗಣಿಸಿ ನಾನು ಒಂದು ಆಹ್ವಾನವನ್ನು ಸ್ವೀಕರಿಸಲೇಬೇಕೆಂದಾದರೆ, ಅದು ಅತಿಮುಖ್ಯ ಅಗತ್ಯವನ್ನು ವ್ಯಕ್ತಪಡಿಸುತ್ತದೆ. ಅಂದರೆ ಆ ಸಮಯದಲ್ಲಿ ಪ್ರಸ್ತುತವಾದ ಪರಸ್ಪರ ವಿರೋಧಿಸುವ ಎಲ್ಲಾ ಗುರಿಗಳಲ್ಲಿ ಆ ಒಂದು ಅಗತ್ಯತೆ ಆದ್ಯತೆ ಪಡೆಯುವುದು, ಮತ್ತು ಕಿರು ಪ್ರಮೇಯ *A*-ಮಾಡುವಿಕೆಯು (ಉದಾಹರಣೆಗೆ ಮತ್ತೊಂದು ಪ್ರವಾಸವನ್ನು ಮಾಡುವುದು), ಅಗತ್ಯವನ್ನು ಪೂರೈಸಲು ಅವಶ್ಯಕವಾಗಿದೆ ಎಂದು ತಿಳಿಸುತ್ತದೆ. ಇದು *‘ಅಗತ್ಯ ನಿಯಮದ ರೂಪುರೇಷೆ (necessary condition schema)’* ಯ ಒಂದು ನಿದರ್ಶನವಾಗಿದೆ. ಅದು ಸಂಭವನೀಯವಾಗಿ ಸ್ವೀಕಾರಾರ್ಹ (ಔಪಚಾರಿಕವಾಗಿ ಅಲ್ಲದಿದ್ದರೂ) ವೆಂದು ಪರಿಗಣಿಸಲಾಗುತ್ತದೆ ಏಕೆಂದರೆ ಅದರ ತೀರ್ಮಾನವು ಸರಳವಾಗಿ ಎಲ್ಲವನ್ನೂ ಪರಿಗಣಿಸಿದ ನಂತರ, ಒಬ್ಬರು ತಮ್ಮ ಅಗತ್ಯವನ್ನು ನೆರವೇರಿಸಿಕೊಳ್ಳುವುದರೆಡೆಗೆ, ಎಲ್ಲವನ್ನೂ ಪರಿಗಣಿಸಿದ ನಂತರ, ಏನೋವೊಂದನ್ನು ಅಗತ್ಯವಾಗಿ ಮಾಡಬೇಕೆಂದು ಹೇಳುತ್ತದೆ - ಆದ್ದರಿಂದ ಒಬ್ಬರು ಎಲ್ಲವನ್ನೂ ಪರಿಗಣಿಸಿದ ನಂತರ, ನೆರವೇರಿಸಿಕೊಳ್ಳಲು ಏನೋವೊಂದನ್ನು ಮಾಡಲು ಪ್ರಯತ್ನಿಸಬೇಕು. (ಒಂದು ನಿಯಮವು ಬೇಡುವ ರೀತಿಯಲ್ಲಿ ಕ್ರಿಯೆಯನ್ನು ಪ್ರತಿನಿಧಿಸುವಂತಹ ರೂಪುರೇಷೆಗಳ ನಿಯಮವು, ಪ್ರಧಾನ ಪ್ರಮೇಯದಲ್ಲಿನ ನಿಯಮವು ಅಂತಹುದೇ ರೀತಿಯ ಅತಿಮುಖ್ಯ ಬೇಡಿಕೆಯನ್ನು ವ್ಯಕ್ತಪಡಿಸಿದರೆ ಆಗ ಅದು ಸಹ ಸ್ವೀಕಾರಾರ್ಹವಾಗಿರಬಹುದು).

ಅಂತಹ ಅಗತ್ಯ ನಿಯಮನ್ನು ಪ್ರತಿನಿಧಿಸದಿರುವಲ್ಲಿ ಸ್ವೀಕಾರಾರ್ಹವಾದ ರೂಪುರೇಷೆಯನ್ನು ಗುರುತಿಸುವುದು ಹೆಚ್ಚು ಕಷ್ಟಕರವಾಗಿದೆ. ಪ್ರಧಾನ ಪ್ರಮೇಯವು (ಪ್ರಮಾಣಕವಾಗಿ) ಅತಿಮುಖ್ಯ ಗುರಿಯನ್ನು ಮುಂದಿಡುತ್ತದೆ ಮತ್ತು ಕಿರು ಪ್ರಮೇಯವು ಅದಕ್ಕೆ *A* -ಮಾಡುವಿಕೆಯೇ *‘ಪರ್ಯಾಪ್ತ’* ವೆಂದು ಸೂಚಿಸುತ್ತದೆ ಎಂದು ಭಾವಿಸೋಣ. ಇದು ಒಂದು *‘ಪರ್ಯಾಪ್ತ ನಿಯಮದ ರೂಪುರೇಷೆ (sufficient condition schema)’* ಯನ್ನು ನೀಡುತ್ತದೆ. ಈ ಪ್ರಮೇಯಗಳಿಂದ *S, A* ಅನ್ನು ಮಾಡಬೇಕು ಎಂಬುದು ಎನಿಲ್ಲ. ಇಲ್ಲಿ ಸುಲಭವಾದ ಪರ್ಯಾಯವೊಂದನ್ನು ಪರಿಗಣಿಸುವುದು ಯೋಗ್ಯವಾಗಿರುತ್ತದೆ. *A*-ಮಾಡುವಿಕೆಗೆ *S* ಬಳಿ *‘ಏನೋ ಒಂದು ಕಾರಣ’* ವಿರುವುದರಿಂದ ಒಂದು ರೀತಿಯ ಸ್ಪಷ್ಟ ನಿರ್ಣಯಕ್ಕೆ ಬರಬಹುದು (ಕನಿಷ್ಠಪಕ್ಷ ಕಿರು (ಪ್ರಮೇಯ) ದಲ್ಲಿ *S* ನ ನಂಬಿಕೆಯು ಅಸಮಂಜಸವಾಗಿಲ್ಲದಿರುವಾಗ). ನಾನು ಅಂತಹ ನಿರ್ಣಯಗಳನ್ನು ವ್ಯಾವಹಾರಿಕ ಎಂದು ಕರೆಯುತ್ತೇನೆ. ಆದರೆ ಅವು ಸಾಮಾನ್ಯವಾಗಿ ಕ್ರಿಯೆಯನ್ನು ಉಂಟುಮಾಡುವಲ್ಲಿ ವಿಫಲವಾಗಬಹುದು. ವಾಸ್ತವವಾಗಿ, ಗುರಿಯನ್ನು ಸಾಧಿಸಲು *A*-ಮಾಡುವಿಕೆಗಿಂತ ಉತ್ತಮ, ಸ್ಪಷ್ಟವಾದ, ಪರ್ಯಾಯ ವಿಧಾನವಿದ್ದರೆ, ಆಗ ಸಹಜವಾಗಿ ನಾವು *A* ಮಾಡಬೇಕು ಎನ್ನುವುದನ್ನು ನಿರುಪಾಧಿಕವಾಗಿ ನಿರ್ಣಯಿಸುವುದು ಅಸಮಂಜಸವಾಗಿರುತ್ತದೆ.

ಮತ್ತೊಂದೆಡೆ, ಕಿರು ಪ್ರಮೇಯವು ಗುರಿಯನ್ನು ಸಾಧಿಸಲು *A*-ಮಾಡುವಿಕೆ ಅತ್ಯುತ್ತಮ ಮಾರ್ಗವೆಂದು ಹೇಳುತ್ತದೆ ಎಂದು ಭಾವಿಸೋಣ. ‘ಅತ್ಯಂತ ಸಮರ್ಥ’ ಕ್ಕಿಂತ ‘ಅತ್ಯುತ್ತಮ’ ಎಂಬುದು ತಕ್ಕಮಟ್ಟಿಗೆ ವ್ಯಾಪಕವಾಗಿ ವಿಶಾಲ ಅರ್ಥವನ್ನು ಹೊಂದಿದ್ದರೆ, ಆಗ ಎಲ್ಲವನ್ನು ಪರಿಗಣಿಸಿ, ಅದು ಸ್ಪಷ್ಟವಾಗಿ, *S A* ಅನ್ನು ಮಾಡಬೇಕು ಎಂದು ಸೂಚಿಸುತ್ತದೆ. ಏಕೆಂದರೆ ಒಟ್ಟಾರೆ ಅತ್ಯುತ್ತಮ ಗುರಿಯನ್ನು ಸಾಧಿಸಲು ಇದು ಒಟ್ಟಾರೆ ಅತ್ಯುತ್ತಮ ಮಾರ್ಗವಾಗಿದೆ. ಇಲ್ಲಿ ಕಾರಣವಾದವು *ಅತ್ಯುತ್ತಮತೆಯ ಮಾದರಿ (optimality pattern)’* ಎಂಬ ಎರಡನೇ ರೀತಿಯ ವ್ಯಾವಹಾರಿಕ ಕಾರಣವಾದವನ್ನು ಪ್ರದರ್ಶಿಸುತ್ತದೆ. ‘ಗುರಿಯು ವಸ್ತುನಿಷ್ಠವಾಗಿ ಅಥವಾ ವ್ಯಕ್ತಿನಿಷ್ಠವಾಗಿ

ಅತ್ಯುತ್ತಮವಾಗಿದೆಯೇ ಎಂಬುದರ ಮೇಲೆ, ಉದಾಹರಣೆಗೆ *S* ನ ಅಭಿಪ್ರಾಯದಲ್ಲಿ ಅದು "ನಿಜವಾಗಿಯೂ" ಉತ್ತಮವಾಗಿದೆಯೇ ಅಥವಾ ಕೇವಲ ಉತ್ತಮವಾಗಿದೆಯೇ ಎಂಬ ಆಧಾರದ ಮೇಲೆ ವ್ಯಾವಹಾರಿಕ ನಿರ್ಣಯವು ಕ್ರಿಯೆಗೆ ವಸ್ತುನಿಷ್ಠ ಅಥವಾ ವ್ಯಕ್ತಿನಿಷ್ಠ ಕಾರಣವನ್ನು ವ್ಯಕ್ತಪಡಿಸುತ್ತದೆ.

ಮೇಲೆ ವಿವರಿಸಿದಷ್ಟು ಬಲವಾದ ಅರ್ಥದಲ್ಲಿ ಪ್ರಧಾನ ಪ್ರಮೇಯವು ಒಂದು ಗುರಿಯನ್ನು ಅತಿಮುಖ್ಯವನ್ನಾಗಿ ಪ್ರತಿನಿಧಿಸದೇ ಇರುವ ಹೆಚ್ಚು ಸಾಮಾನ್ಯ ವ್ಯಾವಹಾರಿಕ ಕಾರಣವಾದದ ನಿದರ್ಶನಗಳಲ್ಲಿ, ಕಿರು ಪ್ರಮೇಯದಲ್ಲಿನ ಒಂದು ಅತ್ಯುತ್ತಮವಾದ ವಾದವೂ ಸಹ ಸ್ವೀಕಾರಾರ್ಹತೆಯ ಮಾನದಂಡವನ್ನು ಪೂರೈಸಲು ಸಾಕಾಗುವುದಿಲ್ಲ. ಏಕೆಂದರೆ ಈ ಸನ್ನಿವೇಶದಲ್ಲಿ ಪರಸ್ಪರ ವಿರೋಧಿಸುವ ಗುರಿಯಿರಬಹುದು ಮತ್ತು ಅದರ ಬೆಳಕಿನಲ್ಲಿ, ಎಲ್ಲಾ ವಿಷಯಗಳನ್ನು ಪರಿಗಣಿಸಿದ ನಂತರ, *A* ಅನ್ನು ಹೊರತುಪಡಿಸಿ *S* ಬೇರೆ ಇನ್ನೇನನ್ನಾದರೂ ಮಾಡುವುದು ಹೆಚ್ಚು ಸಕಾರಣ. ಗುರಿಗಳು ಅತಿಮುಖ್ಯ ಎಂಬ ವಾಸ್ತವಾಂಶವನ್ನು ಸಾಮಾನ್ಯವಾಗಿ ನಾವು ಮುಂದಿಟ್ಟರೂ ಅನೇಕವೇಳೆ ಹಾಗೆ ಮಾಡಲು ನಾವು ಜಾಗರೂಕರಾಗಿರುತ್ತೇವೆ ಎಂಬುದನ್ನು ಒಪ್ಪಿಕೊಳ್ಳಲಾಗಿದೆ. ಮತ್ತು ಆದ್ದರಿಂದ, ತಕ್ಕ ಮಟ್ಟಿಗೆ ನಿಖರವಾಗಿ ಒಂದು ಬಲವಾದ ತೀರ್ಮಾನ ಎಂದು ಸ್ಪಷ್ಟವಾಗಿ ತೋರುವುದನ್ನು ನಿರ್ಣಯಿಸಬಹುದು: ಅದನ್ನು ನಮ್ಮ ಗುರಿಯನ್ನು ಸಾಧಿಸಲು ಉತ್ತಮವಾದ ಕ್ರಿಯೆ ಎಂದು ನಮ್ಮ ಕಿರು ಪ್ರಮೇಯವು ಸೂಚಿಸುವುದರ ಪರವಾಗಿ ನಿರ್ಣಯಿಸಬಹುದು.

ವ್ಯಾವಹಾರಿಕ ಕಾರಣವಾದವು ಕೇವಲ ಸ್ಪಷ್ಟ ತೀರ್ಮಾನಗಳನ್ನು ಹೊಂದಿದ್ದರೆ, ಅದರ ಮೌಲ್ಯಮಾಪನವು ಒಂದು ರೀತಿಯಲ್ಲಿ ಸರಳವಾಗಿರುತ್ತಿತ್ತು. ಏಕೆಂದರೆ, ನಾವು ಬಳಸುವ ಪ್ರಮೇಯಗಳಿಂದ ಬಂದಂತಹ ತೀರ್ಮಾನಗಳು ಅನೇಕವೇಳೆ ಅವುಗಳನ್ನು ಅನುಸರಿಸಲಾಗದಷ್ಟು ದುರ್ಬಲವಾಗಿರುತ್ತವೆ. ಉದಾಹರಣೆಗೆ, ನಾವು ಒಬ್ಬ ವಿದ್ಯಾರ್ಥಿಗೆ ಒಂದು ಲೇಖನದ ಕುರಿತಂತೆ ಸಹಾಯ ಮಾಡಲು ಬಯಸುತ್ತೇವೆ ಮತ್ತು ಹಾಗೆ ಮಾಡಲು ತಡವಾಗಿ ಕೆಲಸ ಮಾಡಬೇಕು ಎಂಬಂತಹ ತೀರ್ಮಾನಗಳು. ಆದಾಗ್ಯೂ, ವ್ಯಾವಹಾರಿಕ ಸಮಸ್ಯೆಗಳ ವಾಸ್ತವಿಕ ಸಂದರ್ಭದಲ್ಲಿ, ನಾವು ಏನು ಮಾಡಬೇಕು ಎಂಬುದನ್ನು ನಿರ್ಧರಿಸಲು ಪ್ರಯತ್ನಿಸುತ್ತಿದ್ದೇವೆ ಮತ್ತು ಸಾಮಾನ್ಯವಾಗಿ ನಾವು ಆ ತಕ್ಷಣವೇ ಕ್ರಿಯಾಶೀಲರಾಗುವುದು ಸಹಜ ಎಂದೆನಿಸುವ ಒಂದು ರೀತಿಯ ನಿರ್ದಿಷ್ಟ ನಿರ್ದೇಶನವನ್ನು ನೀಡುವ ನಿರುಪಾಧಿಕ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಇಲ್ಲಿ ಸ್ವಾಭಾವಿಕವಾಗಿದೆ.

ಹಾಗಾಗಿ ಅನೇಕವೇಳೆ ನಮ್ಮ ಪ್ರಮೇಯಗಳು ನಮ್ಮ ತೀರ್ಮಾನವನ್ನು ಒಳಗೊಳ್ಳದಿದ್ದರೂ ಸಹ ನಾವು ಸ್ವಾಭಾವಿಕವಾಗಿ ವ್ಯಾವಹಾರಿಕ ಕಾರಣವಾದವನ್ನು ಸಮರ್ಥವಲ್ಲದ (unqualified) ತೀರ್ಮಾನದೊಂದಿಗೆ ಮುಕ್ತಾಯಗೊಳಿಸುತ್ತೇವೆ. ಹೀಗೆ, ಕಾರಣವಾದವನ್ನು ಮೌಲ್ಯಮಾಪನ ಮಾಡಲು ನಿಗಮನಾತ್ಮಕ ಮಾನದಂಡಗಳಿಗಿಂತ ಅನುಗಮನಾತ್ಮಕ - 'ನಿಗಮನಾತ್ಮಕವಲ್ಲದ' ಎಂಬ ವಿಶಾಲ ಅರ್ಥದಲ್ಲಿ – ಮಾನದಂಡಗಳು ಹೆಚ್ಚು ಸೂಕ್ತವಾಗಿವೆ. ಈ ನಿದರ್ಶನಗಳಲ್ಲಿ, ಒಂದು ಉತ್ತಮ ವ್ಯಾವಹಾರಿಕ ಕಾರಣವಾದದ ಮೂಲಭೂತ ಮಾನದಂಡವು ಅಸ್ಪಷ್ಟವಾಗಿದೆ. ಪ್ರಮೇಯಗಳಿಗೆ ಸಾಪೇಕ್ಷವಾಗಿ ತೀರ್ಮಾನದ ಸಕಾರಣತೆಯು, ನನರ್ಥದಲ್ಲಿ ದತ್ತ ಪ್ರಮೇಯಗಳಿದ್ದಲ್ಲಿ ತೀರ್ಮಾನವು ನಿಜವಾಗಿರುವ ಸಾಧ್ಯತೆಯು, ಒಂದರ್ಥದಲ್ಲಿ "ಸಕಾರಣವಾದ ನಿರ್ಣಯ (reasonable inference) " ಎಂದು ಸಾಮಾನ್ಯವಾಗಿ ಕರೆಯಲ್ಪಡುವುದವುಗಳಿಂದ ಬಂದಿರುವಂತದ್ದು ಎಂದು ಸೂಚಿಸುತ್ತದೆ.

ವ್ಯಾವಹಾರಿಕ ಕಾರಣವಾದದ ಮೌಲ್ಯಮಾಪನಕ್ಕೆ ಸಮಂಜಸತೆಯ ಸೂಕ್ತ ಕಲ್ಪನೆಯು ಮುಖ್ಯವಾಗಿದೆ. ಈ ಕಲ್ಪನೆಯು ಜ್ಞಾನದ ಪರಿಕಲ್ಪನೆಯಾಗಿ (epistemic concept) ಸಮರ್ಥನೆಗೆ ಸಂಬಂಧಿಸಿದೆ. *S* ವಿವೇಚನಾಶೀಲನಾಗಿದ್ದರೆ, ಸೂಕ್ತವಾಗಿ ತಿಳುವಳಿಕೆಯುಳ್ಳವನಾಗಿದ್ದರೆ, ಮತ್ತು ಪ್ರಮೇಯಗಳನ್ನು ಹೊರತುಪಡಿಸಿ

ಬೇರೆ ಯಾವುದರ ಮೇಲೂ ಆಧರಿತವಾಗಿರದಿದ್ದರೆ, ಆಗ *S* ತೀರ್ಮಾನಕ್ಕೆ ಕನಿಷ್ಠ ಸಮರ್ಥನೆಯನ್ನಾದರೂ ಹೊಂದಿರುತ್ತಾನೆ. ಸಮಂಜಸತೆಯು ಸಾಮಾನ್ಯವಾಗಿ ಉತ್ತಮ ವ್ಯಾವಹಾರಿಕ ಕಾರಣವಾದದ ಸೂಕ್ತ ಮಾನದಂಡವಾಗಿದೆ ಮತ್ತು ಅದು ಸಮರ್ಥನೆಯ ಕಲ್ಪನೆಯೊಂದಿಗೆ ಹೊಂದಿಕೆಯಾಗುತ್ತದೆ. ಈ ಅಂಶವನ್ನು ಪ್ರಮೇಯಗಳಿಗೆ ಸಾಪೇಕ್ಷವಾಗಿ ತೀರ್ಮಾನವು ಸಂಭವನೀಯವಾಗಿರುತ್ತದೆ ಎಂಬುದನ್ನು ಸೂಚಿಸುತ್ತದೆ ಎಂದು ಪರಿಗಣಿಸಬಹುದು; ಆದರೆ ನಾವು ಇಲ್ಲಿ ಸಾಮಾನ್ಯವಾಗಿ ಸಂಭವನೀಯತೆಗಳನ್ನು ನಿಯೋಜಿಸಬಹುದು ಎಂದು ಸೂಚಿಸುವಲ್ಲಿ 'ಸಂಭವನೀಯ' ಎಂಬ ಪದವು ತಪ್ಪು ಅರ್ಥ ನೀಡುತ್ತಿದೆ. ಹೆಚ್ಚೆಂದರೆ, ಪ್ರಮೇಯಗಳಿಗೆ ಸಾಪೇಕ್ಷವಾಗಿ, ತೀರ್ಮಾನವು ಸಂಭವನೀಯವಾಗಿ ಇಲ್ಲದಿರುವುದಕ್ಕಿಂತ ಇರುವ ಸಾಧ್ಯತೆ ಹೆಚ್ಚು ಇದೆ ಎಂದು ಹೇಳಲು ನಾವು ಸಮರ್ಥಿತರಾಗಿರುವ ಸಾಧ್ಯತೆಯಿದೆ; ಆದರೆ ಈ ಸೀಮಿತ ಸಮರ್ಥನೆ ಕೂಡ ಒಂದು ಸಮಂಜಸವಾದ ನಿರ್ಣಯದ ಕಲ್ಪನೆಯನ್ನು ಸ್ಪಷ್ಟವಾಗಿ ಒಳಗೊಳ್ಳುವುದಿಲ್ಲ.

ಸಮಂಜಸತೆಯ (reasonableness) ಕುರಿತು ಹೆಚ್ಚು ಹೇಳಬೇಕಿದೆ. ಪ್ರಮೇಯಗಳು ಕನಿಷ್ಠ ಪಕ್ಷ ಒಂದು ತೀರ್ಮಾನವನ್ನು ನಂಬುವುದು ಅದರ ನಿರಾಕರಣೆಯನ್ನು ನಂಬುವಷ್ಟೇ ಸಮಂಜಸವಾದುದು ಎಂಬುದನ್ನು ಸೂಚಿಸಬಹುದು (ಮತ್ತು ತೀರ್ಮಾನವನ್ನು ನಂಬುವುದು ಅಸಮಂಜಸವಲ್ಲ). ಈ ಮಾನದಂಡವನ್ನು ಪೂರೈಸುವ ಯಾವುದೇ ಮಾದರಿಯನ್ನು ನಾವು *'ಕನಿಷ್ಠತಮ ಸಮರ್ಪಕತೆಯ ಮಾದರಿ (mimimal adequacy pattern)'* ಎಂದು ಕರೆಯಬಹುದು. ಇದು ಸಾಕಷ್ಟು ಉದಾರವಾದ ಮಾನದಂಡವಾಗಿದೆ. ವ್ಯಾವಹಾರಿಕ ಕಾರಣವಾದವನ್ನು ಬೆಂಬಲಿಸುವಂತಹ ಯಾವುದೇ ವಾದವು ಈ ಮಾನದಂಡವನ್ನು ಮೀರದೇ ಕೇವಲ ಪೂರೈಸುತ್ತದೆಯೋ ಅದು ಸೀಮಿತವಾಗಿ ಸಮರ್ಪಕವಾಗಿದೆ. ಏಕೆಂದರೆ, ಅಂತಹ ಮಾದರಿಗಳು ತೀರ್ಮಾನದ ಮೇಲೆ ನಿರ್ಣಯ ತೆಗೆದುಕೊಳ್ಳುವುದನ್ನು ಕಾದಿರಿಸುವುದು ಹೆಚ್ಚು ಸಮಂಜಸ ಎನ್ನುವುದನ್ನು ಅನುಮತಿಸುತ್ತದೆ. ಎಲ್ಲಿ ಪ್ರಮೇಯವು ತೀರ್ಮಾನವನ್ನು ಮಾಡದೇ ಇರುವುದು ಅಸಮಂಜಸ ಎನ್ನುವ ಮಟ್ಟಿಗೆ ತೀರ್ಮಾನವನ್ನು ಬೆಂಬಲಿಸುತ್ತದೋ ಅಲ್ಲಿ ನಾವು *'ಪ್ರಮಾಣಿತ ಸಮರ್ಪಕತೆಯ ಮಾದರಿ (standard adequacy pattern)'* ಯ ಬಗ್ಗೆ ಮಾತನಾಡಬಹುದು. ಇಲ್ಲಿ, ಪ್ರಮೇಯಗಳಿಗೆ ಸಾಪೇಕ್ಷವಾಗಿ, ತೀರ್ಮಾನದ ಮೇಲೆ ನಿರ್ಣಯ ತೆಗೆದುಕೊಳ್ಳದಿರುವುದು ಇರುವುದು ತಪ್ಪಾಗುತ್ತದೆ; ಮತ್ತು ಪ್ರಮೇಯಗಳು ತೀರ್ಮಾನವನ್ನು ಒಳಗೊಳ್ಳುವುದಿಲ್ಲ ಎಂಬುದು ಸ್ಪಷ್ಟವಾಗಿದ್ದರೂ ಸಹ ತೀರ್ಮಾನಕ್ಕೆ ಬರಲು ಅವು ಸಾಕಷ್ಟು ಕಾರಣವನ್ನು ಖಂಡಿತವಾಗಿಯೂ ನೀಡುತ್ತವೆ.

ಇನ್ನೂ ಒಂದು ಹಂತವಿದೆ. ಒಂದು ವಾದವು ಪ್ರಮಾಣಿತ ಸಮರ್ಪಕತೆಯ (standard adequacy) ಬೇಡಿಕೆಗಳನ್ನು ಅಷ್ಟೇನೂ ಪೂರೈಸದು ಎಂದು ಭಾವಿಸೋಣ. ಅಂದರೆ, ಅದರ ಪ್ರಮೇಯಗಳು ದತ್ತವಾಗಿರುವುದರಿಂದ ತೀರ್ಮಾನಕ್ಕೆ ಬರದೇ ಇರುವುದು ಅಷ್ಟೇನೂ ಅಸಮಂಜಸವಲ್ಲ ಎಂಬ ಅರ್ಥದಲ್ಲಿ. ಅಂತಹದೊಂದು ವಾದವು *'ಸುಸಂಬದ್ಧ (cogent)'* ವಲ್ಲ ಎಂದು ನಾವು ಹೇಳಬಹುದು. ಮತ್ತೊಂದೆಡೆ, ಪ್ರಮಾಣಿತ ಸಮರ್ಪಕತೆಯ ಅಗತ್ಯಕ್ಕಿಂತ ಹೆಚ್ಚಿನ ಬೆಂಬಲವನ್ನು ಪ್ರಮೇಯಗಳು ನೀಡಿದಾಗ, ನಾವು *'ಸುಸಂಬದ್ಧತೆಯ ಮಾದರಿ (cogency pattern)'* ಯ ಬಗ್ಗೆ ಮಾತನಾಡಬಹುದು. ಅಂತಹ ಅನೇಕ ಮಾದರಿಗಳು ಅಗತ್ಯ ಮಾದರಿಗಳಾಗಿವೆ. ಆದರೆ ಸೈದ್ಧಾಂತಿಕ  ಕಾರಣವಾದದೊಂದಿಗೆ ಇರುವಂತೆ ಪ್ರತಿ ಸಮಂಜಸದ ಮಾದರಿಯು ಸ್ವೀಕಾರಾರ್ಹವಾಗಿರಬೇಕೇ ಎಂಬುದರ ಕುರಿತು ಭಿನ್ನಾಭಿಪ್ರಾಯವಿರುತ್ತದೆ. ಸಮಂಜಸ ವಾದದ ಪ್ರಮೇಯಗಳು ತೀರ್ಮಾನವನ್ನು ಒಳಗೊಳ್ಳಬೇಕಾಗಿಲ್ಲ, ಆದರೆ ಅದಕ್ಕೆ ಬಲವಾದ ಬೆಂಬಲವನ್ನು ಮಾತ್ರ ನೀಡಬೇಕು  ಎಂದು ನಂಬುವ ಪ್ರವೃತ್ತಿಯುಳ್ಳವನಾಗಿದ್ದೇನೆ. ಆದ್ದರಿಂದ, ಬಲವಾದ ಅನುಗಮನಾತ್ಮಕ ವಾದಗಳನ್ನು ಒಳಗೊಳ್ಳುವಂತೆ ನಾನು ಸಮಂಜಸದ ಮಾದರಿಯನ್ನು ನಿರೂಪಿಸುತ್ತೇನೆ. ಸಂದೇಹವಾದಿಗಳಲ್ಲದ ಹೆಚ್ಚಿನವರಿಗೆ, ಕನಿಷ್ಠಪಕ್ಷ

ಅವುಗಳ ತೀರ್ಮಾನಗಳನ್ನು ಅಗತ್ಯವಾಗಿಸದಂತಹ ಪ್ರಮೇಯಗಳ ಕೆಲವು ಉತ್ತಮ ವಾದಗಳಿವೆ; ಸಮಂಜಸ ವಾದಗಳು ಈ ರೀತಿಯ ವಾದಗಳಾಗಿರಬಹುದು.

ಸಮರ್ಪಕ (adequate) ಮತ್ತು ಸಮಂಜಸವಾದ (cogency) ಮಾದರಿಗಳ ಕೆಲವು ಉದಾಹರಣೆಗಳನ್ನು ಪರಿಗಣಿಸಿ. ಕೇವಲ ಕನಿಷ್ಠ ಬೆಂಬಲದ ಪ್ರಮೇಯಗಳ ಮೇಲೆ ಯಾವುದೇ ಪ್ರಮುಖ ನಿರ್ಣಯವನ್ನು ಆಧರಿಸಿರಲು ಯಾರೊಬ್ಬರೂ ಬಯಸುವುದಿಲ್ಲ ಎಂದು ಒಪ್ಪಿಕೊಳ್ಳುತ್ತಾ, ಸ್ನೇಹಿತನಿಗೆ ಎರಡು ಸಮಾನವಾದ ಆಕರ್ಷಕ ಸಣ್ಣ ಉಡುಗೊರೆಗಳ ನಡುವೆ ಒಬ್ಬನು ಒಂದನ್ನು ಆಯ್ಕೆ ಮಾಡುತ್ತಿದ್ದಾನೆ ಎಂದು ಭಾವಿಸೋಣ. ಇಲ್ಲಿ ತಕ್ಕಮಟ್ಟಿಗೆ ಒಂದು ಉಡುಗೊರೆಯು ಮೆಚ್ಚಿಸುವ ಸಾಧ್ಯತೆಯಿದ್ದು ಮತ್ತು ಅದು ಇನ್ನೊಂದಕ್ಕಿಂತ ಸ್ವಲ್ಪ ಹೆಚ್ಚು ಮೆಚ್ಚಿಸುವ ಸಾಧ್ಯತೆಯಿದೆ ಎಂದು ನಂಬುವುದು, ಆ ಉಡುಗೊರೆಯನ್ನೇ ನೀಡಬೇಕು ಎಂಬ ನಿರ್ಣಯವನ್ನು ಕನಿಷ್ಠವಾಗಿ ಸಮರ್ಥಿಸುತ್ತದೆ. ಈ ನಿರ್ಣಯವನ್ನು ತಡೆಹಿಡಿಯುವುದು ಸ್ವಲ್ಪ ಹೆಚ್ಚು ಯುಕ್ತವಾಗಿರಬಹುದು. ಆದರೆ ಹೆಚ್ಚು ಭರವಸೆಯುಳ್ಳ ಉಡುಗೊರೆಯ ಪರವಾಗಿ ಒಬ್ಬರು ತೀರ್ಮಾನಿಸಿದರೆ, ಅವರು ಕನಿಷ್ಠತಮ ಪ್ರಮಾಣದ ಸಮರ್ಪಕ ರೀತಿಯಲ್ಲಿ ವಿವೇಚಿಸುತ್ತಿದ್ದಾರೆ ಎಂದರ್ಥ. ನಾವು ಈ ಉದಾಹರಣೆಯನ್ನು ಹೆಚ್ಚು ಭರವಸೆಯುಳ್ಳ ಉಡುಗೊರೆಯು ಮೆಚ್ಚಿಸುವ ಸಾಧ್ಯತೆಯು ಹೆಚ್ಚಿದೆ ಎಂಬ ನಂಬಿಕೆಯನ್ನು ಒಬ್ಬರು ಹೊಂದಿರುವುದಾಗಿ ಬದಲಾಯಿಸಿದರೆ, ಸಮಂಜಸವಾದ ಮಾದರಿಯನ್ನಲ್ಲದಿದ್ದರೂ, ನಾವು ಪ್ರಮಾಣಿತ ಸಮರ್ಪಕತೆಯ ಮಾದರಿಯನ್ನಾದರೂ ಹೊಂದಿರುತ್ತೇವೆ. ಈಗ ಸಮಂಜಸವಾದ ಮಾದರಿಯನ್ನು ಪರಿಗಣಿಸಿ. ಉದಾಹರಣೆಗೆ ನನ್ನ ಮಕ್ಕಳನ್ನು ಸಂರಕ್ಷಿಸುವುದು ನನ್ನ ಗುರಿಯು (ಪ್ರಮಾಣಕವಾಗಿ) ಅತಿಮುಖ್ಯ  ಎಂದು ಭಾವಿಸೋಣ; ಹಾಗಿದ್ದಲ್ಲಿ ನನ್ನ ಗುರಿಯನ್ನು ಸಾಧಿಸಲು ಅಗತ್ಯ ಮತ್ತು ಸಮರ್ಪಕ ವಿಧಾನವನ್ನು ಸೂಚಿಸುವುದರ ಮೂಲಕ ನಿರ್ಣಾಯಕವಾಗಿ ಒಂದರ ಬದಲಾಗಿ ಮತ್ತೊಂದು ಪರ್ಯಾಯದ ಪರವಿರುವ ಒಂದು ಕಿರು ಪ್ರಮೇಯವನ್ನು ಹೊಂದಲು ನಾನು ಬಯಸುತ್ತೇನೆ. ನಾನು ಅಂತಹದೊಂದು ಪ್ರಮೇಯವನ್ನು ಕಂಡುಕೊಂಡರೆ, ನನ್ನ ವ್ಯಾವಹಾರಿಕ ವಾದವು ಸಮಂಜಸವಾಗಿರುತ್ತದೆ. ಆದಾಗ್ಯೂ, ಬಲವಂತದ ಆಯ್ಕೆಯ ಸನ್ನಿವೇಶಯಲ್ಲಿ, ಉದಾಹರಣೆಗೆ, ಅಪಹರಣದ ಸುಲಿಗೆ ಹಣವನ್ನು ಕೊಡುವ ಮತ್ತು ಪೋಲೀಸರನ್ನು ಕಳುಹಿಸುವ ನಡುವೆ, ಪ್ರಾಮುಖ್ಯತೆಯಲ್ಲಿನ ತೆಳು ವ್ಯತ್ಯಾಸದ ಆಧಾರದ  ಮೇಲೆ ತೀರ್ಮಾನ ಮಾಡಬೇಕಾಗಿಬರಬಹುದು. ಅಂದರೆ, ನಿಶ್ಚಿತವಾಗಿ ಆಗುವ ಆರ್ಥಿಕ ವಿನಾಶವನ್ನು ತಪ್ಪಿಸುವ ಮತ್ತು ತನ್ನ ಮಕ್ಕಳನ್ನು ಉತ್ತಮವಾಗಿ ಸಂರಕ್ಷಿಸುವ ಸಂಭವನೀಯತೆ ಕಡಮೆಯಿರುವುದರ ನಡುವೆ ತೀರ್ಮಾನಿಸಬೇಕಾಗಿಬರಬಹುದು. ಜಾಗರೂಕನಾಗಿ ವಿವೇಚಿಸುವನೊಬ್ಬನು  ಆಗ ಸ್ಪಷ್ಟವಾಗಿ ದುರ್ಬಲವೆಂದು ತೋರುವ ತೀರ್ಮಾನದ ಆಧಾರದ ಮೇಲೆ ನಿರ್ಣಯ ಮಾಡಬಹುದು. ಅಂದರೆ, ಪೋಲೀಸರನ್ನು ಕರೆಯಬೇಕು ಎಂಬ ಸ್ಪಷ್ಟ ತೀರ್ಮನ. ಇದು ವಾದದ ಸ್ವೀಕಾರಾರ್ಹತೆಯನ್ನು ಉಳಿಸಿಕೊಳ್ಳುತ್ತದೆ ಮತ್ತು ಒಂದು ದುರ್ಬಲ ತೀರ್ಮಾನಕ್ಕೆ ಸಮಂಜಸ  ವಾದವನ್ನು ನೀಡುತ್ತದೆ.

### *ವ್ಯಾವಹಾರಿಕ ಕಾರಣವಾದವನ್ನು ನಿರ್ಣಯಿಸುವ ಮಾನದಂಡ*

ಈವರೆಗೆ ಗಮನಿಸಲಾದ ವ್ಯಾವಹಾರಿಕ ಕಾರಣವಾದ  ಪ್ರಕಾರಗಳ ಬೆಳಕಿನಲ್ಲಿ, ವ್ಯಾವಹಾರಿಕ ಕಾರಣವಾದದ ವಿಶಾಲವಾದ ತಾರ್ಕಿಕ ಮೌಲ್ಯಮಾಪನವು ಕನಿಷ್ಠ ಅದಕ್ಕಿರಬಹುದಾದ ಐದು ಮಾದರಿಗಳನ್ನು ಮತ್ತು ಅನೇಕ ವಿಭಿನ್ನ ಉಪಮಾದರಿಗಳನ್ನು ಉದ್ದೇಶಿಸಬೇಕು. ಅಗತ್ಯತೆ, ಅತ್ಯುತ್ತಮತೆ, ಮತ್ತು ಸಮರ್ಪಕತೆಯ ಮಾದರಿಗಳು ಮತ್ತು ಎರಡು ರೀತಿಯ ಸಮಂಜಸದ ಮಾದರಿಗಳಿವೆ (ಸ್ವೀಕಾರಾರ್ಹ ಮತ್ತು ಅನುಗಮನಾತ್ಮಕವಾಗಿ ಪ್ರಬಲ). ಕೆಲವು ಸಾಮಾನ್ಯೀಕರಣಗಳನ್ನು ತಕ್ಷಣವೇ ಪಡೆಯಬಹುದು. ಎಲ್ಲಿ ಆಧಾರ ಹೊಂದಿರುವ ವಾದವು ಸ್ವೀಕಾರಾರ್ಹವಾಗಿರುತ್ತದೆಯೋ, ಅಲ್ಲಿ ವಿಶಾಲವಾದ ತಾರ್ಕಿಕ ಮೌಲ್ಯಮಾಪನವು ತಕ್ಕಮಟ್ಟಿಗೆ ಸರಳವಾಗಿರುತ್ತದೆ, ನೇರವಾಗಿರುತ್ತದೆ. ಅಗತ್ಯತೆಯ ಮಾದರಿಯ ವಿಷಯದಲ್ಲಿ ವ್ಯಾವಹಾರಿಕ ವಾದವು

ಸ್ವೀಕಾರಾರ್ಹವಾಗಿದೆ ಎಂದು ಹೇಳುವುದು ಸುಲಭವಾಗಬಹುದು. ಆದರೆ ವ್ಯಾವಹಾರಿಕ ಕಾರಣವಾದದ ತಾರ್ಕಿಕ ಮೌಲ್ಯಮಾಪನಕ್ಕೆ ಔಪಚಾರಿಕ ಮಾನದಂಡವೊಂದೇ ಸಾಕಾಗುವುದಿಲ್ಲ: ಇದು ಯಾವ ರೀತಿಯ ಗುರಿಗಳು ಮತ್ತು ವಿಧಾನಗಳು ವಿವಿಧ ಬಗೆಯ ವ್ಯಾವಹಾರಿಕ ನಿರ್ಣಯಗಳನ್ನು ಸೂಚಿಸುತ್ತದೆ ಎಂಬುದರ ಕುರಿತು ಕಷ್ಟಕರವಾದ ಪ್ರಶ್ನೆಗಳನ್ನು ಸಹ ಒಳಗೊಂಡಿರಬಹುದು. ಆಧಾರವಾಗಿರುವ ವಾದವನ್ನು ಸೂಕ್ತವಾಗಿ ಅನುಗಮನಾತ್ಮಕ ಎಂದು ನಿರ್ಣಯಿಸಲಾದ ವಿಷಯದಲ್ಲಿ, ತೀರ್ಮಾನವು ಪ್ರಮೇಯದ ಮೇಲೆ ಆಧಾರಿತವಾಗಿರುವ ಪ್ರಶ್ನೆಯೇ ಬರುವುದಿಲ್ಲ; ಇಲ್ಲಿಯ ತಾರ್ಕಿಕ ಪ್ರಶ್ನೆಯೆಂದರೆ, ಪ್ರಮೇಯಗಳು ತೀರ್ಮಾನಕ್ಕೆ ಎಷ್ಟು ಬೆಂಬಲವನ್ನು ನೀಡುತ್ತದೆ ಎಂಬುದು. ಇದಕ್ಕೆ ಉತ್ತರವು ವಿರಳವಾಗಿ ಪರಿಮಾಣಾತ್ಮಕವಾಗಿರುತ್ತದೆ, ಮತ್ತು ಅದನ್ನು ನಿರ್ಧರಿಸುವುದು ಸಹ ಕಷ್ಟವಾಗಬಹುದು.

ವ್ಯಾವಹಾರಿಕ ಕಾರಣವಾದದ ವಿಶಾಲವಾದ ತಾರ್ಕಿಕ ಮೌಲ್ಯಮಾಪನದ ಮಾನದಂಡವು (ಪ್ರತಿಪಾದನಾತ್ಮಕ) ಪ್ರಮೇಯ ಮತ್ತು ತೀರ್ಮಾನದ ಅಂಶಗಳ ನಡುವಿನ ಸಂಬಂಧಗಳಿಗೆ ಸಂಬಂಧಿಸಿದೆ ಮತ್ತು ಆದ್ದರಿಂದ ಕಾರಣವಾದದಲ್ಲಿ ವ್ಯಕ್ತಪಡಿಸಲಾದ ವ್ಯಾವಹಾರಿಕ *'ವಾದಗಳಿಗೆ'* ಅನ್ವಯಿಸುತ್ತದೆ. ಆದರೆ ವ್ಯಾವಹಾರಿಕ ಕಾರಣವಾದದ *'ಪ್ರಕ್ರಿಯೆಗಳಿಗೆ'* ಸಂಬಂಧಿಸಿದಂತೆ ತಾರ್ಕಿಕವಲ್ಲದ ಮೌಲ್ಯಮಾಪನದ ಮಾನದಂಡಗಳೂ ಇವೆ. ಸ್ಥೂಲವಾಗಿ ಇಲ್ಲಿರುವ ಸಮಸ್ಯೆಯೆಂದರೆ, *S* ನಂಬಿಕೆ ಹೊಂದಿರುವ ಪ್ರಮೇಯಗಳು *S* ಗೆ ಅವನ ತೀರ್ಮಾನವನ್ನು ನಂಬಲು ಎಷ್ಟು ಬೆಂಬಲವನ್ನು ನೀಡುತ್ತದೆ ಎಂಬುದಾಗಿದೆ. ಇಲ್ಲಿಯ ಕನಿಷ್ಠ ಅವಶ್ಯಕತೆಯೆಂದರೆ, ಪ್ರಮೇಯಗಳ ಮೇಲಿನ ನಂಬಿಕೆಗಳು, ಅದರ ನಿರಾಕರಣೆಯನ್ನು ನಂಬುವಂತೆಯೇ *S* ಗೆ ಅದರ ತೀರ್ಮಾನವನ್ನು ನಂಬುವುದು ಯುಕ್ತವೆಂದು ತೋರಬೇಕು. ಇಲ್ಲಿನ ಕಾಳಜಿಯು ಪ್ರಮೇಯಗಳ ಬಗ್ಗೆ ಇರುವ ಮನೋಭಾವನೆಗಳ (ಸಾಮಾನ್ಯವಾಗಿ ಅವುಗಳ ಬಗ್ಗೆ ನಂಬಿಕೆಗಳು) ಬೆಂಬಲವನ್ನು ತೀರ್ಮಾನಕ್ಕೆ ಬರುವ ಬೆಂಬಲವನ್ನಾಗಿ (ಮತ್ತೆ, ಸಾಮಾನ್ಯವಾಗಿ ನಂಬಿಕೆ) ಪರಿವರ್ತಿಸುವುದಾಗಿರುವುದರಿಂದ ಇಲ್ಲಿ ನಾವು ಒಂದು *'ನಿರ್ಣಯಾತ್ಮಕ ಮಾನದಂಡದ (inferential criterion)'* ಬಗ್ಗೆ ಮಾತನಾಡಬಹುದು. ಇದು ಜ್ಞಾನಕ್ಕೆ ಸಂಬಂಧಿಸಿದ ವಿಷಯವಾಗಿದೆ. ಒಟ್ಟಾರೆ ಕಾರಣವಾದದ ಪ್ರಕ್ರಿಯೆಯ ಮೌಲ್ಯಮಾಪನವು ನಿರ್ಣಯಾತ್ಮಕ ಮತ್ತು ತಾರ್ಕಿಕ ಮಾನದಂಡಗಳನ್ನು ಬಳಸುವುದನ್ನು ಬೇಡುತ್ತದೆ.

ಇಲ್ಲಿ ನನ್ನ ಮುಖ್ಯ ವಾದವನ್ನು ಈಗಾಗಲೇ ಸೂಚಿಸಲಾಗಿದೆ: ಒಬ್ಬರ ಕಾರಣವಾದಕ್ಕೆ ಆಧಾರವಾಗಿರುವ ವಾದವು ಎಷ್ಟೇ ಉತ್ತಮವಾಗಿರಲಿ, ಒಂದು ಸೂಕ್ತವಾದ ನಿರ್ಣಯಾತ್ಮಕ ಮಾನದಂಡವನ್ನು ಪೂರೈಸದಿದ್ದರೆ ಕಾರಣವಾದದ ಪ್ರಕ್ರಿಯೆಯು ಒಟ್ಟಾರೆಯಾಗಿ ಯಶಸ್ವಿಯಾಗುವುದಿಲ್ಲ. ಉದಾಹರಣೆಗೆ, ಅದು ಕೇವಲ ಕಾರಣ ನೀಡುವಿಕೆ ಆಗಿದ್ದರೆ ಮತ್ತು ಪ್ರಮೇಯಗಳನ್ನು ಹೊರತುಪಡಿಸಿ ಇನ್ಯಾವುದೋ ಒಂದು ಆಧಾರದ ಮೇಲೆ ಒಬ್ಬರು ಸರಿಯಾದ ತೀರ್ಮಾನವನ್ನು ಹೊಂದಿದ್ದರೆ, ಆಗ ಕಾರಣವಾದವು ಆ ತೀರ್ಮಾನದ ಬಗ್ಗೆ ತಿಳುವಳಿಕೆ ಅಥವಾ ಸಮರ್ಥಿತ ನಂಬಿಕೆಯನ್ನು ನೀಡುವಲ್ಲಿ ವಿಫಲವಾಗುತ್ತದೆ. ಇನ್ನೂ ಸಹ ಒಬ್ಬರು ಅದನ್ನು ತಿಳಿದಿರಬಹುದು ಅಥವಾ ಸಮರ್ಥನೀಯವಾಗಿ ನಂಬಬಹುದು, ಆದರೆ ವಿವೇಚಿಸುವುದರ ಮೂಲಕ ಅಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಒಬ್ಬರ ತೀರ್ಮಾನವು ಅದು ಪ್ರಮೇಯಗಳಿಂದ ಸ್ವೀಕಾರಾರ್ಹವಾಗಿ *'ನಿರ್ಣೇಯವಾಗಿರಬಹುದಾದರೂ'* ಸಹ, ಅವುಗಳ ಆಧಾರದ ಮೇಲೆ *'ನಿರ್ಣೇಯಾತ್ಮಕವಾಗಿರುವುದಿಲ್ಲ.'* ಆದ್ದರಿಂದ, ಪ್ರಮೇಯಗಳು ಅದಕ್ಕೆ(ತೀರ್ಮಾನಕ್ಕೆ) ಯಾವುದೇ ಬೆಂಬಲವನ್ನು ನೀಡಿದರೂ ಸಹ ಅದು ಅವುಗಳಿಂದ ಏನನ್ನೂ ಪಡೆಯುವುದಿಲ್ಲ. ಪ್ರಮೇಯಗಳನ್ನು *'ಆಧರಿಸದ'* ಸಂಜ್ಞಾನ ಅವುಗಳಿಂದ ಸಮರ್ಥಿಸಲ್ಪಡುವುದಿಲ್ಲ. (ನಾನು ಆಂಶಿಕ ತಳಹದಿಯ (partial basing) ಚರ್ಚೆಯನ್ನು ಬಿಟ್ಟುಬಿಡುತ್ತೇನೆ, ಈ ಸಂದರ್ಭದಲ್ಲಿ ಇತರ ಎಲ್ಲಾ ವಿಷಯಗಳು ಸಮಾನವಾಗಿರುವಾಗ,

ತೀರ್ಮಾನಕ್ಕೆ ಸಾಪೇಕ್ಷವಾಗಿ ಪ್ರಮೇಯಗಳ ಸಮರ್ಥನೀಯ ಶಕ್ತಿಯು ಆಧಾರವಾಗಿಸುವ ಮಟ್ಟಕ್ಕೆ "ಅನುಪಾತದಲ್ಲಿರುತ್ತದೆ".) ಇದು ನಮ್ಮನ್ನು ಜ್ಞಾನದ ಮಾನದಂಡದ ವಿಷಯದತ್ತ ಕರೆದೊಯ್ಯುತ್ತದೆ.

ಸಂಪೂರ್ಣವಾಗಿ ತಾರ್ಕಿಕ ಮೌಲ್ಯಮಾಪನದಂತೆಯೇ, ಕಾರಣವಾದದ ನಿರ್ಣಯಾತ್ಮಕ ಮೌಲ್ಯಮಾಪನವು ಅದರ ಪ್ರಮೇಯಗಳ ನಿಜವಾದ ಸತ್ಯ ಅಸತ್ಯತೆಯ ಬಗ್ಗೆ ನಿರ್ಲಕ್ಷ್ಯ ತೋರುತ್ತದೆಯಾದರೂ ಕರ್ತೃಗಳ ಅವುಗಳ ಸಮರ್ಥನೆಗೆ ನಿರ್ಲಕ್ಷ್ಯ ತೋರುವುದಿಲ್ಲ. ಕಾರಣವಾದದ ಒಟ್ಟಾರೆ ಮೌಲ್ಯಮಾಪನವು ಸತ್ಯ ಮತ್ತು ಅಸತ್ಯತೆಯ ಬಗ್ಗೆ ನಿರ್ಲಕ್ಷ್ಯ ಹೊಂದಿರುವುದಿಲ್ಲ; ಮತ್ತು ಈ ವಿಭಾಗದ ಉಳಿದ ಭಾಗವು ವ್ಯಾವಹಾರಿಕ ಕಾರಣವಾದದ ಘಟಕಗಳ ಸತ್ಯ ಅಸತ್ಯತೆಯ ನಡುವಿನ ಸಂಬಂಧಗಳು ಮತ್ತು ಅವುಗಳನ್ನು ನಂಬಲು *S* ನ ಸಮರ್ಥನೆ ಸೇರಿದಂತೆ, ಅದರ ಜ್ಞಾನದ (Epistemic) ಮೌಲ್ಯಮಾಪನವನ್ನು ಮುಖ್ಯವಾಗಿ ಚರ್ಚಿಸುತ್ತದೆ. ಕಾರಣವಾದದ ಜ್ಞಾನದ ಮೌಲ್ಯಮಾಪನವು ನಿರ್ಣಯಾತ್ಮಕ ಮೌಲ್ಯಮಾಪನವನ್ನು ಅತಿವ್ಯಾಪಿಸುತ್ತದೆ. ಏಕೆಂದರೆ ತೀರ್ಮಾನವನ್ನು ನಂಬಲು *S* ನ ಸಮರ್ಥನೆಯಲ್ಲಿನ ಒಂದು ಅಂಶವು ಈ ನಂಬಿಕೆಯು ಪ್ರಮೇಯಗಳೊಂದಿಗೆ ಹೊಂದಿರುವ ನಿರ್ಣಯಾತ್ಮಕ ಸಂಬಂಧವಾಗಿದೆ. ಆದರೆ ಜ್ಞಾನದ ಮೌಲ್ಯಮಾಪನದ ಇತರ ಹಲವು ಅಂಶಗಳೂ ಇವೆ.

ಮೊದಲು ಪ್ರಮೇಯಗಳನ್ನು ಪರಿಗಣಿಸಿ. ಅವುಗಳ ಮೌಲ್ಯಮಾಪನದ ಮೇಲೆ ಪರಿಣಾಮ ಬೀರುವ ಜಟಿಲ ಅಂಶಗಳಿವೆ. ಮೊದಲನೆಯದಾಗಿ, ಪ್ರಮೇಯಗಳನ್ನು ತಪ್ಪಾಗಿ ಗ್ರಹಿಸಿರಬಹುದಾದರೂ ವಾದವು ತನ್ನ ವ್ಯಾವಹಾರಿಕ ಗುಣವನ್ನು ಕಳೆದುಕೊಳ್ಳುವುದಿಲ್ಲ. ಮೇಲಾಗಿ ನಾವು ಕೆಲವು ತಪ್ಪು ಪ್ರತಿಪಾದನೆಗಳನ್ನು ಸಕಾರಣವಾಗಿ ನಂಬುವುದರಿಂದ, ಪ್ರಮೇಯದ ಅಸತ್ಯತೆಯು *S* ಸಮರ್ಥಿತವಾಗಿ ತೀರ್ಮಾನಕ್ಕೆ ಬರಲು ಅಡ್ಡಿ ಮಾಡುವುದಿಲ್ಲ. ನಾವು ಸ್ವೀಕಾರಾರ್ಹತೆಯ ಮಾನದಂಡವನ್ನು ಪೂರೈಸುವ ಮತ್ತು ನಿಜವಾದ ಪ್ರಮೇಯವನ್ನು ಹೊಂದಿರುವ ವ್ಯಾವಹಾರಿಕ ವಾದವನ್ನು *'ಸಮಂಜಸ (sound)'* ಎಂದು ಕರೆದರೆ, ಸಮಂಜಸವಲ್ಲದ ವ್ಯಾವಹಾರಿಕ ಕಾರಣವಾದವು ಅದೇನೇ ಇದ್ದರೂ ಅದರ ತೀರ್ಮಾನಕ್ಕೆ ಸಮರ್ಥನೆಯನ್ನು ನೀಡಬಹುದು ಎಂದು ನಾವು ಹೇಳಬಹುದು. ಅಂದರೆ ಕನಿಷ್ಠವಾಗಿಯಾದರೂ ಅದನ್ನು ನಂಬದೆ ಇರಲು ಸಮರ್ಥನೆ ನೀಡುವುದಕ್ಕಿಂತ ನಂಬಲು ಹೆಚ್ಚಿನ ಸಮರ್ಥನೆ ನೀಡುತ್ತದೆ ಎಂಬುದನ್ನು ತಕ್ಕಮಟ್ಟಿಗೆ ಅದು ಸೂಚಿಸುತ್ತದೆ. ಏಕೆಂದರೆ ಅವುಗಳು ತಪ್ಪಾಗಿದ್ದರೂ, ಪ್ರಮೇಯಗಳನ್ನು (ಮತ್ತು ತೀರ್ಮಾನವನ್ನು) ನಂಬಲು *S* ಗೆ ಅತ್ಯುತ್ತಮವಾದ ಆಧಾರಗಳಿರಬಹುದು. ವಾಸ್ತವವಾಗಿ, ಸ್ವೀಕಾರಾರ್ಹತೆಯ ಮಾನದಂಡವನ್ನು ಪೂರೈಸದ ವಾದವೂ ಸಹ ಸಮರ್ಪಕ ಮಾದರಿಯನ್ನು ಪ್ರತಿನಿಧಿಸಬಹುದು ಮತ್ತು ಅನುಗಮನಾತ್ಮಕವಾಗಿ ಬಲವಾಗಿರಬಹುದು. ಮೇಲಾಗಿ, ಒಂದು ವಾದವನ್ನು ಸ್ವೀಕಾರಾರ್ಹ ಎಂದು *'ಪರಿಗಣಿಸಲು'* ನಮ್ಮಲ್ಲಿರುವ ಸಾಕಷ್ಟು ಸಮರ್ಥನೆಯು (ಪ್ರಮೇಯದ ಸಮರ್ಥಿತ ನಂಬಿಕೆಗಳು ದತ್ತವಾಗಿದ್ದರೆ) ಅದರ ತೀರ್ಮಾನವನ್ನು ನಾವು ನಂಬುವುದನ್ನು ಸಮರ್ಥಿಸಬಹುದು. ಒಂದು ವ್ಯಾವಹಾರಿಕ ವಾದಕ್ಕೆ ಸಂಬಂಧಿಸಿದಂತೆ ಅಂತಹ ತಾರ್ಕಿಕ ದೋಷವು ಅಗತ್ಯವೆನಿಸುವ ಮಟ್ಟಿಗೆ ಸಮರ್ಥನೆಯನ್ನು (ಅಥವಾ ಕನಿಷ್ಠ ಪಕ್ಷ ಸಮರ್ಥನೆಯನ್ನು ಬೇಡದ) ಹೊಂದಿರುವಂತಹ ಅತ್ಯಂತ ಸೀಮಿತ ಉದಾಹರಣೆಗಳು ಮಾತ್ರ ಇರಬಹುದು. ಆದರೆ ಸ್ಪಷ್ಟವಾಗಿ ಕೆಲವು ಉದಾಹರಣೆಗಳಿವೆ. ನನ್ನ ಪ್ರಮೇಯಗಳು ನಿಜವಾಗಿದ್ದರೆ ಮತ್ತು ನಾನು ಅವುಗಳನ್ನು ಸಮರ್ಥನೀಯವಾಗಿ ನಂಬಿದರೆ, ಕೇವಲ ಸ್ವೀಕಾರಾರ್ಹತೆ ಇಲ್ಲದ ಒಂದು ತೀರಾ ಅಸ್ಪಷ್ಟವಾದ ಮೂಲವನ್ನು ಗಮನಿಸದೇ ಹೋದ ಕಾರಣದಿಂದಾಗಿ ನನ್ನ ವಾದವು ಸ್ವೀಕಾರಾರ್ಹವಾಗಿದೆ ಎಂದು ನಾನು ತಪ್ಪಾಗಿ ಭಾವಿಸಿದರೆ, ಬಹುಶಃ ನಾನು ಈ ಪ್ರಮೇಯಗಳ ಆಧಾರದ ಮೇಲೆ ತೀರ್ಮಾನವನ್ನು ಇನ್ನೂ ಸಮರ್ಥನೀಯವಾಗಿ - ನನಗೆ ಅದು ಖಚಿತವಾಗಿ ತಿಳಿಯದಿದ್ದರೂ - ನಂಬಬಹುದು.

ಹಾಗಾಗಿ, ವ್ಯಾವಹಾರಿಕ ಕಾರಣವಾದದ ಮೌಲ್ಯಮಾಪನಕ್ಕಾಗಿ ನಾವು ಮೂರು ಆಯಾಮಗಳನ್ನು ಹೊಂದಿದ್ದೇವೆ. ಮೊದಲನೆಯದು, ಅಮೂರ್ತ (ವಾದಾತ್ಮಕ) ಆಯಾಮವು ಒಳಗೊಂಡಿರುವ ವಾದಕ್ಕೆ

ಸಂಬಂಧಿಸಿದೆ. ಅದರ ಸ್ವೀಕಾರಾರ್ಹತೆ ಅಥವಾ ಅನುಗಮನಾತ್ಮಕ ಬಲದ ದೃಷ್ಟಿಯಿಂದ ಅದನ್ನು ತಾರ್ಕಿಕವಾಗಿ ನೋಡಲಾಗುತ್ತದೆ ಮತ್ತು ಅದರ ಪ್ರತಿಪಾದನೆಯ ಘಟಕಗಳ ಸತ್ಯ ಮತ್ತು ಅಸತ್ಯತೆಯ ವಿಷಯದಲ್ಲಿ ವಾಸ್ತವವಾಗಿ ನೋಡಲಾಗುತ್ತದೆ. ಎರಡನೆಯದು, ಮನೋವೈಜ್ಞಾನಿಕ ಮತ್ತು ಜ್ಞಾನದ ಮಾನದಂಡಗಳೆರಡರಿಂದಲೂ ನಿಯಂತ್ರಿಸಲ್ಪಡುವ ನಿರ್ಣಯಾತ್ಮಕ ಆಯಾಮವು ತೀರ್ಮಾನವನ್ನು ಪ್ರಮೇಯದಿಂದ ನಿರ್ಣಯಿಸಿದ ಮತ್ತು ಪ್ರಮೇಯಗಳ ಆಧಾರದ ಮೇಲೆ ಆ ತೀರ್ಮಾನವನ್ನು ನಂಬಿದ *S* ನ ಸಮರ್ಥನೆಗೆ ಸಂಬಂಧಿಸಿದೆ. ಸ್ಥೂಲವಾಗಿ, ಕಾರಣವಾದದ ಪ್ರಕ್ರಿಯೆಯು - ಪ್ರಮೇಯಗಳ ನಂಬಿಕೆಗಳು ತೀರ್ಮಾನದಲ್ಲಿನ ನಂಬಿಕೆಯಾಗಿ ಪರಿವರ್ತನೆ ಆಗುವ ಸಮರ್ಥನೆಯ ಮೂಲಕ - *S* ಗೆ ತೀರ್ಮಾನದ ಮೇಲಿನ ನಂಬಿಕೆಗೆ ಸಾಮಾನ್ಯವಾಗಿ ಎಷ್ಟು ಸಮರ್ಥನೆಯನ್ನು ನೀಡುತ್ತದೆ ಎಂಬುದು ಇಲ್ಲಿಯ ಪ್ರಶ್ನೆ. ಮೂರನೆಯದು, ಸಂಪೂರ್ಣವಾಗಿ ಜ್ಞಾನದ ಆಯಾಮ. ಇದು ಈ ಪ್ರತಿಯೊಂದು ಪ್ರತಿಪಾದನೆಗಳ ಬಗ್ಗೆ *S* ನ ನಂಬಿಕೆಗಳ ಒಟ್ಟಾರೆ ಸಮರ್ಥನೆಗೆ ಸಂಬಂಧಿಸಿದೆ (ಅಥವಾ, ಕಾರಣವಾದವು ಊಹಾತ್ಮಕವಾಗಿದ್ದರೆ, ಅವುಗಳನ್ನು ನಂಬಲು ಇರುವ ಸಮರ್ಥನೆ, ಸ್ಥೂಲವಾಗಿ ಈ ಸಮರ್ಥನೆಯನ್ನು ರೂಪಿಸುವ ಕಾರಣಗಳಿಗಾಗಿ *S* ಅವುಗಳನ್ನು ನಂಬಿದ್ದಾರೆ, ಅದರ ಪರಿಣಾಮವಾಗಿ ಹುಟ್ಟುವ ನಂಬಿಕೆಗಳನ್ನು ಸಮರ್ಥಿಸಲಾಗುವುದು ಎಂಬ ಅರ್ಥದಲ್ಲಿ). ಒಂದು ದತ್ತ ಕಾರಣವಾದದಲ್ಲಿ, ಈ ಆಯಾಮಗಳು ಒಂದರಿಂದ ಒಂದು ಸ್ವತಂತ್ರವಾಗಿ ಬದಲಾಗಬಹುದು. ಉದಾಹರಣೆಗೆ, ದೋಷವನ್ನು ಸಮರ್ಥಿಸಿಕೊಳ್ಳಲು ನೀಡಲಾಗುವ ಕೆಲವು ಕಾರಣಗಳು, ತಾರ್ಕಿಕವಾಗಿ ಮತ್ತು ವಾಸ್ತವವಾಗಿ ಸಮರ್ಪಕವಾಗಿರಬಹುದು, ಆದರೆ ನಿರ್ಣಯಾತ್ಮಕವಾಗಿ ಮತ್ತು ಜ್ಞಾನಕ್ಕೆ ಸಂಬಂಧಿಸಿದಂತೆ ದೋಷಪೂರಿತವಾಗಿರಬಹುದು.

ಒಬ್ಬರ ವ್ಯಾವಹಾರಿಕ ಕಾರಣವಾದವು ಎಲ್ಲಾ ಮೂರು ಆಯಾಮಗಳಲ್ಲಿ ಸಮರ್ಪಕವಾಗಿದೆ ಎಂದು ನಾವು ಆಶಿಸಬಹುದು. ಅದು ಸಮಂಜಸವಾಗಿದ್ದಾಗ (ಅಥವಾ ಕನಿಷ್ಠ ನಿಜವಾದ ಪ್ರಮೇಯಗಳನ್ನು ಹೊಂದಿದ್ದರೆ ಮತ್ತು ಅನುಗಮನಾತ್ಮಕವಾಗಿ ಬಲವಾಗಿದ್ದರೆ) ಮತ್ತು ಎಲ್ಲವನ್ನೂ ಪರಿಗಣಿಸಿ, *S* ಅದರ ಪ್ರಮೇಯವನ್ನು ಸಮರ್ಥಿತವಾಗಿ ನಂಬಿದರೆ ಮತ್ತು ಆ ಆಧಾರದ ಮೇಲೆ, ಅದರ ತೀರ್ಮಾನವನ್ನೂ ಸಮರ್ಥಿತವಾಗಿ ನಂಬಿದರೆ, ಆಗ ನಾನು ಅದನ್ನು *'ಸಮಂಜಸ'* ಎಂದು ಕರೆಯುತ್ತೇನೆ. ಸಮಂಜಸ ಕಾರಣವಾದದ ಈ ಒಟ್ಟಾರೆ ಕಲ್ಪನೆಯು ಸಾಕಷ್ಟು ಹುರುಳುಳ್ಳದ್ದಾಗಿದೆ. ಆದರೆ ಈ ಉದಾಹರಣೆಯಲ್ಲಿ ನಮ್ಮ ಪ್ರಮೇಯಗಳು ನಮ್ಮ ತೀರ್ಮಾನಕ್ಕೆ ಸಮಂಜಸವಾದ ಕಾರಣವನ್ನು ಒದಗಿಸುತ್ತವೆ ಮತ್ತು *'ಆ ಕಾರಣ'* ಕ್ಕೆ ನಾವು ಅದನ್ನು ಹೊಂದಿರುತ್ತೇವೆ ಎಂಬುದು ಆಧಾರವಿಲ್ಲದ ಕಲ್ಪನೆ. ಅಂತಹ ಕಾರಣವಾದವು ಒಂದು ರೀತಿಯ ಸಮಂಜಸವಾದ ಮಾದರಿಯನ್ನು ಪ್ರತಿನಿಧಿಸುತ್ತದೆ, *S* ಸಮರ್ಥನೀಯವಾಗಿ ನಂಬಿರುವ ನಿಜವಾದ ಪ್ರಮೇಯಗಳನ್ನು ಹೊಂದಿರುತ್ತದೆ, ಮತ್ತು ಆ ಪ್ರಮೇಯಗಳ ಆಧಾರದ ಮೇಲೆ *S* ತೀರ್ಮಾನವನ್ನು ನಂಬುವಂತಾಗುತ್ತದೆ. ತಾರ್ಕಿಕವಾಗಿ, ವಾಸ್ತವವಾಗಿ, ಜ್ಞಾನಕ್ಕೆ ಸಂಬಂಧಿಸಿದಂತೆ ಮತ್ತು ನಿರ್ಣಯಾತ್ಮಕವಾಗಿ ಈ ಕಾರಣವಾದವು ಸಮರ್ಪಕವಾಗಿದೆ. ಇದು ಎಲ್ಲಾ ನಾಲ್ಕು ರೀತಿಯ ಮಾನದಂಡಗಳನ್ನು ಪೂರೈಸುತ್ತದೆ ಮತ್ತು ಆದ್ದರಿಂದ ಮೌಲ್ಯಮಾಪನದ ಎಲ್ಲಾ ಮೂರು ಆಯಾಮಗಳಲ್ಲೂ ಸಮರ್ಪಕವಾಗಿರುತ್ತದೆ (ನಾಲ್ಕರ ಬದಲಾಗಿ ಮೂರು ಆಯಾಮಗಳು ಏಕೆಂದರೆ ಕಾರಣವಾದದ ವಿಷಯವನ್ನು ನಿರ್ಣಯಿಸಲು ಮುಖ್ಯವೆಂದು ಪರಿಗಣಿಸಲಾದ ಸತ್ಯ ಮತ್ತು ಅಸತ್ಯತೆಯನ್ನು ತಾರ್ಕಿಕ ಪ್ರವರ್ಗದ ಚೌಕಟ್ಟಿನಲ್ಲಿ ಇರಿಸಲಾಗಿದೆ). ಹಿಂದೆ ನಾನು ವಿವಿಧ ರೀತಿಯ ವ್ಯಾವಹಾರಿಕ ಕಾರಣವಾದವು ಅದು ಸಮಂಜಸವೆಂದು ನಿರೂಪಿಸಲು ಹೇಗೆ ತಾರ್ಕಿಕ ಅಗತ್ಯತೆಗಳ ಮತ್ತು ಕೆಲವು ನಿರ್ಣಯಾತ್ಮಕ ಅಗತ್ಯತೆಗಳ ಮಾನದಂಡವನ್ನು ಪೂರೈಸಬಹುದು ಎಂಬುದನ್ನು ಸೂಚಿಸಿದ್ದೆ. ಸತ್ಯದ (ವಾಸ್ತವದ) ಅಗತ್ಯ ಮಾನದಂಡಗಳ ಪೂರೈಸುವಿಕೆಯ ಬಗ್ಗೆ ಯಾವುದೇ ವಿಶೇಷ ಹೇಳಿಕೆಯ ಅಗತ್ಯವಿಲ್ಲದಿದ್ದರೂ ಪ್ರತಿಯೊಂದು ಪ್ರತಿಪಾದನೆಯ ಸಮರ್ಥನೀಯ ನಂಬಿಕೆಗೆಂದಿರುವ ಜ್ಞಾನದ ಮಾನದಂಡ ಅಗತ್ಯತೆಗಳ ಬಗ್ಗೆ ಹೇಳುವ ಅಗತ್ಯವಿದೆ.

ಮೊದಲು ಪ್ರಧಾನ ಪ್ರಮೇಯವನ್ನು ಪರಿಗಣಿಸಿ. ತಾರ್ಕಿಕ ಮಾನದಂಡವನ್ನು ಚರ್ಚಿಸುವಲ್ಲಿ ನಾವು ಒಂದು ಬಗೆಯ ಸಮನ್ವಯವನ್ನು ನೋಡಿದ್ದೇವೆ: ನಮ್ಮ ಪ್ರಮೇಯಗಳು (ವಿಷಯದಲ್ಲಿ), ವಿಶೇಷವಾಗಿ ನಮ್ಮ ಗುರಿಯನ್ನು ಅತಿಮುಖ್ಯವೆಂದು ಪ್ರತಿನಿಧಿಸುವಲ್ಲಿ ಬಲವಾಗಿದ್ದರೆ, ನಿರ್ದಿಷ್ಟವಾಗಿ ನಮ್ಮ ತೀರ್ಮಾನವು ಸ್ಪಷ್ಟ ತೀರ್ಮಾನವಾಗಿದ್ದರೆ, ಅದು ಸ್ವೀಕಾರಾರ್ಹವಾಗಿರುವ ಸಾಧ್ಯತೆಯು ಹೆಚ್ಚು; ಆದರೂ ಪ್ರಮೇಯಗಳು ಬಲವಾಗಿದ್ದಷ್ಟು, ನಾವು ಅವುಗಳನ್ನು ಸಮರ್ಥನೀಯವಾಗಿ ನಂಬುವ ಸಾಧ್ಯತೆ ಕಡಮೆ. ನನ್ನ ಪ್ರಧಾನ ಪ್ರಮೇಯವು ಕೇವಲ ನಾನು ಏನೋವೊಂದನ್ನು ಸಾಧಿಸಲು ಬಯಸುತ್ತೇನೆ, ಅಥವಾ ಸ್ಪಷ್ಟವಾಗಿ ಏನೋವೊಂದನ್ನು ಮಾಡಲು ನಾನು ಕಟ್ಟುಬಿದ್ದಿದ್ದೇನೆ ಎಂದು ಮಾತ್ರ ಹೇಳಿದರೆ, ಆಗ (ನಾನು ಸಾಮಾನ್ಯ ಸನ್ನಿವೇಶದಲ್ಲಿದ್ದರೆ) ನಾನು ಪ್ರಮೇಯವನ್ನು ನಂಬುವುದು ಅಸಮರ್ಥನೀಯ ಎಂದಾಗುವುದಿಲ್ಲ. ಅದೇನೇ ಇದ್ದರೂ, ಅನೇಕವೇಳೆ ನಮಗೆ ಏನೋ ಬೇಕು, ಅಥವಾ ಸ್ಪಷ್ಟವಾಗಿ ಒಂದು ನಿರ್ದಿಷ್ಟ ಕೆಲಸವನ್ನು ಮಾಡಲು ನಮಗೆ ಬಾಧ್ಯತೆ ಇದೆ ಎಂದು ನಂಬುವುದು ಸಮರ್ಥನೀಯ ಎನ್ನುವುದು ಸ್ಪಷ್ಟ. ಅನೇಕವೇಳೆ ಏನೋ ಒಂದು ವಿಷಯವು ಪ್ರಸ್ತುತ ನಮ್ಮ ಅತಿಮುಖ್ಯ ಗುರಿಯಾಗಿದೆ ಎಂಬುದನ್ನು ನಾವು ನಂಬುವುದು ಸಹ ಸಮರ್ಥನೀಯ. ಒಂದು ಪರದೆಯನ್ನು ಹೊತ್ತಿಸಲು ಮುಂದಾಗುತ್ತಿರುವ ಒಂದು ಮಗುವನ್ನು ನೋಡಿದರೆ, ಎಲ್ಲವನ್ನೂ ಪರಿಗಣಿಸಿದ ನಂತರ, ನಾನು ಮಧ್ಯಪ್ರವೇಶಿಸಬೇಕು ಎಂದು ನಂಬುವುದು ಸಾಮಾನ್ಯವಾಗಿ ಅತ್ಯಂತ ಸಮರ್ಥನೀಯವೇ ಸರಿ.

ಆದಾಗ್ಯೂ, ಅನೇಕ ಸಂದರ್ಭಗಳಲ್ಲಿ ನನ್ನ ಅತಿಮುಖ್ಯವಾದ ಗುರಿ ಏನು, ಅಥವಾ ಎಲ್ಲವನ್ನೂ ಪರಿಗಣಿಸಿ, ನನ್ನ ಅತಿಮುಖ್ಯವಾದ ಜವಾಬ್ದಾರಿ ಏನು ಎಂಬುದನ್ನು ನನಗೆ ಸುಲಭವಾಗಿ ಗ್ರಹಿಸಲು ಸಾಧ್ಯವಾಗಿದ್ದರೆ ಆಗ ನನಗೆ ವ್ಯಾವಹಾರಿಕ ಸಮಸ್ಯೆ ಇರುವುದಿಲ್ಲ. ನಾನು ಮನರಂಜನಾ ಸಾಧ್ಯತೆಗಳನ್ನು ಹೋಲಿಸುತ್ತಿರಬಹುದು, ಆಗ ನನಗೆ ಅತಿ ಮುಖ್ಯವಾಗಿ ಏನು ಬೇಕಾಗಿದೆ ಎಂಬುದು (ಅಥವಾ ನಾನು ಏನನ್ನು ಆನಂದಿಸುತ್ತೇನೋ ಅದರ ಬೆಳಕಿನಲ್ಲಿ ಏನನ್ನು ಬಯಸಬೇಕು) ಮುಖ್ಯ ಪ್ರಶ್ನೆಯಾಗಬಹುದು. ಕಡಲತೀರದಲ್ಲಿ ಒಂದು ವಾರ ಕಳೆಯುವುದು ವಿಶ್ರಾಂತಿದಾಯಕವಾಗಿರಬಹುದು, ಆದರೆ ಅದು ಸ್ವಾರಸ್ಯವಿಲ್ಲದಾಗಿರಬಹುದು; ನನ್ನ ನೆಚ್ಚಿನ ನಗರದಲ್ಲಿ ಒಂದು ವಾರ ಕಳೆಯುವುದು ತುಂಬಾ ದುಬಾರಿಯಾಗಿರಬಹುದು; ಮತ್ತು ಹೀಗೆ ಇತರ ಹಲವಾರು ಆಯ್ಕೆಗಳು ಇರಬಹುದು. ಎಲ್ಲವನ್ನೂ ಪರಿಗಣಿಸಿದಾಗ ಹಳ್ಳಿಗಾಡು ಉತ್ತಮ ಎಂದನಿಸಬಹುದು, ಆದರೆ ನಾನು ಇತರ ಸಾಧ್ಯತೆಗಳನ್ನು ನಿರ್ಲಕ್ಷಿಸುತ್ತಿರಬಹುದು, ಅಥವಾ ಕಲ್ಪಿತ ಸನ್ನಿವೇಶಕ್ಕೆ ಸ್ವತಃ ನನ್ನ ಸ್ವಂತ ಪ್ರತಿಕ್ರಿಯೆಗಳನ್ನು ತಪ್ಪಾಗಿ ಪರಿಗಣಿಸುತ್ತಿರಬಹುದು. ಕೇವಲ ಒಂದು ತಪ್ಪಿನ ಸಾಧ್ಯತೆಯು ಆ ಹಳ್ಳಿಗಾಡನ್ನು ಆಯ್ಕೆ ಮಾಡಲು ಇರುವ ನನ್ನ ಸಮರ್ಥನೆಯನ್ನು ದುರ್ಬಲಗೊಳಿಸುವುದಿಲ್ಲ. ಆದರೆ ಮುಖ್ಯ ಅಂಶವೆಂದರೆ ತಪ್ಪಿಸಬಹುದಾದ ಮತ್ತು ಸಮರ್ಥನೀಯವಲ್ಲದ ತಪ್ಪು ಇಲ್ಲಿ ಸಾಧ್ಯ.

ಈ ಅಂಶವನ್ನು ಕೆಲವು ಬಾಧ್ಯತೆಗಳಿಗೆ ಸಂಬಂಧಿಸಿದಂತೆಯೂ ವಿವರಿಸಬಹುದು. ಅಂದರೆ, ಒಂದು ಮಗುವಿಗಿಂತ ಇನ್ನೊಂದು ಮಗುವಿಗೆ, ಸಂಗಾತಿಯ ಬದಲು ಪೋಷಕರಿಗೆ ಹೆಚ್ಚು ಸಮಯ ಮತ್ತು ಸಂಪನ್ಮೂಲಗಳನ್ನು ವಿನಿಯೋಗಿಸಬೇಕು ಎಂಬ ಉದಾಹರಣೆಯಲ್ಲಿ ಇದ್ದಂತೆ. ಅಂತಹ ಸಂದರ್ಭಗಳಲ್ಲಿ ದಾರಿ ತಪ್ಪುವುದು ಸುಲಭವಾಗುವುದು ಮತ್ತು ಸಮರ್ಥನೆ ಇಲ್ಲದೆಯೇ ಕಾರಣವಾದದ ತೀರ್ಮಾನಕ್ಕೆ ಬರಬಹುದು. ಕೆಲವೊಮ್ಮೆ ನಾವು ನಮ್ಮ ಹಿಂದಿನ ನಿಲುವನ್ನು ಸರಿಪಡಿಸಿಕೊಂಡಂತೆಯೇ, ಅಥವಾ ಎಲ್ಲವನ್ನೂ ಪರಿಗಣಿಸಿದ ನಂತರ ನಾವು ಬಯಸಿದ್ದರ ಕುರಿತು ಒಂದು ಅಸಮರ್ಥನೀಯ ಅಭಿಪ್ರಾಯವನ್ನು ಹೊಂದಿದ್ದೆವು ಎಂಬುದನ್ನು ಪೂರ್ವಾವಲೋಕನದ ಮೂಲಕ ಒಪ್ಪಿಕೊಂಡಂತೆಯೇ, ನಾವು ಏನನ್ನು ಮಾಡಲು ಬಾಧ್ಯತೆ ಹೊಂದಿದ್ದೇವೆ ಎಂಬುದರ ಕುರಿತು ನಮ್ಮ ಅಭಿಪ್ರಾಯಗಳನ್ನು ಪರಿಷ್ಕರಿಸಬಹುದು.

ಒಂದು ಪ್ರಧಾನ ಪ್ರಮೇಯವನ್ನು ಹೊಂದುವುದರಲ್ಲಿ ಮಾಡಬಹುದಾದ ಮೂಲಭೂತ ರೀತಿಯ ತಪ್ಪುಗಳನ್ನು ಎತ್ತಿ ತೋರಿಸುವುದು ಒಂದು ವಿಷಯ; ಅವುಗಳನ್ನು ಹೊಂದಿರುವುದರ ಅಸಮರ್ಥನೀಯತೆಯ ಪ್ರಮಾಣಕ್ಕೆ (ಯಾವುದಾದರೂ ಇದ್ದರೆ) ಮಾನದಂಡವನ್ನು ನೀಡುವುದು ಮತ್ತೊಂದು ವಿಷಯ. ಇಲ್ಲಿ ಯಾವುದೇ ಒಂದು ಸರಳ ಸೂತ್ರ ಸಾಕಾಗದು, ಮತ್ತು ಅತ್ಯಗತ್ಯದಿಂದ ಹಿಡಿದು ಎಲ್ಲವೂ ಸ್ವೀಕಾರಾರ್ಹ ಎನ್ನುವವರೆಗೆ, ಎಲ್ಲಾ ರೀತಿಯ ಪ್ರಮಾಣಕಗಳಿಗೆ ಸಮರ್ಥನೆ ನೀಡಬಹುದು. ಸರಳವಾಗಿ ಹೇಳುವುದಾದರೆ, ಎಲ್ಲಿ ಒಂದು ವಿಷಯದಲ್ಲಿ ಹೆಚ್ಚಿನದನ್ನು ಕಳೆದುಕೊಳ್ಳುವ ಸಂಭವವಿರುವಂತಹ ಸಂದರ್ಭದಲ್ಲಿ, ಒಬ್ಬ ವಿವೇಚನಾಶೀಲ ವ್ಯಕ್ತಿಯು ಮಾಡುವಂತೆಯೇ, ನಾವು ಒಂದು ಉನ್ನತ ಪ್ರಮಾಣಕವನ್ನು ಪೂರೈಸಬೇಕು ಎಂದು ಒತ್ತಿ ಹೇಳುವ ಪ್ರವೃತ್ತಿ ಇದೆ. ಹುಟ್ಟುಹಬ್ಬದ ಕೇಕ್ ಅನ್ನು ಆಯ್ಕೆ ಮಾಡುವುದಕ್ಕಿಂತ ವೃತ್ತಿಜೀವನದ ಬದಲಾವಣೆಯನ್ನು ಮಾಡುವುದು ತುಂಬಾ ಮುಖ್ಯವಾದ ವಿಷಯವಾಗಿರುತ್ತದೆ. ಮೇಲಾಗಿ, ಪ್ರಧಾನ ಪ್ರಮೇಯವು ಗುರಿಯನ್ನು ಅತಿಮುಖ್ಯ ಎಂಬಂತೆ ಪ್ರತಿನಿಧಿಸದಿದ್ದರೆ, ತಪ್ಪಿನ ಅಪಾಯವು ಕಡಮೆಯಾಗುತ್ತದೆ. ಆದಾಗ್ಯೂ, ಒಂದು ವ್ಯಾವಹಾರಿಕವಾದ ಪ್ರಶ್ನೆಗೆ ಉತ್ತರಿಸುವ ಸಂದರ್ಭದಲ್ಲಿ ಕಾರಣವಾದವನ್ನು ಸಾಮಾನ್ಯವಾದ ರೀತಿಯಲ್ಲಿ ಕೈಗೊಂಡರೆ, ಆಗ ನಾನು ಬಳಸುವ ಪದಗಳು ಅಥವಾ ನಾನು ಕಾರಣವಾದವನ್ನು ವ್ಯಕ್ತಪಡಿಸಿದರೆ ಬಳಸಬಹುದಾದ ಪದಗಳು, ಅತಿಮುಖ್ಯ ಗುರಿಯನ್ನು ಸೂಚಿಸದೆ ಇದ್ದರೂ ಸಹ ಪದಗಳ ಮೂಲಕ ನಾನು ವ್ಯಕ್ತಪಡಿಸುವ ನಂಬಿಕೆಯು ಅಂತಹದೊಂದು ಗುರಿಯನ್ನು ಸೂಚಿಸಬಹುದು. ಎಲ್ಲವನ್ನೂ ಪರಿಗಣಿಸಿ, ಏನು ಮಾಡಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಪಡೆಯುವಲ್ಲಿ ಆಗುತ್ತಿರುವ ಕಷ್ಟವನ್ನು ವ್ಯಕ್ತಪಡಿಸಲು ಸರಳವಾಗಿ 'ನಾನು ಇಂದು ಹಿರಿಯ ಮಗುವಿನ ಸಮಸ್ಯೆಗಳ ಮೇಲೆ ಹೆಚ್ಚು ಗಮನ ಕೊಡುವುದು ಉತ್ತಮ ಎಂದು ನಂಬುತ್ತೇನೆ' ಎಂದು ಹೇಳಬಹುದು. ಆದರೆ ನನ್ನ ನಂಬಿಕೆಯು ನಾನು ಹಾಗೆ ಮಾಡುವುದು ನನ್ನ ಒಟ್ಟಾರೆ ಜವಾಬ್ದಾರಿ ಎಂದು ಸೂಚಿಸುವಂತದ್ದಾಗಿರಬಹುದು. ಹೀಗೆ ಇದು ನನ್ನ ಒಟ್ಟಾರೆ ಜವಾಬ್ದಾರಿ ಎಂಬ ಪ್ರತಿಪಾದನೆಯು ನನ್ನ ಪ್ರಧಾನ ಪ್ರಮೇಯವಾಗಿರಲು ಅರ್ಹತೆಯನ್ನು ಹೊಂದಿದೆ. ವ್ಯಾವಹಾರಿಕ ಕಾರಣವಾದವನ್ನು ವ್ಯಕ್ತಪಡಿಸುವಲ್ಲಿ 'ನನಗೆ ಬೇಕು'(I want), 'ನನ್ನ ಗುರಿ (my aim) ' ಮತ್ತು 'ನಾನು ನಿಜವಾಗಿಯೂ ಮಾಡಬೇಕು (I should)' ಎಂಬಂತಹ ಅಭಿವ್ಯಕ್ತಿಗಳ ಬಳಕೆಗೆ ಇದೇ ರೀತಿಯ ಅಂಶಗಳು ಅನ್ವಯಿಸುತ್ತವೆ. ಅನೇಕವೇಳೆ, ಅವುಗಳ ಸಾಮಾನ್ಯವಾದ ಮೃದು ಸ್ವರೂಪದ ಸ್ವರವು ಅವುಗಳ ಉದ್ದೇಶಿತ ವಿಷಯದಲ್ಲಿರುವ ನಿರಪೇಕ್ಷತೆಯನ್ನು (absoluteness) ಮರೆಮಾಡಬಹುದು.

ಗುರಿಯನ್ನು ತಲುಪಲು *A*-ಮಾಡುವಿಕೆ(ಕ್ರಿಯೆ)ಯು ಅಗತ್ಯವೆಂದು ಸೂಚಿಸುವ ಪ್ರಮೇಯವು, ಕಿರು ಪ್ರಮೇಯಕ್ಕೆ *S* ನ ಸಮರ್ಥನೆಯನ್ನು ಮೌಲ್ಯಮಾಪನ ಮಾಡುವ ಕಾರ್ಯವನ್ನು ಹೆಚ್ಚು ಸರಳವಾಗಿಸುತ್ತದೆ. ಹಾಗಿದ್ದಲ್ಲಿ ಕೆಲವು ಸಾಧನಭೂತ ಅಥವಾ ಅವಯವವಾಗಿರುವ ಸಂಬಂಧವನ್ನು ಸಮರ್ಥನೆಯನ್ನಾಗಿ *S* ಪರಿಗಣಿಸುವುದನ್ನು ಆಧಾರವಾಗಿ ಪರಿಗಣಿಸಬಹುದೇ ಎಂಬುದೇ ಪ್ರಶ್ನೆಯಾಗುತ್ತದೆ. ಆದಾಗ್ಯೂ, ನಮ್ಮ ಗುರಿಯನ್ನು ಸಾಧಿಸಲು ಅಗತ್ಯ ನಿಯಮಗಳೆಂದು ಪರಿಗಣಿಸದ, ಆದರೆ ಈ ಗುರಿಯನ್ನು ಸಾಧಿಸಲು ನಮಗೆ ಇರುವ ವಿಶ್ವಾಸಾರ್ಹ ಅಥವಾ ಒಳ್ಳೆಯ ಅಥವಾ ಸಮರ್ಪಕವಾದ ಮಾರ್ಗ ಎಂದು ಮಾತ್ರ ಪರಿಗಣಿಸುವ ಕಾರ್ಯಗಳ ಪರವಾಗಿ ತೀರ್ಮಾನಿಸುವ ಮೂಲಕ ಸಾಮಾನ್ಯವಾಗಿ ನಾವು ನಮ್ಮ ವ್ಯಾವಹಾರಿಕ ಕಾರಣವಾದವನ್ನು ಅಂತ್ಯಕ್ಕೆ ತರುತ್ತೇವೆ. ನಾವು ಬಳಸುವ ವಿಧಾನಗಳನ್ನು ಗುರಿಯನ್ನು ಸಾಧಿಸಲು ಅಗತ್ಯವಾದ ವಿಧಾನಗಳೆಂದು ತೆಗೆದುಕೊಳ್ಳದ ಎರಡನೇ ಉದಾಹರಣೆಯಲ್ಲಿ ಕನಿಷ್ಠ ಮೂರು ಮಾನದಂಡಗಳು ಇವೆ. ಅವು ಪ್ರಧಾನ ಪ್ರಮೇಯಕ್ಕೆ ಉಲ್ಲೇಖಿಸಿದ ಉದಾಹರಣೆಗಳಿಗೆ ಸಂವಾದಿಯಾಗಿವೆ: ನಾವು ಕ್ರಿಯೆಯ ಪ್ರಸ್ತುತ ಲಕ್ಷಣವೊಂದನ್ನು, ಉದಾಹರಣೆಗೆ ಅದರ ಅಹಿತಕರತೆಯನ್ನು ಕಡೆಗಣಿಸಬಹುದು; ಅದರ ಒಂದು ಅಥವಾ ಹೆಚ್ಚಿನ ಸಂಬಂಧಿತ ಪರಿಣಾಮಗಳನ್ನು ನೋಡಲು ನಾವು ವಿಫಲರಾಗಬಹುದು. ಉದಾಹರಣೆಗೆ, ಅದು ನಮ್ಮ ಇನ್ನೊಂದು

ಗುರಿಯನ್ನು ಸಾಧಿಸುವ ಅವಕಾಶವನ್ನು ತೆಗೆದುಹಾಕಬಹುದು; ಮತ್ತು ಪರ್ಯಾಲೋಚನೆಯ ಆಧಾರದ ಮೇಲೆ, ನಾವು *'ಬಯಸಬಹುದಾದ'* ಯಾವುದೋ ಒಂದರ ಪರಿಣಾಮವನ್ನು ನಾವು ಕಡೆಗಣಿಸುವ ಸಾಧ್ಯತೆ ಇದೆ. ಇಲ್ಲಿನ ಸಾಮಾನ್ಯ ಅಂಶವೆಂದರೆ, ಎಲ್ಲಿ ಗುರಿಯನ್ನು ಮುಟ್ಟಲು ಅಗತ್ಯವೆಂದು ಆ ಕ್ರಿಯೆಯನ್ನು *S* ಪರಿಗಣಿಸುವುದಿಲ್ಲವೋ, ಮತ್ತು ನಿರ್ದಿಷ್ಟವಾಗಿ *S* ಅದು ಅಗತ್ಯವಿಲ್ಲ ಎಂದು ನಂಬುತ್ತಾರೆಯೋ, ಅದರ ಸೂಕ್ತತೆಗೆ ಸಂಬಂಧಿಸಿದ ಪ್ರಶ್ನೆಯು ತುಲನಾತ್ಮಕವಾಗಿರುತ್ತದೆ. *S* ವಾಸ್ತವವಾಗಿ ಹೋಲಿಕೆ ಮಾಡುತ್ತಾರೋ ಅಥವಾ ಇಲ್ಲವೋ ಇದು ನಿಜ. ಹೀಗೆ, ಮಾಡುವ ಅಥವಾ ಬಿಡುವ ದೋಷಗಳಿಂದ, ಕ್ರಿಯೆಯು ಗುರಿಯನ್ನು ಸಾಧಿಸಲು ಉತ್ತಮ ಮಾರ್ಗವಾಗಿದೆ ಎಂದು *S* ಸಮರ್ಥನೆ ಇಲ್ಲದೆ ನಂಬಬಹುದಾದ ಕಾರಣದಿಂದಾಗಿ ಕಿರು ಪ್ರಮೇಯವನ್ನು ನಂಬುವಲ್ಲಿ ಸಮರ್ಥನೀಯವಾಗಿರಲು ವಿಫಲವಾಗಬಹುದು.

## V. ವ್ಯಾವಹಾರಿಕ ಕಾರಣ ಮತ್ತು ವ್ಯಾವಹಾರಿಕ ಕಾರಣವಾದದ ಸಾರಭೂತ ತತ್ವಗಳ ಸಮುಚ್ಛಯ

ಅನೇಕ ತತ್ವಶಾಸ್ತ್ರಜ್ಞರು ಕಾರಣಗಳು ಮತ್ತು ಕಾರಣವಾದವನ್ನು ನಿಯಂತ್ರಿಸುವ ಮಾನದಂಡಗಳನ್ನು ಪ್ರಸ್ತಾಪಿಸಿದ್ದಾರೆ. ಇವುಗಳಲ್ಲಿ ಈಗಷ್ಟೇ ಪರಿಗಣಿಸಲಾದ ವ್ಯಾವಹಾರಿಕ ಕಾರಣವಾದದ ಎಲ್ಲಾ ಆಯಾಮಗಳನ್ನು ಪ್ರಭಾವಿಸುವ ಕೆಲವನ್ನು ಆದರೆ ಮುಖ್ಯವಾಗಿ ನಿರ್ಣಯಾತ್ಮಕ ಮತ್ತು ಜ್ಞಾನದ ಆಯಾಮಗಳನ್ನು ಪರಿಗಣಿಸಲು ನಾನು ಬಯಸುತ್ತೇನೆ. ನಾನು ಮಾನದಂಡಗಳನ್ನು ಮುಖ್ಯವಾಗಿ ಕಾರಣವಾದವನ್ನು ಸಾರಭೂತವಾಗಿ ಉಲ್ಲೇಖಿಸದ ತತ್ವಗಳಾಗಿ ಸೂತ್ರೀಕರಿಸುತ್ತೇನೆ. ಏಕೆಂದರೆ ನಂಬಿಕೆಗಳ (ಅಥವಾ ನಿರ್ಣಯಗಳ) ಒಂದು ಸಮುಚ್ಛಯ ಮತ್ತು ಇನ್ನೊಂದು ಸಮುಚ್ಛಯದ ನಡುವಿನ ಪ್ರಮಾಣಕ (ಉದಾ., ಸಾಕ್ಷ್ಯದ) ಸಂಬಂಧವು ಮೊದಲ ಸಮುಚ್ಛಯದ ವಿಷಯದಿಂದ ಎರಡನೆಯ ಸಮುಚ್ಛಯದ ವಿಷಯಕ್ಕೆ ಬರುವ *'ಕಾರಣವಾದದ'* ನಡುವಿನ ವ್ಯತ್ಯಾಸದಿಂದ ಪ್ರಭಾವಿತವಾಗುವುದಿಲ್ಲ. ಮತ್ತೊಂದೆಡೆ, ಮೊದಲ ಸಮುಚ್ಛಯದ ಆಧಾರದ ಮೇಲೆ ಎರಡನೇ ಸಮುಚ್ಛಯದ ನಂಬಿಕೆಗಳನ್ನು (ಅಥವಾ ನಿರ್ಣಯಗಳನ್ನು) *'ಹೊಂದುವುದರಿಂದ'* ಪ್ರಭಾವಿತವಾಗುವುದಿಲ್ಲ. ಒಂದು ನಂಬಿಕೆಯಿಂದ ಎರಡನೆಯ ನಂಬಿಕೆಯನ್ನು ವಿವೇಚಿಸುವುದು, ಉದಾಹರಣೆಗೆ, ಮೊದಲನೆಯ ನಂಬಿಕೆಯ ಆಧಾರದ ಮೇಲೆ ಎರಡನೆಯದನ್ನು ಹೊಂದುವಲ್ಲಿ ಅದು ಸಮರ್ಥನೆಯ ಷರತ್ತುಗಳನ್ನು ಪೂರೈಸಿದರೆ ಮಾತ್ರ ಅದು ಎರಡನೆಯ ನಂಬಿಕೆಯನ್ನು ಹೊಂದಲು ಸಮರ್ಥನೆಯನ್ನು ನೀಡುತ್ತದೆ.

ವ್ಯಾವಹಾರಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇಲ್ಲಿ ನನ್ನ ಮುಖ್ಯ ಅಂಶವೆಂದರೆ, ಒಂದು ವ್ಯಾವಹಾರಿಕ ಕಾರಣವು ಒಬ್ಬರು *A* ಅನ್ನು ಮಾಡಬೇಕು ಎಂಬುದನ್ನು ನಂಬುವುದನ್ನು ಸಮರ್ಥಿಸಿದರೆ, ಹಾಗೆ ಮಾಡುವುದು ಕಾರಣದ ಆಧಾರದ ಮೇಲೆ ಒಬ್ಬರು ಆ ನಂಬಿಕೆಯನ್ನು ಸುಮ್ಮನೆ ಹೊಂದುವುದಾಗಲಿ - ಆ ಮೂಲಕ *'ಒಂದು ಕಾರಣಕ್ಕೆ ಒಂದು ನಂಬಿಕೆ'* ಯನ್ನು ಹೊಂದುವುದು - ಅಥವಾ ಆ ನಂಬಿಕೆಗೆ ಕಾರಣವನ್ನು ವ್ಯಕ್ತಪಡಿಸುವ ಪ್ರತಿಪಾದನೆಯ ಆಧಾರದ ಮೇಲೆ ವ್ಯಾವಹಾರಿಕ ಕಾರಣವಾದದಲ್ಲಿ ತೊಡಗಿರುವುದಾಗಲಿ – ಆ ಮೂಲಕ ವಾದದ ನಿರ್ಣಯಾತ್ಮಕ ಪ್ರಕ್ರಿಯೆ (ಒಂದು ನಿರ್ಣಯಾತ್ಮಕ ಸೂಚನೆ) ಯ ಆಧಾರದ ಮೇಲೆ *'ಸಕಾರಣವಾದ ನಂಬಿಕೆ'*ಯನ್ನು ಹೊಂದುವುದು. ಒಂದು ನಂಬಿಕೆಯನ್ನು (ಅಥವಾ ವ್ಯಾವಹಾರಿಕ ನಿರ್ಣಯ), ನಾವು ನಿರ್ಣಯಾತ್ಮಕ ಪ್ರಕ್ರಿಯೆಯ ಮೂಲಕ ಹೊಂದಿದ್ದರೂ ಅಥವಾ ಸಾಕ್ಷ್ಯದ ಬಲದಿಂದ ಪ್ರಚೋದಿಸಲ್ಪಟ್ಟು, ನೇರವಾಗಿ ಹೊಂದಿದ್ದರೂ ಅದು ಒಂದೇ ಅಡಿಪಾಯವನ್ನು ಹೊಂದಬಹುದು.

ಈ ಮೊದಲಿನ ಸಂದರ್ಭದಲ್ಲಿ ನಾವು ಉತ್ತಮವಾದ ಸಮರ್ಥನೆ ಹೊಂದಿದ್ದೇವೆ ಎಂದು ತೋರಬಹುದು. ಏಕೆಂದರೆ, ಕಾರಣವಾದದ ಮೂಲಕ ನಾವು ನಮ್ಮ ದೃಢ ನಂಬಿಕೆಯನ್ನು ಹೊಂದಿದ ನಂತರ, ನಾವು ಅದನ್ನು ಸಮರ್ಥಿಸಲು ಉತ್ತಮ ಸ್ಥಾನದಲ್ಲಿ ಇರುತ್ತೇವೆ. ಪ್ರಾಯಶಃ ನಾವು ಒಂದು ನಂಬಿಕೆಯನ್ನು ಕೇವಲ ಒಂದು ಕಾರಣದ ಆಧಾರದ ಮೇಲೆ ರೂಪಿಸುವುದಕ್ಕಿಂತ ಕಾರಣವಾದದ ಮೂಲಕ ಪಡೆದಿದ್ದರೆ, ಅದನ್ನು ಸಮರ್ಥಿಸಲು ಹೆಚ್ಚು ಸಮರ್ಥರಾಗಿರುತ್ತೇವೆ ಅಥವಾ ಸಿದ್ಧರಿರುತ್ತೇವೆ; ಆದರೆ ಇದು ಆನುಷಂಗಿಕ ವಿಷಯವಾಗಿದೆ. ಉದಾಹರಣೆಗೆ, ನಾವು ಯಾವ ಪ್ರಮೇಯದಿಂದ ವಿವೇಚಿಸಿದ್ದೇವೋ ಅದನ್ನು ನಾವು ಮರೆತುಬಿಡಬಹುದು ಮತ್ತು ಅನೇಕವೇಳೆ ನಮ್ಮ ನಂಬಿಕೆಗಳಲ್ಲಿ ಯಾವುದು ಅದಕ್ಕೆ ಆಧಾರ ಒದಗಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ನೋಡಬಹುದಾಗಿದೆ, ಪ್ರಮೇಯದ ಸಮರ್ಥನೆಯು ಪ್ರಶ್ನಾರ್ಹವಾಗಿದ್ದು ಮತ್ತು ನಾವು ವಿವೇಚಿಸುವುದರ ಮೂಲಕ ಆ ಸಮರ್ಥನೆಗೆ ಬರದಿದ್ದರೂ ಕೂಡ.

### *ಔಪಾಧಿಕ ಕಡ್ಡಾಯ ನಿಯಮಗಳು*

ಕೆಲವು ಮೂಲಭೂತ ರೀತಿಯ ವ್ಯಾವಹಾರಿಕ ತತ್ವಗಳನ್ನು ಗುರುತಿಸುವುದನ್ನು ಪ್ರಾರಂಭಿಸಲು ಉತ್ತಮ ಸ್ಥಳವೆಂದರೆ ಕ್ಯಾಂಟ್ ಅವರ ಪ್ರಸಿದ್ಧ ಔಪಾಧಿಕ ಕಡ್ಡಾಯ ನಿಯಮಗಳಾಗಿವೆ. ಒಂದು ಆವೃತ್ತಿಯಲ್ಲಿ ಇದನ್ನು *'ವಿವೇಚನಾಶೀಲ ವ್ಯಕ್ತಿಗಳಲ್ಲಿ ಇಚ್ಛಾಶಕ್ತಿಯ ವ್ಯಾಪ್ತಿಯ ತತ್ವ (principle of the scope of the will in rational persons)'* ಎಂದು ಕರೆಯಬಹುದು: ಯಾರು ಗುರಿಯನ್ನು ಇಚ್ಛಿಸುವವರೋ, ಅವರು ಕನಿಷ್ಠಪಕ್ಷ ಕಾರಣವು ಅವರ ಮೇಲೆ ನಿರ್ಣಾಯಕ ಪ್ರಭಾವ ಬೀರುವವರೆಗೆಯಾದರೂ, ಅದನ್ನು ಸಾಧಿಸುವ (ಅಗತ್ಯ) ವಿಧಾನವನ್ನೂ ಇಚ್ಛಿಸುತ್ತಾರೆ. ಇದನ್ನು ಸಂಭವನೀಯವಾಗಿ *'ಕಡ್ಡಾಯ ನಿಯಮ (ಆಜ್ಞಾರ್ಥಕ-imperative)'* ಎಂದು ಕರೆಯಬಹುದು. ಏಕೆಂದರೆ ಒಂದು ಗುರಿಯ ಇಚ್ಛೆಯನ್ನು ಬೆಂಬಲಿಸುವಂತಹ ಸಾಧನಭೂತ ಇಚ್ಛೆಯು ಇಲ್ಲದಿದ್ದರೆ, ಒಬ್ಬರ ಸಕಾರಣತೆಯಲ್ಲಿ ಒಂದು ರೀತಿಯ ದೋಷವಿದೆ ಎಂಬುದನ್ನು ಇದು ಸೂಚಿಸುತ್ತದೆ. ಕ್ಯಾಂಟ್ ಹೀಗೂ ಹೇಳುತ್ತಾರೆ:

> $HI_1$: ಯಾರು ಗುರಿಯನ್ನು ಇಚ್ಛಿಸುತ್ತಾರೋ ಅಂತಹವರು ಅದನ್ನು ಸಾಧಿಸಲು ತಮ್ಮ ಅಧೀನದಲ್ಲಿರುವ ಒಂದೇ ವಿಧಾನವನ್ನೂ (ಅಗತ್ಯವಾಗಿ ಕಾರಣದ ಪ್ರಕಾರ) ಸಹ ಇಚ್ಛಿಸುತ್ತಾರೆ (*Groundwork* (ಗ್ರೌಂಡ್‌ವರ್ಕ್), ವಿಶೇಷವಾಗಿ ವಿಭಾಗಗಳು 417-418 ನೋಡಿ).

ಎರಡೂ ಸೂತ್ರೀಕರಣಗಳು ಕಾಲದ ವ್ಯತ್ಯಯಗಳನ್ನು (temporal variables) ಹೊಂದಿರುವುದಿಲ್ಲ. ಆದಾಗ್ಯೂ, (ಅದು ಕಾಣುವಂತೆ) ನಾವು ಏನು ಮಾಡಬೇಕು ಎಂಬುದರ ಕುರಿತು ಯೋಚಿಸುವ ಅಥವಾ ಒಂದು ವಿಧಾನದ ಕುರಿತು ಅರಿವನ್ನು ಹೊಂದುವ ಮೊದಲೇ ಗುರಿಯನ್ನು ಇಚ್ಛಿಸುವ ಉದಾಹರಣೆಗಳನ್ನು ಸಹ ಸೇರಿಸಲು ಕ್ಯಾಂಟ್‌ನ ಉದ್ದೇಶವಾಗಿತ್ತು ಎಂದು ಭಾವಿಸೋಣ. ಈ ಉದಾಹರಣೆಗಳು ಸಾಮಾನ್ಯವಾಗಿವೆ ಮತ್ತು ಅವುಗಳಿಗೆ ಮಾನದಂಡವಿರುವುದು ನಮಗೆ ಅಗತ್ಯವಾಗಿದೆ. ಕಾಲದಾದ್ಯಂತ ತತ್ವವನ್ನು ಅನ್ವಯಿಸಲು ಅನುಮತಿಸುವಂತಹ ಕಾಲದ ವ್ಯತ್ಯಯಗಳನ್ನು ನಾವು ಸೇರಿಸಬೇಕು. ಒಂದು ಸಂಭಾವನೀಯ ಉದಾಹರಣೆ

> $HI_2$.: ಒಂದು ವೇಳೆ, $t$ (ಸಮಯ) ನಲ್ಲಿ $E$ ಎಂಬ ಗುರಿಯನ್ನು $S$ ಇಚ್ಛಿಸಿದರೆ, ಆಗ $E$ ಅನ್ನು ಸಾಧಿಸಲು ಯಾವುದೇ ಒಂದು ಅಗತ್ಯ ವಿಧಾನವನ್ನು $S$ (a) ಆ ಸಮಯದಲ್ಲಿ ಅಥವಾ $t$ ನಲ್ಲಿ ಆರಂಭಗೊಂಡು ಒಂದು ನಿರ್ದಿಷ್ಟ ಸಮಯದ ನಂತರ ಪರಿಗಣಿಸಿದರೆ ಮತ್ತು (b) $S$ ನ (ತನ್ನ) ಬಳಿಯಲ್ಲಿರುವ ಅಗತ್ಯ ವಿಧಾನವನ್ನು ತೆಗೆದುಕೊಂಡರೆ, $S$ $t$ ನಲ್ಲಿ ಅಥವಾ ಸ್ವಲ್ಪ ಸಮಯದ ನಂತರ ಆ ವಿಧಾನವನ್ನು ಇಚ್ಛಿಸುತ್ತಾರೆ.

ಉಲ್ಲೇಖವು *'ಕೇವಲ'* ಅಗತ್ಯಗಳಾಗಿರುವ ವಿಧಾನಗಳಿಗಲ್ಲ ಎಂದು ನಾವು ಭಾವಿಸಬಹುದು, ಒಂದು ದೀಪವನ್ನು ಆನ್ ಮಾಡಲು ಅಗತ್ಯವಿರುವ ಎರಡು ಜಂಟಿ ಸ್ವಿಚ್‌ಗಳಲ್ಲಿ ಒಂದನ್ನು ಮಾತ್ರ ಆಯ್ಕೆಮಾಡುವಂತೆ; ಇಲ್ಲಿ ಸಂಭಾವ್ಯವಾಗಿ *S* ಎರಡನ್ನೂ ಆಯ್ಕೆಮಾಡಲು ಇಚ್ಛಿಸಬಹುದು. ಗುರಿಯನ್ನು ಸಾಧಿಸಲು ಒಂದು ಗಮನಾರ್ಹ ಅವಕಾಶವನ್ನು ಹೊಂದಲು *S* ತನ್ನ ಮುಂದಿರುವ ವಿಧಾನವನ್ನು ಆಯ್ದುಕೊಳ್ಳಬಹುದು ಎಂಬ ಗೃಹೀತದ ಮೇಲೆ ಮಾತ್ರ ಈ ತತ್ವವು ಸಂಭವನೀಯವಾಗುತ್ತದೆ. ಸ್ಪಷ್ಟವಾಗಿ ಕ್ಯಾಂಟ್ ಸಹ ನಾವೀಗ ಪರಿಗಣಿಸುತ್ತಿರುವಂತಹ ಇಚ್ಛೆಯ ಕ್ರಿಯೆ ಅಥವಾ ಸಂಭವಿಸುವ ಉದ್ದೇಶ ಎಂಬ ವಿಷಯಗಳ ಮೇಲೆ ಆಲೋಚಿಸುತ್ತಿದ್ದಿರಬಹುದು. ನಾವು $HI_2$ ಅನ್ನು *'ಕ್ಯಾಂಟ್ ನ ಇಚ್ಛಾ ಸಾಮರ್ಥ್ಯದ ವರ್ಗಾವಣೆಯ ಒಂದು ತತ್ವ (Kantian principle of volition transfer)'* ಎಂದು ಕರೆಯಬಹುದು. (ಕ್ಯಾಂಟ್ ಮನಸ್ಸಿನಲ್ಲಿಟ್ಟುಕೊಂಡಿದ್ದ ತತ್ವಗಳಲ್ಲಿ ಒಂದಾದ ಈ ತತ್ವದೊಂದಿಗೆ ನಿಖರವಾಗಿ ಕಾಕತಾಳೀಯವಾಗಿಲ್ಲದಿದ್ದರೂ ಸಹ ಇದು ವಿಶಾಲವಾಗಿ ಕ್ಯಾಂಟ್‌ನ ತತ್ವದಂತೆ ತೋರುತ್ತದೆ).

ಔಪಾಧಿಕ ಕಡ್ಡಾಯ ನಿಯಮಗಳ ಇತರ ಆವೃತ್ತಿಗಳಿವೆ. ಅದರ ಇತ್ತೀಚಿನ ವಿವರಣೆಯಲ್ಲಿ, ಕ್ರಿಸ್ಟೀನ್ ಕೋರ್ಸ್ಗಾರ್ಡ್ (Christine Korsgaard) ಹೀಗೆ ಹೇಳಿದ್ದಾರೆ:

> ಗುರಿಯನ್ನು ಇಚ್ಛಿಸುವುದು ಎಂದರೆ ತನ್ನನ್ನು ತಾನೇ ಆ ಗುರಿಯನ್ನು ಸಾಧಿಸಲು *'ಬದ್ಧವಾಗುವುದು'*... ಸ್ವತಃ ತನಗೆ ತಾನೇ ಒಂದು ನಿಯಮವನ್ನು ಹೇರಿಕೊಳ್ಳುವುದು ಮತ್ತು ಆ ಮೂಲಕ ಸ್ವತಃ ತನ್ನನ್ನು ನಡೆಸಿಕೊಳ್ಳುವುದು... ಹಾಗಾದರೆ ಕ್ಯಾಂಟ್ ನ ಸ್ವಂತ ಸೂತ್ರದ ಬಗ್ಗೆಯೇ ಹೇಳುವುದಾದರೆ? ಇದು ಉಪಯೋಗಕ್ಕೆ ಬರುವಂತಹ ನನ್ನ ಮೊದಲ ಸೂತ್ರದಂತೆ ಇರಬೇಕಾದರೆ (ಅಂದರೆ, "ನಿಮಗೆ *'ಒಂದು ಗುರಿಯ ಬೆಂಬತ್ತಿ ಹೋಗಲು ಒಂದು ಕಾರಣ'* ವಿದ್ದರೆ, ಆಗ ಆ ಗುರಿಯನ್ನು ಸಾಧಿಸಲು ಒಂದು ಮಾರ್ಗವನ್ನು ಅನುಸರಿಸಲೂ ಸಹ ನಿಮಗೆ ಒಂದು ಕಾರಣವಿರುತ್ತದೆ") ಆಗ... ನೀವು ಒಂದು ಗುರಿಯನ್ನು ಇಚ್ಛಿಸುತ್ತೀರ ಎನ್ನುವ ವಾಸ್ತವವೇ ಆ ಗುರಿಗೆ *'ಒಂದು ಕಾರಣ'* ಎಂದು ನೀವು ಯೋಚಿಸಬೇಕು[17].

ಈ ಭಾಗವು (ಅದು ಒಳಗೊಳ್ಳದಿದ್ದರೂ) ಈ ತತ್ವವನ್ನು ಸೂಚಿಸುತ್ತದೆ:

> $HI_3$: ಒಂದು ವೇಳೆ, *t* ನಲ್ಲಿ, *E* ಎಂಬ ಗುರಿಯನ್ನು *S* ಇಚ್ಛಿಸಿದರೆ, ಮತ್ತು *S* ಇದನ್ನು ಇಚ್ಛಿಸುತ್ತಾರೆ ಎಂಬ ವಾಸ್ತವವು ಗುರಿಯ ಬೆಂಬತ್ತಿ ಹೋಗಲು ಒಂದು ಕಾರಣವಾದರೆ, ಆಗ *E* ಗೆ ಯಾವುದೇ ಒಂದನ್ನು ಅಗತ್ಯ ವಿಧಾನವೆಂದು *S* (a) ಆ ಸಮಯದಲ್ಲಿ ಅಥವಾ *t* ನಲ್ಲಿ ಆರಂಭಗೊಂಡು ಒಂದು ನಿರ್ದಿಷ್ಟ ಸಮಯದ ನಂತರ ಪರಿಗಣಿಸಿದರೆ ಮತ್ತು (b) *S* ನ (ತನ್ನ) ಬಳಿಯಲ್ಲಿರುವ ಅಗತ್ಯ ವಿಧಾನವನ್ನು ತೆಗೆದುಕೊಂಡರೆ, *S t* ನಲ್ಲಿ ಅಥವಾ ಸ್ವಲ್ಪ ಸಮಯದ ನಂತರ ಆ ವಿಧಾನವನ್ನು ಇಚ್ಛಿಸುತ್ತಾರೆ.

ಒಂದು ಕಾರಣವಿದೆ ಎಂಬ ನಂಬಿಕೆಯು, ಆ ಕಾರಣವಿರುವುದನ್ನು ಅಗತ್ಯವಾಗಿಸುವುದು ಎಂಬುದು ಸೂಚಿತವಾಗಿಲ್ಲ ($HI_3$ ಅಥವಾ ಕೋರ್ಸ್ಗಾರ್ಡ್ ರಿಂದ), ಆದರೆ (ಸಕಾರಣವಾಗಿ) ಒಂದು ಗುರಿಯನ್ನು ಇಚ್ಛಿಸಲು ಮತ್ತು ತನ್ಮೂಲಕ ಒಂದು ಮಾರ್ಗವನ್ನು ಇಚ್ಛಿಸಲು ಹಾಗೂ ಅಂತಹ ತತ್ವಗಳ ಕಡ್ಡಾಯ ಗುಣಲಕ್ಷಣಗಳನ್ನು ಆಧಾರವನ್ನಾಗಿಸಲು ಈ ನಂಬಿಕೆಯು ಅಗತ್ಯವೆಂದು ಸೂಚಿಸುತ್ತದೆ. ಮತ್ತು ಆ ಆಧಾರದ ಮೇಲೆ, ಯಾರು ಒಂದು ಗುರಿಯನ್ನು ಇಚ್ಛಿಸುವವರೋ ಅದರೆ ಅದನ್ನು ಸಾಧಿಸಲು ಸಾಧನಭೂತ ಮಾರ್ಗವೊಂದನ್ನು ಇಚ್ಛಿಸುವುದಿಲ್ಲವೋ ಅಂತಹವರಲ್ಲಿ ಯಾವುದೋ ಒಂದು ರೀತಿಯಲ್ಲಿ ವೈಚಾರಿಕತೆಯ ದೋಷವಿದೆ ಎಂಬುದು ಸೂಚ್ಯವಾಗಿದೆ.

ಇದರ ಒಂದು ಪ್ರತಿರೂಪವಾದ ಹ್ಯೂಮ್ ನ ಸೂತ್ರೀಕರಣವು ಒಂದು ಪ್ರೇರಣೆಯ ಸ್ಥಿತಿಯಿಂದ ಹೆಚ್ಚು ನೇರವಾಗಿ ಕ್ರಿಯೆಗೆ ಕಾರಣಗಳು ಉದ್ಭವಿಸುತ್ತದೆ ಎಂದು ಹೇಳುತ್ತದೆ. ಈ -"ವಿಧಾನ/ ಗುರಿಗಳ ನಿಯಮ" (M/E) ಅನ್ನು ಪರಿಗಣಿಸಿ: ನೀವು *A* ಅನ್ನು ಸಾಧಿಸಲು ಅಪೇಕ್ಷಿಸಿದರೆ ಮತ್ತು *B*-ಮಾರ್ಗದಿಂದ ನೀವು *A* ಅನ್ನು ಸಾಧಿಸಬಹುದು ಎಂದು ನಂಬಿದರೆ, ಆಗ ನೀವು ಕಡ್ಡಾಯವಾಗಿ *B* ಅನ್ನು ಅನುಸರಿಸಬೇಕು[18]. ಒಂದು ರೀತಿಯ ಕಡ್ಡಾಯ ನಿಯಮವೆಂದು ಪರಿಗಣಿಸಿದಾಗ, ಅಪೇಕ್ಷೆಯೇ ಪ್ರಧಾನವೆಂದು ಪರಿಗಣಿಸಿದರೆ ಇದು ಹೆಚ್ಚು ಸಂಭವನೀಯವಾಗಿರುತ್ತದೆ. ಏಕೆಂದರೆ ಯಾರಾದರೂ *A* ಅನ್ನು ಸಾಧಿಸಲು ಕೇವಲ ನಾವೊಂದು ದುರ್ಬಲ ಅಪೇಕ್ಷೆಯನ್ನು ಹೊಂದಿದ್ದರೆ, ಮತ್ತು ಅದಕ್ಕಿಂತ ನಮಗೆ ಈಡೇರಿಸಿಕೊಳ್ಳಲು ಅಸಾಧ್ಯವೆಂದು ತಿಳಿದಿರುವ ವಿಷಯಗಳಿಗೆ ಇರುವ ಅಪೇಕ್ಷೆಗಳು ಅಧಿಕವಾಗಿ ಹೆಚ್ಚಾಗಿದ್ದರೆ, ಆಗ *A* ಅನ್ನು ಸಾಧಿಸಲು 'ಖಂಡಿತವಾಗಿ ಮಾಡಬೇಕು' ಎಂಬುದಕ್ಕೆ ಸಮರ್ಥನೆ ಇಲ್ಲದಂತಾಗುತ್ತದೆ. (ಬಹುಶಃ ಸ್ಪಷ್ಟ ಎಂದೂ ಸಹ ಅರ್ಥೈಸಿಕೊಳ್ಳಲಾಗಿದೆ). ಈ ಪರಿಮಿತಿಯುಳ್ಳ ಹೇಳಿಕೆಯ ಮೂಲಕ ಸೂಚಿಸಲಾದ ಒಂದು ತತ್ವವು ಹೀಗಿದೆ

> $HI_4$ : ಒಂದು ವೇಳೆ, *t* ನಲ್ಲಿ, *E* ಎಂಬ ವ್ಯವಹಾರಗಳ ಸ್ಥಿತಿಗೆ ಪ್ರಧಾನವಾದ ಅಪೇಕ್ಷೆಯನ್ನು *S* ಹೊಂದಿದ್ದರೆ, ಮತ್ತು *A*–ಮಾಡುವಿಕೆಯು *E* ಅನ್ನು ಸಾಧಿಸಲು ನೆರವಾಗುತ್ತದೆ ಎಂದು ನಂಬಿದ್ದರೆ, ಆಗ, *t* ನಲ್ಲಿ , *A* ಮಾಡುವಿಕೆಗೆ *S* ಬಳಿ ಕಾರಣವಿದೆ.

ನಾವು M/E ಅಥವಾ ಇನ್ಯಾವುದೋ ಅಂತಹದ್ದೇ ಸೂತ್ರವು ವ್ಯಾವಹಾರಿಕ ನಿರ್ಣಯದ ಮೂಲ ತತ್ವವಾಗಿದೆ ಎಂದು ವಾದಿಸಬಹುದು ಮತ್ತು ನಿಶ್ಚಯವಾಗಿ "M/E ತತ್ವವನ್ನು ಒಪ್ಪಿಕೊಳ್ಳದ ಯಾರಿಗಾದರೂ ಯಾವುದೇ ರೀತಿಯ ಕಾರಣಗಳನ್ನು ಕೊಡುವ ಅಗತ್ಯವಿಲ್ಲ". [19]

ಅಪೇಕ್ಷೆಗಿಂತ ಉದ್ದೇಶವನ್ನು ಬಳಸುವ ಮತ್ತು $HI_2$ ಅಥವಾ $HI_3$ ಗಿಂತ $HI_1$ ಗೆ (ಒಂದು ಅರ್ಥೈಸುವಿಕೆಯ ಪ್ರಕಾರ) ಹತ್ತಿರದಲ್ಲಿರುವ $HI_4$ ಗೆ ಸಂಬಂಧಿಸಿದ ಒಂದು ತತ್ವವೆಂದರೆ, ಅದು

> ನೀವು ಏನನ್ನಾದರೂ ಮಾಡಲು ಉದ್ದೇಶಿಸಿದರೆ ಮತ್ತು ನೀವು ಈ ಉದ್ದೇಶವನ್ನು ತೊರೆಯದಿದ್ದರೆ, ನಿಮ್ಮ ಉದ್ದೇಶವು ಪ್ರಮಾಣಕವಾಗಿ ನೀವು ಉದ್ದೇಶಿಸಿರುವುದನ್ನು ಮಾಡುವುದನ್ನು ಬೇಡುತ್ತದೆ. ತೊರೆಯದ ಉದ್ದೇಶಗಳು ಅವುಗಳ ಅನುಸಾರ ಪ್ರಮಾಣಕವಾಗಿ ಕಾರ್ಯನಿರ್ವಹಿಸಬೇಕೆಂದು ಬೇಡುತ್ತದೆ. [20]

ಆದಾಗ್ಯೂ, ಬ್ರೂಮ್ (Broome) ವಿವರಿಸಿದಂತೆ, ಇಲ್ಲಿ ನಿಯಮಾಧೀನವಾಗಿರುವುದು ವಾಸ್ತವವಾಗಿದೆ. ಆದ್ದರಿಂದ ಇಲ್ಲಿನ ಅಗತ್ಯವು, ಒಂದು ನಾವು ತೊರೆಯದ ಉದ್ದೇಶವನ್ನು ಇಟ್ಟುಕೊಳ್ಳುವುದನ್ನು ಬಿಟ್ಟುಬಿಡಬೇಕು *'ಅಥವಾ'* ಉದ್ದೇಶಿಸಿದ ಕೆಲಸವನ್ನು ಮಾಡಬೇಕು. ತೊರೆಯದ ಉದ್ದೇಶಗಳು ಸಹ ಕ್ರಿಯೆಗೆ ಕಾರಣಗಳನ್ನು ಸೃಷ್ಟಿಸುತ್ತವೆ ಎಂಬುದು ಇಲ್ಲಿ ಸೂಚಿತವಾಗಿಲ್ಲ. [21]

M/E ಆಗಲಿ ಅಥವಾ ತೊರೆಯದ ಉದ್ದೇಶಗಳ ತತ್ವಗಳೇ ಆಗಲಿ, ಕಾಲದ ಪರಿಮಿತಿಗೆ ಬದ್ಧವಾಗಿಲ್ಲ. ನಿರ್ದಿಷ್ಟವಾಗಿ ಕಾರಣವಾದವು ಕ್ಷಣಮಾತ್ರದಲ್ಲಿ ಆಗದಿದ್ದರೆ ಇದು ಮುಖ್ಯವಾಗುತ್ತದೆ. ಏಕೆಂದರೆ ಆಗ ವ್ಯಾವಹಾರಿಕ ಕಾರಣವಾದವನ್ನು ನಿಯಂತ್ರಿಸುವ ಪ್ರಮಾಣಕ ತತ್ವಗಳು ಹಾಗೂ ಒಂದು ನಿರ್ದಿಷ್ಟ ಸಮಯದಲ್ಲಿ ಕರ್ತೃಗಳಿಗೆ ಸರಳವಾಗಿ ಅನ್ವಯಿಸುವ ವ್ಯಾವಹಾರಿಕ ತತ್ವಗಳ ನಡುವೆ ಪ್ರಮುಖ ವ್ಯತ್ಯಾಸವಿರುತ್ತದೆ. ಆ ತತ್ವಗಳು ವ್ಯಾವಹಾರಿಕ *'ಕಾರಣಗಳನ್ನು'* ನಿಯಂತ್ರಿಸಬಹುದು ಆದರೆ ವ್ಯಾವಹಾರಿಕ ಕಾರಣವಾದವನ್ನಲ್ಲ. ನಾನು ಕಾಲದ ಪರಿಗಣನೆಗಳಿಗೆ ಹಿಂತಿರುಗುತ್ತೇನೆ. ನಾವು ಮೊದಲು ಪ್ರಮಾಣಕ ಮೌಲ್ಯಮಾಪನದ ವಿಭಿನ್ನ ಆಯಾಮವನ್ನು ಅನ್ವೇಷಿಸಬೇಕು.

## *ಪ್ರಮಾಣಕ ತತ್ವಗಳ ಮೂರು ವಿಧಗಳು*

ಪ್ರಮಾಣಕ ತತ್ವಗಳು ಇನ್ನೂ ನಮಗೆ ಸ್ಪಷ್ಟವಾಗದ ರೀತಿಯಲ್ಲಿ ಭಿನ್ನವಾಗಿವೆ. ಇದನ್ನು ಅರ್ಥಮಾಡಿಕೊಳ್ಳಲು, ಮೊದಲು ಸೈದ್ಧಾಂತಿಕ ಕ್ಷೇತ್ರದಲ್ಲಿ ಮತ್ತು ನಂತರ ವ್ಯಾವಹಾರಿಕ ಕ್ಷೇತ್ರದಲ್ಲಿ, ಎರಡು ವ್ಯತಿರಿಕ್ತ ರೀತಿಯ ಉದಾಹರಣೆಗಳನ್ನು ನಾನು ಮುಂದಿಡುತ್ತೇನೆ. ನಂಬಿಕೆ (belief)ಯನ್ನು ಉದ್ದೇಶ (intention)ದ ಪ್ರತಿರೂಪ ಎಂದು ಪರಿಗಣಿಸಿದರೆ, ಆಗ $HI_1$ರ ಸೈದ್ಧಾಂತಿಕ ಸಾದೃಶ್ಯ ಹೀಗಿದೆ:

> $T_1$: ಒಂದು ವೇಳೆ, *t* ನಲ್ಲಿ, *S* ಆ *p* ಅನ್ನು ಮತ್ತು ಆ *p* ಯು *q* ಅನ್ನು ಒಳಗೊಂಡಿದೆ ಎಂಬುದನ್ನು ನಂಬಿದರೆ, ಆಗ, *t* ನಲ್ಲಿ (ಕಾರಣವು *S* ನ ಮೇಲೆ "ನಿರ್ಣಾಯಕ ಪ್ರಭಾವವನ್ನು" ಹೊಂದಿದೆ ಎನ್ನುವ ಮಟ್ಟಿಗೆ), *S* ಅವರು *q* ಅನ್ನು ಸಹ ನಂಬುತ್ತಾರೆ.

ಇದನ್ನು *'ನಂಬಿದ ತೀರ್ಮಾನಕ್ಕೆ ಅನುಗುಣವಾಗಿ ನಂಬಿಕೆಯ (ವಿವೇಚನಾಶೀಲ ವ್ಯಕ್ತಿಗಳಲ್ಲಿ) ನಿರ್ಣಾಯಕ ತತ್ವ (the principle of closure of belief (in rational persons) under believed entailment)'* ಎಂದು ಕರೆಯಿರಿ. ಅದನ್ನು ಒಂದು ಸಂಬಂಧಿತ ತತ್ವದೊಂದಿಗೆ, ತೊರೆಯದ ಉದ್ದೇಶಗಳ ತತ್ವದಂತೆ ಮೇಲ್ನೋಟಕ್ಕೆ ಕಾಣುವ ತತ್ವದೊಂದಿಗೆ ಹೋಲಿಕೆ ಮಾಡಿ:

> $T_2$. : ಒಂದು ವೇಳೆ, *t* ನಲ್ಲಿ, *S* ಆ *p* ಅನ್ನು ಮತ್ತು ಆ *p* ಯು *q* ಅನ್ನು ಒಳಗೊಂಡಿದೆ ಎಂಬುದನ್ನು ನಂಬಿದರೆ, ಆಗ, *t* ನಲ್ಲಿ, *S* ಗೆ *q* ಅನ್ನು ನಂಬಲು ಕಾರಣವಿದೆ.

ಇದು ನಿರ್ಣಾಯಕ ತತ್ವವಲ್ಲ (closure principle) ಆದರೆ ನಿರ್ಮಿಸುವ ತತ್ವವಾಗಿದೆ (generation principle). ಸಂಕ್ಷಿಪ್ತವಾಗಿ ಅದು, ತೀರ್ಮಾನದ ಮೂಲಕ ನಂಬಿಕೆಗಳು ಪ್ರಮಾಣಕ (normative) ಕಾರಣಗಳನ್ನು ಸೃಷ್ಟಿಸುತ್ತವೆ ಎಂದು ಹೇಳುತ್ತದೆ. ಒಂದು ಸಂಭವನೀಯ ಭಿನ್ನ-ಕಾಲೀನ (cross-temporal) ಪ್ರತಿರೂಪವೆಂದರೆ,

> $T_3$: ಒಂದು ವೇಳೆ, *t* ನಲ್ಲಿ, *S* ಆ *p* ಅನ್ನು ಮತ್ತು ಆ *p* ಯು *q* ಅನ್ನು ಒಳಗೊಂಡಿದೆ ಎಂಬುದನ್ನು ನಂಬಿದರೆ, ಆಗ, *t* ನಲ್ಲಿ ಅಥವಾ *t* ಆದ ತಕ್ಷಣವೇ, ಮತ್ತು ಈ ನಂಬಿಕೆಗಳನ್ನು ಹೊಂದಿರುವ ಅರಿವಿನೊಂದಿಗೆ, *S q* ಅನ್ನು ಪರಿಗಣಿಸಿದರೆ, *q* ಅನ್ನು ನಂಬಲು *S* ಗೆ ಸ್ಪಷ್ಟ ಕಾರಣವಿದೆ.

$T_1$-$T_3$ ಅನ್ನು ಮೌಲ್ಯಮಾಪನ ಮಾಡುವ ಪ್ರಕ್ರಿಯೆಯಲ್ಲಿ ಸಮಯಕ್ಕೆ ಸಂಬಂಧಿಸಿದಂತೆ ಅವುಗಳನ್ನು ಪ್ರತ್ಯೇಕಿಸಿ ನೋಡುವುದು ಸಹ ನೆರವಾಗುವುದು. ಒಂದು *'ನಿರ್ದಿಷ್ಟ'* ಸಮಯದಲ್ಲಿ ಅನ್ವಯಿಸುವ $T_1$-$T_2$ ಮತ್ತು ಇತರ ತತ್ವಗಳನ್ನು *'ಸಿಂಕ್ರಾನಿಕ್ (synchronic)'* ಎಂದು ಕರೆಯಿರಿ. ಕಾಲದ ಅಂತರದಲ್ಲಿ ಅನ್ವಯವಾಗುವ $T_3$ಅನ್ನು *'ಡಯಾಕ್ರಾನಿಕ್ (diachronic)'* ಎಂದು ಕರೆಯಿರಿ. ನಾನು ಈ ಮೂರೂ ಅಸತ್ಯವೆಂದು ನಂಬುತ್ತೇನೆ. ಮೊದಲಿಗೆ $T_1$ನೊಂದಿಗೆ ಪ್ರಾರಂಭಿಸೋಣ.

*S* ಆ *p* ಅನ್ನು ನಂಬುವ ಮತ್ತು ಆ *p* ಯು *q* ಅನ್ನು ಒಳಗೊಳ್ಳುತ್ತದೆ ಎಂಬ ನಂಬಿಕೆಯನ್ನು ರೂಪಿಸಿಕೊಳ್ಳುವ ಆ ಕ್ಷಣವನ್ನು ಪರಿಗಣಿಸಿ. $T_1$ (a) ಎರಡೂ ನಂಬಿಕೆಗಳು ವಿಚಾರಹೀನವಾಗಿವೆ, ಮತ್ತು (b) *S q* ಅನ್ನು ಪರಿಗಣಿಸಿ (*S* ಒಂದೇ ಸಮಯದಲ್ಲಿ ಮಾಡಬಹುದು ಎಂದು ನಾವು ಭಾವಿಸಬಹುದಾದರೆ) ಸಮರ್ಥನೀಯವಾಗಿ *q* ಅನ್ನು ಅಸಂಭವನೀಯವೆಂದು ಕಂಡುಕೊಳ್ಳಬಹುದು ಮತ್ತು ಆ ಮೂಲಕ *p* ಅನ್ನು ನಂಬಲು *S* ಗಿರುವ ಯಾವುದೇ ಕಾರಣಕ್ಕಿಂತ ಬಲವಾಗಿ *q* ಅನ್ನು ನಂಬದಿರಲು ಕಾರಣವನ್ನು ಹೊಂದಬಹುದು ಎಂಬುದನ್ನು ಒಪ್ಪುತ್ತದೆ. ಹಾಗಾದರೆ ವಿಚಾರಹೀನವಾದ ಆ *p* ನಲ್ಲಿನ *S* ನ ನಂಬಿಕೆ *q* ಅನ್ನು ನಂಬಲು *S* ಗೆ ಯಾವುದೇ ಕಾರಣವನ್ನು ಏಕೆ

ನೀಡಬೇಕು? ಒಂದು ಉತ್ತರವು ಹೀಗಿರಬಹುದು - ಏಕೆಂದರೆ $T_1$ನ ಪ್ರಕಾರ, ಆ *p* ನಲ್ಲಿ ಮತ್ತು ಆ *p q* ಅನ್ನು ಒಳಗೊಳ್ಳುತ್ತದೆ ಎಂಬ *S* ನ ನಂಬಿಕೆಯು ದತ್ತವಾಗಿರುವುದರಿಂದ, *S* ವಿಚಾರಪರನಾಗಿ (*S* ವಿಚಾರಪರನಾಗಿರುವ ಅಗತ್ಯವಿದೆ) *q* ಅನ್ನು ನಂಬಬೇಕು ಮತ್ತು ಆ 'ನಂಬಲೇಬೇಕು' ಎಂಬುದು $T_2$ ಮತ್ತು $T_3$ ನಲ್ಲಿನ "ಪ್ರಮೇಯದ" ನಂಬಿಕೆಗಳ ಕಾರಣ-ರಚಿಸುವ ತಳಹದಿಯಾಗಿದೆ. ಅದು ಹಾಗಿದೆಯೇ?

ಇದಕ್ಕೆ ಹತ್ತಿರವಿರುವ ಮತ್ತು ಸ್ಪಷ್ಟವಾಗಿ ನಿಜವಾಗಿರುವ ಒಂದು ತತ್ವವೆಂದರೆ,

> $T_4$: ಯಾವುದೇ ಒಂದು ದತ್ತ ಸಮಯದಲ್ಲಿ, ಇದನ್ನು ನಂಬದಿರಲು ಕಾರಣವಿದೆ: ಆ *p* ಅನ್ನು, ಆ *p* ಯು *q* ಅನ್ನು ಒಳಗೊಳ್ಳುತ್ತದೆ ಎನ್ನುವುದನ್ನು, ಮತ್ತು *q*- ಒಳಗೊಳ್ಳದಿರುವುದನ್ನು.

ಆದರೆ ಆ *p* ಯ ನಂಬಿಕೆ ಮತ್ತು ಆ *p* ಯು *q* ಅನ್ನು ಒಳಗೊಳ್ಳುತ್ತದೆ ಎಂಬ ನಂಬಿಕೆಗಳು ಪ್ರಮಾಣಕವಾಗಿ *q* ಅನ್ನು ನಂಬುವುದನ್ನು ಬೆಂಬಲಿಸುತ್ತದೆಯೇ ಎಂಬುದರ ಬಗ್ಗೆ $T_4$ ಏನನ್ನು ಸೂಚಿಸುವುದಿಲ್ಲ. $T_4$ ಅನ್ನು *'ಸುಸಂಬದ್ಧತೆಯ ತತ್ವ (coherence principle)'* (ಅಥವಾ *'ಅಸಂಬದ್ಧತೆಯ (incoherence principle)'* ತತ್ವ) ಎಂದು ಕರೆಯಬಹುದು: ಇದು ಒಂದು ರೀತಿಯ ಅಸಂಬದ್ಧತೆಯನ್ನು ನಿಷೇಧಿಸುತ್ತದೆ. ನಮಗೆ ನಂಬಲು ಇರುವ ಸಕಾರಾತ್ಮಕ ಕಾರಣದ ಬಗ್ಗೆ ಅದು ಏನನ್ನೂ ಹೇಳುವುದಿಲ್ಲ. ವಾಸ್ತವವಾಗಿ, *p* ಸ್ಪಷ್ಟವಾಗಿ ಅಸತ್ಯವಾಗಿರಬಹುದು. ಮೇಲಾಗಿ, ಅದು *q* ಅನ್ನು ಒಳಗೊಂಡಿದೆ ಎಂಬುದನ್ನು ಪರಿಗಣಿಸುವುದರಿಂದ ಇದನ್ನು ಕಂಡುಕೊಳ್ಳಬಹುದು ಮತ್ತು *q* ಅಸತ್ಯವೆಂದು ನಾವು ಆಗಲೇ ತೀರ್ಮಾನಿಸಿರಬಹುದು ಅಥವಾ ಅದನ್ನು ಪರಿಗಣಿಸಿದ ನಂತರ ಅದು ಅಸತ್ಯವೆಂದು ಸುಲಭವಾಗಿ ಗ್ರಹಿಸಬಹುದು. ಆ ಅಂಶವು, ಪರಿಣಾಮವಾಗಿ, $T_2$ ಮತ್ತು $T_3$ ಏಕೆ ಅಸತ್ಯವಾಗಿವೆ ಎಂಬುದನ್ನು ತೋರಿಸಲು ನೆರವಾಗುತ್ತದೆ. ಒಮ್ಮೆ ನಾವು *S 'q* ಅನ್ನು *ಪರಿಗಣಿಸುವುದನ್ನು'* ಸ್ವೀಕರಿಸಿದರೆ, *S* ಗೆ *p* ಅನ್ನು ನಂಬಲು ಇರುವ ಕಾರಣಕ್ಕಿಂತ *q* ಅನ್ನು ನಂಬದಿರಲು ಕಾರಣಗಳು ಹೆಚ್ಚಾಗಿರುವ ಸಾಧ್ಯತೆಯನ್ನು ಅದನ್ನು ಮಾಡುವ ಮೂಲಕ ಸೃಷ್ಟಿಸುತ್ತದೆ.

ಈಗ ಹೊರಹೊಮ್ಮಿರುವ ಅಂಶಗಳ ಅನುಸಾರ ವ್ಯಾವಹಾರಿಕ ಕಾರಣವಾದವು ಸೈದ್ಧಾಂತಿಕ ಕಾರಣವಾದಕ್ಕಿಂತ ಭಿನ್ನವಾಗಿದೆಯೇ? ನನಗೆ ಹಾಗೆ ಅನ್ನಿಸುವುದಿಲ್ಲ. ಮೇಲೆ ಉಲ್ಲೇಖಿಸಲಾದ ಕೆಲವು ವ್ಯಾವಹಾರಿಕ ತತ್ವಗಳ ಮೂಲಕ ಸೂಚಿಸಲಾದ $T_2$ ನ ಪ್ರತಿರೂಪವೊಂದನ್ನು ಪರಿಗಣಿಸಿ:

> $P_1$: *A* ಅನ್ನು ಸಾಧಿಸಲು *S* ಉದ್ದೇಶಿಸಿದರೆ ಮತ್ತು *A* ಅನ್ನು ಸಾಧಿಸಲು *B*-ಮಾಡುವಿಕೆಯು ಅಗತ್ಯ ಮತ್ತು ಸಮರ್ಪಕವಾಗಿರುತ್ತದೆ ಎಂದು ನಂಬಿದರೆ, ಆಗ *B* ಅನ್ನು ಮಾಡಲು *S* ಕಾರಣವನ್ನು ಹೊಂದಿರುತ್ತಾರೆ.

ಖಚಿತವಾಗಿಯೂ, ಸಮರ್ಪಕತೆಯು ಅಗತ್ಯತೆ ಮತ್ತು ಸಮರ್ಪಕತೆಯ ಸಂಯೋಜನೆಗಿಂತಲೂ ತೀರ್ಮಾನದ ಹೆಚ್ಚು ನಿಕಟವಾದ ಪ್ರತಿರೂಪವಾಗಿದೆ; ಆದರೆ, *B*-ಮಾಡುವಿಕೆಯು *A* ಅನ್ನು ಸಾಧಿಸಲು ಅಗತ್ಯವಿಲ್ಲದ ಕಾರಣ, *A* ಅನ್ನು ಸಾಧಿಸಲು ಇನ್ನ್ಯಾವುದಾದರೂ ಸಮರ್ಪಕ ವಿಧಾನಗಳಿಗೆ ಹೆಚ್ಚು ಆದ್ಯತೆ ಕೊಡಬಹುದಾಗಿದೆ. ಆದ್ದರಿಂದ, ಎರಡು ಆಯಾಮವುಳ್ಳ ನಿಯಮವು ಇಲ್ಲದಾಗ ನಾವು ಪಡೆಯುವ ತತ್ವಕ್ಕಿಂತ ಹೆಚ್ಚು ಸಂಭವನೀಯ ತತ್ವವನ್ನು $P_1$ನಲ್ಲಿ ಹೊಂದಿದ್ದೇವೆ. ಅದೇನೇ ಇರಲಿ, $T_1$ ಗೆ ಅನ್ವಯಿಸುವ ಅದೇ ರೀತಿಯ ಪರಿಗಣನೆಗಳು ಇಲ್ಲಿ ಇಲ್ಲವೇ? ಏಕಕಾಲದಲ್ಲಿ *A*-ಸಾಧಿಸುವುದನ್ನು ಉದ್ದೇಶಿಸುವುದರಲ್ಲಿ, *A* ಅನ್ನು ಸಾಧಿಸಲು *B* ಮಾಡುವುದು ಅಗತ್ಯ ಮತ್ತು ಸಮರ್ಪಕ (ಇಲ್ಲಿ *B* ಅನ್ನು ನಾವು ಮಾಡಬಹುದು ಎಂದು ನಾವು ತೆಗೆದುಕೊಂಡಾಗ)[22] ಎಂದು ನಂಬುವಲ್ಲಿ, ಮತ್ತು, ಉದ್ದೇಶ ಮತ್ತು ನಂಬಿಕೆಯ ಬಗ್ಗೆ ಅರಿವಿದ್ದು, *B* ಅನ್ನು ಮಾಡಲು ಉದ್ದೇಶ ಹೊಂದಿರದೆ ಇದ್ದಲ್ಲಿ (ಅಥವಾ ಬಹುಶಃ *B*

ಮಾಡುವ ಉದ್ದೇಶವನ್ನೇ ಹೊಂದಲು ವಿಫಲವಾದಾಗ), ಒಂದು ರೀತಿಯ ವ್ಯಾವಹಾರಿಕ ಅಸಂಬದ್ಧತೆ ಇದೆ ಎಂಬುದು ನಿಜ. ಆದರೆ ಈ ವ್ಯಾವಹಾರಿಕ ಸುಸಂಬದ್ಧತೆಯ ತತ್ವವು ಮಾಡುವ ಉದ್ದೇಶವನ್ನು ಹೊಂದಿರುವ ಒಬ್ಬರ ಬಳಿ ಇರುವ ಕಾರಣದ ಬಗ್ಗೆ ಏನನ್ನೂ ಸೂಚಿಸುವುದಿಲ್ಲ.

ಈಗ $T_3$ ನ ಡಯಾಕ್ರಾನಿಕ್ (ಕಾಲದ ಅಂತರದಲ್ಲಿ) ಪ್ರತಿರೂಪವನ್ನು ಪರಿಗಣಿಸಿ:

> $P_2$ : ಒಂದು ವೇಳೆ, *t* ನಲ್ಲಿ, *A* ಅನ್ನು ಸಾಧಿಸಲು *S* ಉದ್ದೇಶಿಸಿದರೆ ಮತ್ತು *A* ಅನ್ನು ಸಾಧಿಸಲು *B*-ಮಾಡುವಿಕೆಯು ಅಗತ್ಯ ಮತ್ತು ಸಮರ್ಪಕವಾಗಿರುತ್ತದೆ ಎಂದು ನಂಬಿದರೆ, ಆಗ ಒಂದು ವೇಳೆ, *t* ನಲ್ಲಿ ಅಥವಾ *t* ಆದ ತಕ್ಷಣವೇ, ಮತ್ತು ಈ ಉದ್ದೇಶ ಮತ್ತು ನಂಬಿಕೆಯನ್ನು ಹೊಂದಿರುವ ಅರಿವಿನೊಂದಿಗೆ, *B* ಅನ್ನು ಮಾಡಬೇಕೇ ಎಂದು *S* ಪರಿಗಣಿಸಿದರೆ, ಆಗ *B* ಅನ್ನು ಮಾಡಲು *S* ಗೆ ಕಾರಣವಿದೆ.

*A* ಅನ್ನು ಸಾಧಿಸುವ ಉದ್ದೇಶವಿರುವ ಸಾಧ್ಯತೆಯನ್ನು ಅಥವಾ ಸಂಬಂಧಿಸಿದ ಸಾಧನಭೂತ ನಂಬಿಕೆಯು ವಿಚಾರಹೀನವಾಗಿರುವ ಸಾಧ್ಯತೆಯನ್ನು $P_2$ ತಳ್ಳಿಹಾಕುವುದಿಲ್ಲ. ಈ ಉದಾಹರಣೆಯಲ್ಲಿ, ಅನುಗಾಮಿಯು (consequent) ಅಸತ್ಯವಾಗಿರಬಹುದು. *B* ಅನ್ನು ಮಾಡಬೇಕೇ ಎಂದು ಪರಿಗಣಿಸಿದ ನಂತರ *S* ಕೂಡ ಈ ಕ್ರಿಯೆಯನ್ನು ಹೆಚ್ಚು ಆಕ್ಷೇಪಾರ್ಹವೆಂದು ಕಂಡುಕೊಳ್ಳಬಹುದು ಮತ್ತು ಆ ಮೂಲಕ *A* ಅನ್ನು ಸಾಧಿಸಲು ಉದ್ದೇಶವನ್ನು ಹೊಂದದೆ ಇರಲು ಒಂದು ಅತಿಮುಖ್ಯ ಕಾರಣವನ್ನು ಹೊಂದಬಹುದು.

ನಾವು ಈಗ ಸಿಂಕ್ರಾನಿಕ್ (ನಿರ್ದಿಷ್ಟ ಸಮಯ) ಮತ್ತು ಡಯಾಕ್ರಾನಿಕ್ (ಸಮಯದ ಅಂತರ) ತತ್ವಗಳ ನಡುವಿನ ವ್ಯತ್ಯಾಸವು ಎಷ್ಟು ಮುಖ್ಯ ಎಂಬುದನ್ನು ನೋಡಬಹುದು. ಸಿಂಕ್ರಾನಿಕ್ ತತ್ವವು ಒಂದು ಕರ್ತೃವಿನ ಸಮಯದ ಭಾಗಕ್ಕೆ ಅನ್ವಯಿಸುತ್ತದೆ; ಅವು ಬದಲಾವಣೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಒಂದು ನಿರ್ದಿಷ್ಟ ಸಮಯದಲ್ಲಿ ಅಸಂಬದ್ಧತೆಯು ಸಾಧ್ಯವಿದೆ ಮತ್ತು ಅದನ್ನು ತಡೆಯುವ ದೃಢವಾದ ತತ್ವಗಳಿವೆ; ಆದರೆ ಒಂದು ಪ್ರತಿಪಾದನೆ ಅಥವಾ ಸಾಧ್ಯತೆಯನ್ನು ಪರಿಗಣಿಸಿ ಮತ್ತು ಅದರ ಆಧಾರದ ಮೇಲೆ ಒಂದು ನಂಬಿಕೆಯನ್ನು ರೂಪಿಸಿಕೊಳ್ಳುವುದು ಅಥವಾ ಅದನ್ನು ಕಾರ್ಯರೂಪಕ್ಕೆ ತರಲು ಉದ್ದೇಶವನ್ನು ಹೊಂದಿರುವುದು ಕನಿಷ್ಠಪಕ್ಷ ಸಾಮಾನ್ಯವಾಗಿ ಒಂದೇ ಸಮಯದಲ್ಲಿ ಸಾಧ್ಯವಿಲ್ಲ. ಪ್ರಾಯಶಃ ನಿರ್ಣಯಾತ್ಮಕವಾಗಿ ಸಂಬಂಧಿತ ನಂಬಿಕೆ ಅಥವಾ ಉದ್ದೇಶವನ್ನು ರೂಪಿಸುವುದನ್ನು ಒಂದು ನಂಬಿಕೆ ಅಥವಾ ಸಾಧ್ಯತೆಯನ್ನು ಇನ್ನೂ ಪರಿಗಣಿಸುತ್ತಿರುವಾಗಲೇ ಅದನ್ನು ರೂಪಿಸುವುದಕ್ಕೆ ವಿರುದ್ಧವಾಗಿ, ನಾವು ಅದನ್ನು ಒಂದು ಪ್ರತಿಪಾದನೆ ಅಥವಾ ಸಾಧ್ಯತೆಯನ್ನು ಪರಿಗಣಿಸುವ *'ಪ್ರಾರಂಭ'*ವನ್ನು ಒಳಗೊಂಡಿದೆ ಎಂದು ತೆಗೆದುಕೊಂಡರೆ ಅದು ಒಂದೇ ಕಾಲದಲ್ಲಿ ಎಂದಿಗೂ ಸಾಧ್ಯವಾಗುವುದಿಲ್ಲ. ಮೊದಲಿನದನ್ನು (ನಿರ್ಣಯಾತ್ಮಕವಾಗಿ ಸಂಬಂಧಿತ ನಂಬಿಕೆ ಅಥವಾ ಉದ್ದೇಶವನ್ನು ರೂಪಿಸುವುದನ್ನು) *'ಪ್ರಾಸಂಗಿಕ ನಿರ್ಣಯ (episodic inference - ಬಿಡಿಬಿಡಿಯಾದ ಅಥವಾ ಕ್ರಮರಹಿತವಾದ ನಿರ್ಣಯ)'* ಎಂದು ಎರಡನೆಯದನ್ನು (ಒಂದು ನಂಬಿಕೆ ಅಥವಾ ಸಾಧ್ಯತೆಯನ್ನು ಇನ್ನೂ ಪರಿಗಣಿಸುತ್ತಿರುವಾಗಲೇ ಅದನ್ನು ರೂಪಿಸುವುದನ್ನು)*'ಹೊರಹೊಮ್ಮುತ್ತಿರುವ ನಿರ್ಣಯ (emergent inference)'* ಎಂದು ಕರೆಯಬಹುದು. ಮೊದಲಿನದು ಎರಡನೆಯದಕ್ಕಿಂತ ಹೆಚ್ಚು ಸಾಮಾನ್ಯವಾಗಿದೆ. ಪ್ರಾಸಂಗಿಕ ನಿರ್ಣಯವು ಸ್ವಭಾವತಃ ವಿರಳವಾಗಿ ಒಂದೇ ಸಮಯದಲ್ಲಿ ಸಂಭವಿಸುವ ಸಾಧ್ಯತೆ ಇದೆ ಎಂದಾದರೆ (ಇದು ಇಲ್ಲಿ ಚರ್ಚೆಗೆ ಮುಕ್ತವಾಗಿ ಬಿಡಬಹುದಾದ ವಿಷಯ), ಕನಿಷ್ಠ ಪಕ್ಷ ಒಂದು ಕನಿಷ್ಠತಮದ *'ಪರ್ಯಾಲೋಚನೆಯ'* ಉದಾಹರಣೆಯಾಗಿ ಅರ್ಹತೆ ಹೊಂದಿರುವ ಸಾಮಾನ್ಯ ರೀತಿಯದ ನಿರ್ಣಯವು ಒಂದೇ ಸಮಯದಲ್ಲಿ ಸಂಭವಿಸುವ ಸಾಧ್ಯತೆ ಅಂತೂ ಇಲ್ಲವೇ ಇಲ್ಲ.

ಇಲ್ಲಿ ಹೊರಹೊಮ್ಮುತ್ತಿರುವ ಒಂದು ಪ್ರಮುಖ ಸಾಮಾನ್ಯ ಅಂಶವೆಂದರೆ ಪರಿಗಣನೆಯು ಬದಲಾವಣೆಗೆ ಕಾರಣವಾಗಬಹುದು, ಮತ್ತು ತತ್ಪರಿಣಾಮವಾಗಿ, ಬದಲಾವಣೆಯು ಒಂದು ಉದ್ದೇಶದ ಸಕಾರಣತೆಯ ಅಂಶವನ್ನು ಬದಲಾಯಿಸಬಹುದು. ಇದು ವ್ಯಾವಹಾರಿಕ ಕಾರಣವಾದವನ್ನು ನಿಯಂತ್ರಿಸುವ ಮಾನದಂಡಗಳಿಗೆ ಸಂಬಂಧ ಹೊಂದಿದೆ. ಕಾರಣವಾದವು ಸಾಮಾನ್ಯವಾಗಿ ಕ್ಷಣಮಾತ್ರದಲ್ಲಿ ಆಗುವುದೇ ಎಂಬುದು ಸಂಶಯಾಸ್ಪದ. ಪ್ರಮೇಯದಿಂದ (ಪ್ರಮೇಯಗಳಿಂದ) ತೀರ್ಮಾನಕ್ಕೆ ಬರುವ ಚಿಂತನಾ ಪ್ರಕ್ರಿಯೆಯಾಗಿ ಕಲ್ಪಿಸಲಾದ ನಿರ್ಣಯ ಘಟಕಕ್ಕೆ ವಿರುದ್ಧವಾಗಿ ನಾವು ಕಾರಣವಾದದ ಒಂದು ಭಾಗದ (ಪ್ರಾಸಂಗಿಕ) ಬಗ್ಗೆ ಯೋಚಿಸಿದರೆ ಇದು ಖಂಡಿತವಾಗಿಯೂ ನಿಜ. ಆದರೆ ಕಾರಣವಾದವು ಕ್ಷಣಮಾತ್ರದಲ್ಲಿ ಆಗಲು ಸಾಧ್ಯ ಎಂದು ಭಾವಿಸೋಣ. ಇದು *A* ಅನ್ನು ಸಾಧಿಸುವ ಉದ್ದೇಶದ ಬೆಳಕಿನಲ್ಲಿ *B* ಮಾಡುವುದನ್ನು ಪರಿಗಣಿಸುವ ಮತ್ತು *A* ಅನ್ನು ಸಾಧಿಸಲು *B* ಮಾಡುವುದು ಅಗತ್ಯ ಮತ್ತು ಸಮರ್ಪಕವಾಗಿರುತ್ತದೆ ಎಂದು ನಂಬುವ ಅದೇ ಕ್ಷಣದಲ್ಲಿ, *B* ಅನ್ನು ಮಾಡುವ ಉದ್ದೇಶವನ್ನು ರೂಪಿಸುಕೊಳ್ಳುವಷ್ಟೇ ಶೀಘ್ರವಾಗಿ ಒಬ್ಬರು *B* ಮಾಡುವುದು ನೈತಿಕವಾಗಿ ಅಸಂಗತ ಎಂದು ಯೋಚಿಸಬಹುದು ಎಂಬುದನ್ನು ಒಪ್ಪಿಕೊಳ್ಳುತ್ತದೆ. ಒಂದು ನಿರ್ದಿಷ್ಟ ಸಮಯದಲ್ಲಿ ಮನಸ್ಸು ಎಷ್ಟು ಮಾಡಬಹುದು, ಅಥವಾ ಸ್ಪಂದಿಸಬಹುದು ಎಂಬುದು ಬಹುಮಟ್ಟಿಗೆ ಅನಿಶ್ಚಿತ ವಿಷಯವಾಗಿದೆ.

ಹೆಚ್ಚು ಸಾಮಾನ್ಯವಾಗಿ, ಸೈದ್ಧಾಂತಿಕವಾಗಿ ಕಾರಣವಾದವು ಕ್ಷಣಮಾತ್ರದಲ್ಲಿ ಸಂಭವಿಸುವ ಸಾಧ್ಯತೆ ಇದ್ದರೆ, ಸಂಬಂಧಿತ ಸಮಯದಲ್ಲಿ, ಒಂದು ಉದ್ದೇಶವನ್ನು ಹೊಂದದೆ ಇರಲು ಅಥವಾ ಪರಿಗಣಿಸಲಾಗುತ್ತಿರುವ ಕಾರ್ಯವನ್ನು ಮಾಡದೆ ಇರಲು ಕಾರಣವನ್ನು ಒದಗಿಸುವ ಒಂದು ಆಲೋಚನೆ ಅಥವಾ ಅರಿವು ಸಹ, ಸೈದ್ಧಾಂತಿಕವಾಗಿ ಸಂಭವಿಸಲು ಸಾಧ್ಯ. ನಾವು ಪರಿಗಣಿಸುತ್ತಿರುವ ಪ್ರತಿಪಾದನೆಯ ಮನೋಭಾವನೆಗಳ ಅಸಂಬದ್ಧ ತ್ರಿತಯ(triad)ಗಳನ್ನು ಹೇಗೆ ತಡೆಯಬಹುದು ಎಂಬುದಕ್ಕೆ ಇದು ಸಂಬಂಧ ಹೊಂದಿದೆ. ಕಿರು ಪ್ರಮೇಯದಲ್ಲಿನ ಕ್ರಿಯೆಯನ್ನು ಬೆಂಬಲಿಸುವ ಸರ್ವೇಸಾಮಾನ್ಯ ರೀತಿಯಲ್ಲಿ ವ್ಯಾವಹಾರಿಕ ಕಾರಣವಾದವನ್ನು ತೀರ್ಮಾನಿಸುವುದು ಕ್ಷಣಮಾತ್ರದಲ್ಲಿ ಆಗಬಹುದಾದರೆ, ಅಂತಹ ತೀರ್ಮಾನವನ್ನು ಬೆಂಬಲಿಸುವ ಪ್ರಮೇಯಗಳಲ್ಲಿ ಒಂದನ್ನು ತೆಗೆದುಕೊಳ್ಳದಿರಲು ಕಾರಣವನ್ನು ಹೊಂದುವುದು ಸಹ ಕ್ಷಣಮಾತ್ರದಲ್ಲಿ ಆಗಬಹುದು. ನಾವು ದೃಷ್ಟಾಂತದ ಮೂಲಕ ಮೋಡಸ್ ಪೊನೆನ್ಸ್ (modus ponens) ಗಳಂತೆ (ದೃಢೀಕರಿಸುವ ನಿರ್ಣಾಯಕ ತತ್ವದ ವಿಧಾನ) ತ್ವರಿತವಾಗಿ ಮೋಡಸ್ ಟೋಲೆನ್ಸ್ (modus tollens)ಗಳನ್ನು (ನಿರಾಕರಣೆಯ ನಿರ್ಣಾಯಕ ತತ್ವದ ವಿಧಾನ) ಸಹ ನಿರೂಪಿಸಸಬಹುದು. ಅಸಮಂಜಸವಾದ ತ್ರಿತಯಗಳನ್ನು ತಪ್ಪಿಸುವ ಅಗತ್ಯವು ಸ್ವತಃ ಒಂದು ಮಾದರಿಯ ಕಾರಣವಾದವನ್ನು ಇನ್ನೊಂದಕ್ಕಿಂತ ಅಧಿಕವಾಗಿ ಬೆಂಬಲಿಸುವುದಿಲ್ಲ.

ನನ್ನ ತೀರ್ಮಾನಗಳಲ್ಲಿ ಒಂದನ್ನು ಮುಂದಿಡುವ ಇನ್ನೊಂದು ರೀತಿ ಇದೆ. ಕಾರಣವಾದವು ಡಯಾಕ್ರಾನಿಕ್ (ಸಮಯ ಅಂತರದಲ್ಲಿ) ಆಗುವ ಅಗತ್ಯವಿಲ್ಲದಿದ್ದರೂ ಸಹ, ಅದು *'ಕ್ರಿಯಾಶೀಲ (dynamic)'* ವಾಗಿರುತ್ತದೆ. ಅದು ಕನಿಷ್ಠ ನಂಬಿಕೆ- ರಚನೆಯ ಸಮಯದಲ್ಲಿ ಅಭಿವೃದ್ಧಿಶೀಲ ಬದಲಾವಣೆಯನ್ನು ಒಳಗೊಳ್ಳುತ್ತದೆ. ಆ ಬದಲಾವಣೆಯು *S* ಒಂದು ಹೊಸ ಸಮರ್ಥನೀಯ ವ್ಯಾವಹಾರಿಕ ನಿರ್ಣಯಕ್ಕೆ ಬರುವಂತೆ ಹೊಸ ಕಾರಣಗಳನ್ನು ಒದಗಿಸಬಹುದು; ಪರಿಣಾಮವಾಗಿ, ಇವುಗಳು ಕರ್ತೃಗಳು ಏನನ್ನು ಉದ್ದೇಶಿಸಬೇಕು (ಅಥವಾ ನಂಬಬೇಕು) ಎಂಬುದನ್ನು ಬದಲಾಯಿಸಬಹುದು. ಆದ್ದರಿಂದ, ಕಾರಣವಾದದ ಮೌಲ್ಯಮಾಪನ ಸಮಗ್ರವಾಗಿರುವುದರಲ್ಲಿ ಒಂದು ಅರ್ಥವಿದೆ. ಇದಕ್ಕಾಗಿಯೇ ಅದರ ಸರಿಯಾದ ನಿರ್ಧಾರಣೆಯಲ್ಲಿ ಮತ್ತು ಹೊಸ ಪರಿಗಣನೆಗಳ ಬೆಳಕಿನಲ್ಲಿ ಅದು ಅಸಮರ್ಥನೀಯ ಎಂಬುದನ್ನು ತೋರಿಸಲು ಅಷ್ಟೊಂದು ಮಾನದಂಡಗಳನ್ನು ಒಳಗೊಳ್ಳುತ್ತದೆ.

***ವ್ಯಾವಹಾರಿಕ ಕಾರಣ ಮತ್ತು ವ್ಯಾವಹಾರಿಕ ಕಾರಣವಾದದ ದೃಢವಾದ ತತ್ವಗಳ ಕಡೆಗೆ***

ಹಾಗಾದರೆ, ವ್ಯಾವಹಾರಿಕ ಕಾರಣವಾದವನ್ನು ನಿರ್ಣಯ ಮಾಡುವಲ್ಲಿ ನಾವು ಯಾವ ತತ್ತ್ವಗಳನ್ನು ಅವಲಂಬಿಸಬಹುದು? ಮೇಲೆ ಪರಿಗಣಿಸಲಾದ ವ್ಯಾವಹಾರಿಕ ಕಾರಣವಾದದ ಪ್ರತಿ ಮಾದರಿಗೆ ಸೇರಿದ ಕೆಲವು ಇರುವಂತೆ, ಅನೇಕ ಇವೆ. ಆದರೆ ಸರಳವಾದ ನಿಗಮನಾತ್ಮಕ ನಿರ್ಣಾಯಕ ತತ್ತ್ವಗಳ ನಿಕಟ ಸಾದೃಶ್ಯಗಳು ಸಮರ್ಪಕವಾಗಿರುವಂತೆ ಕಾಣುವುದಿಲ್ಲ. ವ್ಯಾವಹಾರಿಕ ಕಾರಣವಾದಕ್ಕೆಂದಿರುವ ನಿರ್ಧಾರಣೆಯ ಮೂರು ಪರಸ್ಪರ ಸಂಬಂಧಿತ ಆಯಾಮಗಳ ಮತ್ತು ವಿಭಾಗ III ರಲ್ಲಿ ಚಿತ್ರಿಸಲಾದ ನಾಲ್ಕು ರೀತಿಯ ಮೌಲ್ಯಮಾಪನ ಮಾನದಂಡಗಳ ಬೆಳಕಿನಲ್ಲಿ ಮಾತ್ರ ದೃಢವಾದ ತತ್ತ್ವಗಳು ಯಾವುವು ಎಂಬುದನ್ನು ನೋಡಬಹುದು. ಮೊದಲನೇ ಆಯಾಮವು ಅಮೂರ್ತ ರಚನೆಗಳಾಗಿ ಕಲ್ಪಿಸಲಾಗಿರುವ ವ್ಯಾವಹಾರಿಕ ವಾದಗಳಿಗೆ ಸಂಬಂಧಿಸಿದೆ. ನಾವು ಅಗತ್ಯತೆ, ಅತ್ಯುತ್ತಮತೆ, ಸಮರ್ಪಕತೆ ಮತ್ತು ಸಮಂಜಸತೆಯನ್ನು ಪ್ರತಿನಿಧಿಸುವ ವಾದದ ಹಲವಾರು ಮಾದರಿಗಳನ್ನು ಗಮನಿಸಿದ್ದೇವೆ. ವ್ಯಾವಹಾರಿಕ ಕಾರಣವಾದದ ಪ್ರಸಂಗಗಳಿಗೆ ಅನುಗುಣವಾದ ವಾದಗಳನ್ನು ನಿವಗಮನಾತ್ಮಕ ಅಥವಾ ವಿಶಾಲ ಅರ್ಥದಲ್ಲಿ, ಅನುಗಮನಾತ್ಮಕವಾಗಿರುವ ತಾರ್ಕಿಕ ಮಾನದಂಡದ ಮೂಲಕ ನಿರ್ಣಯಿಸಬಹುದು. ಎರಡನೆಯದಾಗಿ, ನಿರ್ಧಾರಣೆಯು ನಿರ್ಣಯಾತ್ಮಕ ಆಯಾಮದಲ್ಲಿ ಸಂಭವಿಸುತ್ತದೆ: ಕಾರಣವಾದದ ಪ್ರಕ್ರಿಯೆಯನ್ನು ಸ್ವತಃ ನಿರ್ಣಯಾತ್ಮಕ ಮಾನದಂಡದಿಂದ ನಿರ್ಣಯಿಸಬಹುದು. ಇವು ಸಮರ್ಥನೀಯವಾಗಿ ನಿರ್ಣಯವನ್ನು ಹೊಂದುವ ಷರತ್ತುಗಳು ಮತ್ತು ಪ್ರಮೇಯಗಳನ್ನು ನಂಬಿದ ಆಧಾರದ ಮೇಲೆ ತೀರ್ಮಾನವನ್ನು ಹೊಂದಲು ಬೇಕಾದ ಅವಶ್ಯಕತೆಗಳೆರಡಕ್ಕೂ ಸಂಬಂಧಿಸಿವೆ. ಮೂರನೆಯದಾಗಿ, ಜ್ಞಾನದ ಆಯಾಮವಿದೆ: ಕರ್ತೃವಿನ ಪ್ರಮೇಯಗಳ ಮತ್ತು ತೀರ್ಮಾನಗಳ ಬಗೆಗಿನ ನಂಬಿಕೆಗಳನ್ನು, ಕಾರಣವಾದದ ಪ್ರಕ್ರಿಯೆಗೆ ಅಥವಾ ಅನುಗುಣವಾದ ವಾದಕ್ಕೆ ಸಂಬಂಧ ಹೊಂದಬಹುದಾದ ಅಥವಾ ಸಂಬಂಧ ಹೊಂದದೆ ಇರಬಹುದಾದ ಜ್ಞಾನ ಸಂಬಂಧಿಯ ಮಾನದಂಡದ ಮೂಲಕ ನಿರ್ಣಯಿಸಬಹುದು. ಈ ಮಾನದಂಡಗಳಲ್ಲಿ ಕರ್ತೃವಿನ ನಂಬಿಕೆಗಳನ್ನು ಸಮರ್ಥಿಸುವುದು ಯಾವುದು (ಯಾವುದಾದರೂ ಇದ್ದರೆ) ಮತ್ತು ಆ ಸಮರ್ಥನೆಯನ್ನು ಯಾವುದು ಅಲ್ಲಗೆಳೆಯಬಹುದು ಎಂಬ ಎರಡಕ್ಕೂ ಸಂಬಂಧಿಸಿವೆ. ಈ ಜ್ಞಾನ ಸಂಬಂಧಿಯ ಮಾನದಂಡಗಳು ವ್ಯಾವಹಾರಿಕ ಅಥವಾ ಸೈದ್ಧಾಂತಿಕ ಕಾರಣವಾದದ ಮೂಲಕ ಯಾವುದೇ ನಂಬಿಕೆಗಳು ನಿರ್ಣಯಾತ್ಮಕವಾಗಿ ಸಮರ್ಥನೀಯವಾಗಿವೆಯೇ ಎಂಬ ಪ್ರಶ್ನೆಯನ್ನು ಹಾಗೆಯೇ ಮುಕ್ತವಾಗಿ ಬಿಡುತ್ತವೆ. ಮತ್ತು ನಾಲ್ಕನೆಯದಾಗಿ, ಪರಿಗಣಿಸಲಾಗುತ್ತಿರುವ ಪ್ರತಿಪಾದನೆಗಳ ಸತ್ಯ ಅಸತ್ಯತೆಯ ಕುರಿತು ವಾಸ್ತವವಾದ ಮಾನದಂಡಗಳಿವೆ. ಆದರ್ಶಸ್ಥಿತಿಯಲ್ಲಿ, ಉತ್ತಮ ವ್ಯಾವಹಾರಿಕ ಕಾರಣವಾದವು ನಿಜವಾದ ಮತ್ತು ಸಮರ್ಥನೀಯವಾಗಿ ನಂಬಲಾದ ಪ್ರಮೇಯಗಳು ಹಾಗೂ ನಿಜವಾದ ತೀರ್ಮಾನದೊಂದಿಗೆ ಮತ್ತು ಎರಡೂ ಅವುಗಳಿಂದ ಸಮರ್ಥನೀಯವಾಗಿ ನಿರ್ಣಯಿಸಲಾದ ಮತ್ತು ಅವುಗಳ ಆಧಾರದ ಮೇಲೆ ಸಮರ್ಥನೀಯವಾಗಿ ಹೊಂದಿರುವ ಸಮಂಜಸವಾದ ಮೂಲಾಧಾರವಿರುವ ವಾದವನ್ನು ವ್ಯಕ್ತಪಡಿಸುತ್ತದೆ.

ವ್ಯಾವಹಾರಿಕ ಕಾರಣವಾದವನ್ನು ನಿರ್ಣಯ ಮಾಡುವ ಯಾವುದೇ ಒಂದು ಸರಳ ಕಾರ್ಯಸಾಧ್ಯವಾದ ತತ್ತ್ವವು ಈಗ ಗಮನಿಸಿದ ಎಲ್ಲಾ ವ್ಯತ್ಯಯಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಆದರೆ ಹೇಳಲಾದ ವಿಷಯಗಳಲ್ಲಿ ಸೂಚ್ಯವಾಗಿರುವ ಹಾಗೂ ಸಾಮಾನ್ಯ ರೀತಿಯ ವ್ಯಾವಹಾರಿಕ ಕಾರಣವಾದಗಳ ಗಣನೀಯ ಭಾಗವನ್ನು ಒಳಗೊಳ್ಳುವ ಎರಡನ್ನು ನಾವು ಗ್ರಹಿಸಬಹುದು. ಮೊದಲನೆಯದನ್ನು ಒಂದು ಸಿಂಕ್ರಾನಿಕ್ ಸೈದ್ಧಾಂತಿಕ ಪ್ರತಿರೂಪದಿಂದ ಸೂಚಿಸಲ್ಪಟ್ಟಿದೆ:

> $P_3$: ಒಂದು ವೇಳೆ, *t* ನಲ್ಲಿ, (1) *G* ಅನ್ನು ಸಾಧಿಸಲು *S* ಗೆ (ಪ್ರಮಾಣಕ) ಕಾರಣವಿದ್ದರೆ ಮತ್ತು
> (2) *S* ಒಂದು ಸಮರ್ಥನೀಯ ನಂಬಿಕೆಯನ್ನು ಹೊಂದಿದ್ದರೆ ಅಥವಾ *A* ಮಾಡುವುದು *G* ಅನ್ನು

ಸಾಧಿಸುತ್ತದೆ ಎಂಬ ನಂಬಿಕೆಯನ್ನು ಹೊಂದಲು ಒಂದು ಸಮರ್ಥನೆಯನ್ನು ಹೊಂದಿದ್ದರೆ, ಆಗ *t* ನಲ್ಲಿ, *S* ಗೆ *A* ಅನ್ನು ಮಾಡಲು ಕಾರಣವಿದೆ.

ಇದು *'ಸಾಧನಭೂತ ಸಮರ್ಥಿತ ನಂಬಿಕೆಗೆ (ವಾಸ್ತವ ಅಥವಾ ಅನುಮಾನಿತ) ಅನುಗುಣವಾಗಿ ವ್ಯಾವಹಾರಿಕ ಕಾರಣವಾದಗಳ ನಿರ್ಣಾಯಕದ ತತ್ವವನ್ನು ವ್ಯಕ್ತಪಡಿಸುವುದ್ದಾಗಿದೆ (closure of practical reasons under instrumentally justified belief)'* ವಾಗಿದೆ, ಮತ್ತು ಇದು ಸಮರ್ಪಕ ಮಾದರಿಯನ್ನು ಹೊಂದಿರುವ ವ್ಯಾವಹಾರಿಕ ಕಾರಣವಾದದ ನಿರ್ಧಾರಣೆಗೆ ವಿಶೇಷವಾಗಿ ಪ್ರಸ್ತುತವಾಗಿದೆ. ಕಾರಣವಾದಕ್ಕೆಂದಿರುವ ಒಂದು ಪ್ರತಿರೂಪದ ಸಿಂಕ್ರಾನಿಕ್ ತತ್ವವು ನಿರ್ಣಯಾತ್ಮಕ ಮತ್ತು ಜ್ಞಾನದ ಮಾನದಂಡಗಳನ್ನು ಪೂರೈಸಿರುತ್ತೆ ಎಂದು ಪೂರ್ವಭಾವಿಸುತ್ತದೆ; ಮತ್ತು ಒಂದು ಹೆಚ್ಚು ಬಲವಾದ ಪ್ರತಿರೂಪವು (ಇಲ್ಲಿ ಹೆಚ್ಚು ಕುತೂಹಲಕಾರಿಯದ) ವ್ಯಾವಹಾರಿಕ ಕಾರಣವಾದದ ತಾರ್ಕಿಕ ಮತ್ತು ವಾಸ್ತವ ದೃಢತೆಯನ್ನು ಪೂರ್ವಭಾವಿಸುತ್ತದೆ. ಈ ನಂತರದ ಪ್ರತಿರೂಪವು ಹೀಗಿರುತ್ತದೆ:

> $P_4$: ಒಂದು ವೇಳೆ, *t* ನಲ್ಲಿ, *S* ತಾನು ಸಮರ್ಥನೀಯವಾಗಿ ನಂಬುವ ಸತ್ಯವಾದ ಪ್ರಮೇಯಗಳ ಮೂಲಕ, ಸ್ವೀಕಾರಾರ್ಹ ವ್ಯಾವಹಾರಿಕ ಕಾರಣವಾದವನ್ನು ಮಾಡಿ ಒಂದು ವ್ಯಾವಹಾರಿಕ ತೀರ್ಮಾನಕ್ಕೆ (ವ್ಯಾವಹಾರಿಕ ನಿರ್ಣಯ ಎಂದು ತಿಳಿಯೋಣ) ಬಂದರೆ, ಅದನ್ನು *t* ನಲ್ಲಿ, ಆ ಪ್ರಮೇಯಗಳ ತಳಹದಿಯ ಮೇಲೆ ಹೊಂದಿದ್ದರೆ, ಆಗ, *t* ನಲ್ಲಿ, *S* ಸಮರ್ಥನೀಯವಾಗಿ ಆ ತೀರ್ಮಾನವನ್ನು ಹೊಂದಿರುತ್ತಾರೆ.[23]

ಎಲ್ಲಿ ಸತ್ಯ ಮತ್ತು ಸ್ವೀಕಾರಾರ್ಹತೆಯು ಪೂರ್ವಭಾವಿಸಲ್ಪಟ್ಟಿರುವುದಿಲ್ಲವೋ – ಏಕೆಂದರೆ ವ್ಯಾವಹಾರಿಕ ಕಾರಣವಾದದ ನಿರ್ಧಾರಣೆಯಲ್ಲಿ ಅವು ಸಾಮಾನ್ಯವಾಗಿ ಹಾಗಿರಲು ಸಾಧ್ಯವಿಲ್ಲ - ಅಲ್ಲಿ ಸಂಪುರ್ಣ ನಿಖರತೆಯನ್ನು ನಾವು ನಿರೀಕ್ಷಿಸಬಾರದು. ನಾವು ಬಹುಶಃ ಹೀಗೆ ಹೇಳಬಹುದು:

> $P_5$: ಒಂದು ವೇಳೆ, *t* ನಲ್ಲಿ, *S* ತಾನು ಸಮರ್ಥನೀಯವಾಗಿ ನಂಬುವ ಪ್ರಮೇಯಗಳ ಮೂಲಕ ವ್ಯಾವಹಾರಿಕ ಕಾರಣವಾದವನ್ನು ಮಾಡಿ, ಆ ಪ್ರಮೇಯಗಳು *'ಸಮರ್ಪಕ'* ವಾಗಿ ಬೆಂಬಲಿಸುವ ಒಂದು ವ್ಯಾವಹಾರಿಕ ತೀರ್ಮಾನಕ್ಕೆ ಬಂದರೆ, ಆಗ, *t* ನಲ್ಲಿ, ಒಂದು ವೇಳೆ *S* ಆ ಪ್ರಮೇಯಗಳ ಆಧಾರದ ಮೇಲೆ ಆ ತೀರ್ಮಾನವನ್ನು ಹೊಂದಿದ್ದರೆ, *S* ಆ ತೀರ್ಮಾನವನ್ನು ಸಮರ್ಥನೀಯವಾಗಿ ಹೊಂದಿರುತ್ತಾರೆ.

ಇವೆರಡೂ ಸಿಂಕ್ರಾನಿಕ್ ಆಗಿವೆ; ಆದರೆ ಎರಡನೆಯದರಲ್ಲಿ ಪ್ರಮೇಯಗಳ ಸತ್ಯತೆ ಅಥವಾ ಅವು ತೀರ್ಮಾನವನ್ನು ಒಳಗೊಳ್ಳುವುದು ಅಗತ್ಯವಿರುವುದಿಲ್ಲ ಎಂಬುದರಲ್ಲಿ ಅವು ಭಿನ್ನವಾಗಿರುತ್ತವೆ. ಕಾಲದ ಸ್ಥಿತ್ಯಂತರವನ್ನು ಒಪ್ಪಿಕೊಳ್ಳುವ ಡಯಾಕ್ರಾನಿಕ್ ಆವೃತ್ತಿಗಳಿಗೆ ಹೆಚ್ಚಿನ ಅರ್ಹತೆಗಳ ಅಗತ್ಯವಿರುತ್ತದೆ. ಕಾರಣವಾದವು ಸಾಮಾನ್ಯವಾಗಿ ಕಾಲಾಂತರದಲ್ಲಿ ಸಂಭವಿಸುವುದರಿಂದ, *S* ತಾನು ಪ್ರಮೇಯಗಳ ಬಗೆಗಿನ ನಂಬಿಕೆಗಳನ್ನು ರೂಪಿಸುವ (ಅಥವಾ ಅವುಗಳ ಆಧಾರದ ಮೇಲೆ ಒಂದು ನಿರ್ಣಯವನ್ನು ಮಾಡಲು ಪ್ರಾರಂಭಿಸುವ) ಸಮಯವು ಕಳೆದ *'ನಂತರ'* ಪರಿಗಣಿಸುತ್ತಿರುವ ಪ್ರತಿಪಾದನೆಗಳು ಮತ್ತು ಸಾಧ್ಯತೆಗಳನ್ನು *S* ಪರಿಗಣಿಸಿದರೆ ಏನಾಗಬಹುದು ಎಂಬುದನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು. ಒಟ್ಟಾರೆ ವ್ಯಾವಹಾರಿಕ ಕಾರಣವಾದಕ್ಕೆ ಒಂದು ಡಯಾಕ್ರಾನಿಕ್ ತತ್ವದ ಒಂದು ಉದಾಹರಣೆಯು ಹೀಗಿರಬಹುದು:

> $P_6$: ಒಂದು ವೇಳೆ, *t* ನಲ್ಲಿ, *S* ತಾನು ಸಮರ್ಥನೀಯವಾಗಿ ನಂಬುವ ಪ್ರಮೇಯಗಳ ಮೂಲಕ ವ್ಯಾವಹಾರಿಕ ಕಾರಣವಾದವನ್ನು ಮಾಡಿ, ಆ ಪ್ರಮೇಯಗಳು ಸಮರ್ಪಕವಾಗಿ ಬೆಂಬಲಿಸುವ

> ಒಂದು ವ್ಯಾವಹಾರಿಕ ತೀರ್ಮಾನಕ್ಕೆ ಬಂದರೆ, ಆಗ, ಒಂದು ವೇಳೆ, *t* ನಲ್ಲಿ, ಅಥವಾ *t* ನ ನಂತರ, *S* ಆ ಪ್ರಮೇಯಗಳ ಆಧಾರದ ಮೇಲೆ ಈ ತೀರ್ಮಾನವನ್ನು ಹೊಂದಿದ್ದರೆ, ಮತ್ತು ಬೆಂಬಲವನ್ನು ಅಲ್ಲಗೆಳೆಯುವ ಕಾರಣಗಳನ್ನು ಪಡೆಯದಿದ್ದರೆ, *S* (ಎಲ್ಲವನ್ನು ಪರಿಗಣಿಸಿ) ಆ ತೀರ್ಮಾನವನ್ನು ಸಮರ್ಥನೀಯವಾಗಿಯೇ ಹೊಂದಿರುತ್ತಾರೆ.[24]

ಪ್ರಮೇಯಗಳಿಂದ ಒದಗಿಸಲಾಗುವ ಬೆಂಬಲವನ್ನು ಯಾವ ರೀತಿಯ ಅಂಶಗಳು ಅಲ್ಲಗೆಳೆಯುತ್ತವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳುವ ಅಷ್ಟರಮಟ್ಟಿಗೆ ಮಾತ್ರ $P_6$ ಉಪಯುಕ್ತವಾಗಿರುತ್ತದೆ. ಆದರೆ ವ್ಯಾವಹಾರಿಕ ಕಾರಣವಾದವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು, ಅದೇನೇ ಇರಲಿ ಅದನ್ನು ಸ್ಪಷ್ಟಪಡಿಸುವ ಸಿದ್ಧಾಂತದ ಅಗತ್ಯವಿದೆ. ನಾವು ಅಂತಹದೊಂದು ಸಿದ್ಧಾಂತವನ್ನು ಹೊಂದಿರಲಿ ಅಥವಾ ಹೊಂದದೆ ಇರಲಿ, $P_6$ ನಂತಹ ಸಿಂಕ್ರಾನಿಕ್ ತತ್ವಗಳೂ ಸಹ ವ್ಯಾವಹಾರಿಕ ಕಾರಣವಾದದ ನಿರ್ಧಾರಣೆಯಲ್ಲಿ ಗಣನೀಯವಾಗಿ ನೆರವಾಗುವ ನಿರ್ಣಾಯಕ ಮಾನದಂಡಗಳನ್ನು ಒದಗಿಸುತ್ತವೆ.

## VI. ವ್ಯಾವಹಾರಿಕ ಕಾರಣವಾದ ಮತ್ತು ಸಕಾರಣದ ಕ್ರಿಯೆ

ಇದುವರೆಗೆ ವ್ಯಾವಹಾರಿಕ ಕಾರಣ ಮತ್ತು ವ್ಯಾವಹಾರಿಕ ಕಾರಣವಾದವನ್ನು ನಾನು ಪರಿಗಣಿಸಿದ ರೀತಿಯಲ್ಲಿ, ಉತ್ತಮ ವ್ಯಾವಹಾರಿಕ ಕಾರಣವಾದವನ್ನು ಆಧರಿಸಿದ ಕ್ರಿಯೆಯು ಸಕಾರಣವಾಗಿರುತ್ತದೆ ಎಂಬ ಗೃಹೀತವು ಸೂಚ್ಯವಾಗಿದೆ. ಈ ವಿಭಾಗವು ಒಂದು ಸಕಾರಣವಾದ ಕ್ರಿಯೆ ಮತ್ತು ಅದು ಆಧರಿತವಾಗಿರುವ ವ್ಯಾವಹಾರಿಕ ಕಾರಣವಾದದ ನಡುವೆ ನಾವು ನಿರೀಕ್ಷಿಸಬಹುದಾದ ರೀತಿಯ ಸಂಬಂಧವನ್ನು ಚಿತ್ರಿಸುತ್ತದೆ. ಇದರರ್ಥ, ಸಕಾರಣವಾದ ಕ್ರಿಯೆಗೆ ವ್ಯಾವಹಾರಿಕ ಕಾರಣವಾದದ *'ಆಧಾರ ಬೇಕು'* ಎಂದಲ್ಲ. ಬದಲಾಗಿ ಅದಕ್ಕೆ ವಿರುದ್ಧವಾಗಿದೆ. ವಿಶಾಲ ಪರಿಭಾಷೆಯಲ್ಲಿ, ಸಕಾರಣದ ಕ್ರಿಯೆಯನ್ನು ಕಾರಣಗಳಲ್ಲಿ ದೃಢವಾಗಿ ಆಧಾರಿತವಾಗಿರುವ (ಅದರದ್ದೇ ಆದ ಕಾರಣಗಳಿಗೆ ಮಾಡಿದ ವಿಷಯಗಳನ್ನೂ ಸೇರಿದಂತೆ. ಉದಾಹರಣೆ, ಸಂತೋಷಕ್ಕಾಗಿ ಎನ್ನಬಹುದು) ಕ್ರಿಯೆಯಾಗಿ ಕಲ್ಪಿಸಿಕೊಳ್ಳಬಹುದು.[25] ಆದ್ದರಿಂದ ಇದು, ಎಲ್ಲಾ ಅಪೇಕ್ಷೆಗಳು ಮತ್ತು ನಂಬಿಕೆಗಳನ್ನು ಮೀರಿ, ಸಕಾರಣವಾದ ಪ್ರತಿಪಾದನೆಯ ಮನೋಭಾವನೆಗಳ ಆಧಾರದ ಮೇಲೆ, ವಿವರಿಸಬಹುದಾದ ವಿಷಯವಾಗಿದೆ. ಈ ಮನೋಭಾವನೆಗಳ ವಾಸ್ತವಾಂಶಗಳು ಕಾರಣಗಳನ್ನು ಪ್ರತಿನಿಧಿಸುತ್ತವೆ ಮತ್ತು ಸಂಭಾವ್ಯವಾಗಿ ಕಾರ್ಯಕಾರಣ ಶಕ್ತಿಯನ್ನು (causal power) ಹೊಂದಿರುವಂತೆ ಕಾಣುವುದಿಲ್ಲ; ಆದರೆ ಮನೋಭಾವನೆಗಳು ಕಾರಣ *'ಸ್ಥಿತಿಗಳಾಗಿ,'* ವಿವರಣಾತ್ಮಕ ಶಕ್ತಿಯನ್ನು ಹೊಂದಿದೆ (ಮತ್ತು, ನಾನು ಕಾರ್ಯಕಾರಣ ಶಕ್ತಿಯನ್ನು ಸಹ ಎಂದು ಭಾವಿಸುತ್ತೇನೆ).

ಅಪೇಕ್ಷೆಗಳು ಮತ್ತು ಇತರ ಪ್ರೇರಕ ಮನೋಭಾವನೆಗಳ, ನಿರ್ದಿಷ್ಟವಾಗಿ ಉದ್ದೇಶಗಳ ಸಕಾರಣತೆಯು ವ್ಯಾವಹಾರಿಕವಾಗಿದೆ; ನಂಬಿಕೆಗಳ ಸಕಾರಣತೆಯು ಸೈದ್ಧಾಂತಿಕವಾಗಿದೆ. ಜ್ಞಾನಮೀಮಾಂಸೆಯ ಪರಿಗಣನೆಗಳ ಮೊರೆಹೋಗದೆ ಸಕಾರಣ ಕ್ರಿಯೆಯ ಕಲ್ಪನೆಯನ್ನು ಸಂಪೂರ್ಣವಾಗಿ ವಿವರಿಸಲಾಗುವುದಿಲ್ಲ ಎಂದು ಈ ಕೊನೆಯ ಅಂಶವು ಸೂಚಿಸುತ್ತದೆ. ಸಕಾರಣ ನಂಬಿಕೆಗಿರುವ ಷರತ್ತುಗಳನ್ನು ನಾನು ಇಲ್ಲಿ ಚರ್ಚಿಸಲು ಸಾಧ್ಯವಿಲ್ಲ, ಆದರೆ ಮಾಹಿತಿಯುಕ್ತ ಸಿದ್ಧಾಂತಗಳಿಗೆ ಕೊರತೆ ಇಲ್ಲ, ಮತ್ತು ಸಕಾರಣ ನಂಬಿಕೆಯನ್ನು ಅರ್ಥಮಾಡಿಕೊಳ್ಳುವುದು ಒಂದು

ಮುಖ್ಯವಾದ ತಾತ್ವಿಕ ಸಮಸ್ಯೆಯಾಗಿದ್ದು, ಅವುಗಳ ನಿವಾರಣೆಯ ಮೇಲೆ ತತ್ವಶಾಸ್ತ್ರದಲ್ಲಿನ ಅನೇಕ ವಿಶೇಷ ಸಿದ್ಧಾಂತಗಳು ಸ್ವಲ್ಪ ಮಟ್ಟಿಗೆ ಅವಲಂಬಿಸಿರುತ್ತವೆ. ಆದಾಗ್ಯೂ, ನಾವು ಸಕಾರಣವಾದ ನಂಬಿಕೆಯ ಪರಿಕಲ್ಪನೆಯನ್ನು ಪೂರ್ವಭಾವಿಸಬಹುದಾದರೆ, ಸಂಭವನೀಯವಾಗಿ ನಾವು ಸಕಾರಣವಾದ ಕ್ರಿಯೆಯನ್ನು ಸಕಾರಣ ಪ್ರತಿಪಾದನೆಯ ಮನೋಭಾವನೆಗಳಲ್ಲಿ ಸಕಾರಣ ನಂಬಿಕೆಗಳನ್ನು ಆಧಾರವನ್ನಾಗಿ ಹೊಂದಿರುವುದಾಗಿ ಪರಿಕಲ್ಪಸಿಬಹುದು.

ಖಚಿತವಾಗಿ ಹೇಳುವುದಾದರೆ ಪ್ರಮಾಣದ ಪ್ರಶ್ನೆಗಳಿವೆ (questions of degree). ಈ ಅರ್ಥದಲ್ಲಿ *A* ದೃಢ ಆಧಾರವನ್ನು ಹೊಂದಿದೆ ಎಂದು ಭಾವಿಸೋಣ, ಆದರೆ ಸಂದರ್ಭಕ್ಕೆ ಪ್ರಸ್ತುತವಾದ ಎಲ್ಲವನ್ನೂ ಗಣನೆಗೆ ತೆಗೆದುಕೊಂಡರೆ *B* ಹೆಚ್ಚು ಉತ್ತಮ ಎಂದು *S* ನೋಡಿರಬೇಕಿತ್ತು. ಇದು *S* ನ *A*-ಮಾಡುವಿಕೆಯು *'ವಿಚಾರಹೀನ'* ವಾಗಿದೆ ಎಂದು ಸೂಚಿಸುವುದಿಲ್ಲ, ಆದರೆ ಇಲ್ಲಿ ಒಂದು ರೀತಿಯ ತಪ್ಪು ಇದೆ: *B* ಅನ್ನು ಆಯ್ಕೆ ಮಾಡುವುದು ಉತ್ತಮವಾಗಿರುತ್ತಿತ್ತು. ಹಾಗಾದರೆ, ಸಂಪೂರ್ಣ ಸಕಾರಣವಾದ ರೀತಿಯಲ್ಲಿ ಕಾರ್ಯನಿರ್ವಹಿಸಲು ನಾವು ಕೆಲವು ಮೌಲ್ಯಗಳಿಗೆ ಅತಿಯಾಗಿ ಪ್ರಾಮುಖ್ಯತೆ ಕೊಡಬೇಕೇ? ಈ ತೀರ್ಮಾನವು ಸರಿ ಅನಿಸುವುದಿಲ್ಲ. ಅದು ಹಾಗೆ ಸರಿ ತೋರಬಹುದು ಏಕೆಂದರೆ, ನಾವು ಎರಡು ಭಿನ್ನವಾದ ಆದರೆ ಸಮಾನವಾಗಿ ಸ್ವೀಕಾರಾರ್ಹ ಆಯ್ಕೆಗಳ ನಡುವೆ ಆರಿಸುತ್ತಿದ್ದರೆ ಮತ್ತು ಅವುಗಳಲ್ಲಿ ಒಂದು ಮಾನವ ಏಳಿಗೆಗೆ (ಎನ್ನುವುದಾದರೆ) ಹೆಚ್ಚು ಕೊಡುಗೆ ನೀಡುತ್ತದೆ ಎಂಬುದು ಸ್ಪಷ್ಟವಾಗಿದ್ದರೆ, ಉದಾಹರಣೆಗೆ, ಒಂದೇ ಕಾಳಜಿಗಳನ್ನು ಹೊಂದಿದ್ದರೂ ಸಹ, ಔದಾರ್ಯದ ಪ್ರತಿಸ್ಪರ್ಧಿಯಾದ ಅನೌದಾರ್ಯಕ್ಕಿಂತ ಔದಾರ್ಯ ಹೆಚ್ಚು ಪರಿಣಾಮಕಾರಿ ಎಂದರೆ, ಆಗ ನಾವು ಉತ್ತಮವಾದದ್ದನ್ನು ಆಯ್ಕೆ ಮಾಡಬೇಕು. ನಾವು ಯಾವಾಗಲೂ ಮೌಲ್ಯಗಳಿಗೆ ಮಿತಿ ಮೀರಿದ ಮಹತ್ತ್ವ ನೀಡಬೇಕಿಲ್ಲ ಎನ್ನುವುದು ನಮ್ಮ ದೈನಂದಿನ ಚಟುವಟಿಕೆಯಲ್ಲಿ ಅಥವಾ ನಮ್ಮ ಸಾಮಾನ್ಯ ಕರ್ತವ್ಯಗಳ ನಿರ್ವಹಣೆಯ ಸಂದರ್ಭದಲ್ಲಿ ನಮ್ಮೆದುರು ಬರುವ ಒಳ್ಳೆಯದನ್ನು ಹೆಚ್ಚಿಸುವ ಅವಕಾಶಗಳನ್ನು ನಾವು ನಿರ್ಲಕ್ಷಿಸುವುದನ್ನು ಅನುಮತಿಸುವುದಿಲ್ಲ.

ಏಳಿಗೆಗೆ ಕೊಡುಗೆ ನೀಡುವ (ಅಥವಾ ಇನ್ನಾವುದೋ ಮೌಲ್ಯ) ಒಂದು ಆಯ್ಕೆಯಲ್ಲಿ ಗ್ರಹಿಸಬಹುದಾದ ನಿಕೃಷ್ಟ ಗುಣ (ಮೌಲ್ಯದ)ದ ನಿರ್ಥಕಗೊಳಿಸುವ ಪಾತ್ರದಿಂದ, ನಾವು ಯಾವಾಗಲೂ ಒಂದು ಮೌಲ್ಯಕ್ಕೆ ಅತಿಯಾಗಿ ಪ್ರಾಮುಖ್ಯತೆ ಕೊಡಬೇಕು ಅಥವಾ ಸಕಾರಾತ್ಮಕವಾಗಿ ಒಂದು ಮೌಲ್ಯಕ್ಕೆ ಅತಿಯಾಗಿ ಪ್ರಾಮುಖ್ಯತೆ ನೀಡಬೇಕೆಂಬ ಗುರಿಯನ್ನು ಹೊಂದಿರುವುದಕ್ಕೆ ಬದ್ಧರಾಗಿದ್ದೇವೆ ಎಂದು ನಿರ್ಣಯಿಸುವುದು ಒಂದು ಗಂಭೀರವಾದ ದೋಷವಾಗುತ್ತದೆ.[26] ವಾಸ್ತವಿಕ ಆಯ್ಕೆಗಳನ್ನು ಮಾಡುವಲ್ಲಿ *'ಪ್ರಾಶಸ್ತ್ಯದ ಮಾನದಂಡ (preferential standard)'* ಕ್ಕೆ ಬದ್ಧತೆಯು ಸರಿಯಾಗಿರುವುದರ ಪ್ರಮಾಣವಾಗಿ ಅಥವಾ ಆಲೋಚಿಸುವುದರ ಸಾಮಾನ್ಯ ನೀತಿಯಾಗಿ ಒಂದು ಅತಿಯಾಗಿ ಒತ್ತು ಕೊಟ್ಟಿರುವ ಮಾನದಂಡವನ್ನು ಅಳವಡಿಸಿಕೊಳ್ಳುವುದಕ್ಕೆ ಬದ್ಧರಾಗಿರುವುದನ್ನು ಒಳಗೊಳ್ಳುವುದಿಲ್ಲ. ನಾವು ಆಯ್ಕೆಗಳನ್ನು ಪರಿಗಣಿಸಿದಾಗ ಹೆಚ್ಚು ಮೌಲ್ಯವಿಲ್ಲದ ಪರ್ಯಾಯವನ್ನು ಆಯ್ಕೆ ಮಾಡುವುದನ್ನು ತಪ್ಪಿಸುವುದು ಒಂದು ವಿಷಯವಾದರೆ, ಪ್ರಾರಂಭದಲ್ಲಿಯೇ ನಮ್ಮ ಆಯ್ಕೆಗಳು ಮತ್ತು ಆಲೋಚನೆಗಳನ್ನು ಅತಿಯಾಗಿ ಒತ್ತು ಕೊಟ್ಟಿರುವ ಮೌಲ್ಯಗಳು ನಿಯಂತ್ರಿಸಬೇಕು ಎನ್ನುವುದು ಇನ್ನೊಂದು ವಿಷಯ.

ಅನೇಕ ಅಂಶಗಳಲ್ಲಿ ನನ್ನ ದೃಷ್ಟಿಕೋನವು ಸಾಧನಭೂತವಲ್ಲದ ಅಪೇಕ್ಷೆಗಳು ಕ್ರಿಯೆಗೆ ಕಾರಣಗಳನ್ನು ಒದಗಿಸುವ ಆಧಾರವನ್ನಾಗಿ ಪರಿಕಲ್ಪಿಸುವ ಮತ್ತು ಆದ್ದರಿಂದ $P_1$ ಮತ್ತು M/E ನಂತಹ ವ್ಯಾವಹಾರಿಕ ನಿರ್ಮಿಸುವ ತತ್ವಗಳನ್ನು ಅನುಮೋದಿಸುವ ಹ್ಯೂಮ್‌ನ ಸಾಧನಭೂತವಾದಕ್ಕೆ ವ್ಯತಿರಿಕ್ತವಾಗಿವೆ ಎಂಬುದು ಸ್ಪಷ್ಟವಾಗುವುದು. ವಸ್ತುನಿಷ್ಠ ದೃಷ್ಟಿಕೋನದ ಶ್ರೇಷ್ಠತೆಗಾಗಿ ವಾದಿಸುವ ಸರಿಯಾದ ಸಂದರ್ಭವು ಇದಲ್ಲ. ಇದಲ್ಲದೇ, ನನ್ನ ಅನೇಕ

ಅಂಶಗಳನ್ನು ಹ್ಯೂಮ್‌ನ ಸಿದ್ಧಾಂತದ ಅನುಯಾಯಿಗಳು ಒಪ್ಪಬಹುದು: ಅವೆಂದರೆ ಮೂಲಭೂತ ಕಾರಣಗಳು ಬಹುಸಂಖ್ಯೆಯಿವೆ (ಅವರು ಎಲ್ಲವನ್ನೂ ಅಪೇಕ್ಷೆ-ಆಧಾರಿತವೆಂದು ಪರಿಗಣಿಸಿದರೂ ಸಹ); ಕರ್ತೃ ಅದರ ಪ್ರಮೇಯಗಳನ್ನು ಸಕಾರಣವಾಗಿ ನಂಬಿದಾಗ ಮತ್ತು ತೀರ್ಮಾನವನ್ನು ಸಮರ್ಥಿಸಲು ಅವುಗಳನ್ನು ಪರಿಗಣಿಸುವುದರಲ್ಲಿ ಸಮರ್ಥನೆ ಹೊಂದಿದ್ದಾರೆ ಎಂದಾಗ ಮಾತ್ರ ವ್ಯಾವಹಾರಿಕ ಕಾರಣವಾದವು ದೋಷರಹಿತವಾಗಿರುತ್ತದೆ; ವ್ಯಾವಹಾರಿಕ ಕಾರಣವಾದದ ತೀರ್ಮಾನಕ್ಕೆ ಅನುಗುಣವಾಗಿರುವ ಕ್ರಿಯೆಯು ಸಕಾರಣವಾಗಿರುವುದು ಅದು ಕಾರಣವಾದವನ್ನು ಆಧರಿಸಿದ್ದರೆ ಮತ್ತು ಆ ಕಾರಣವಾದದ ಕಾರಣದ ಆಧಾರದ ಮೇಲೆ ಮಾತ್ರ; ಮತ್ತು ಸಾಮಾನ್ಯವಾಗಿ ಒಂದು ಕ್ರಿಯೆಯು ಸಕಾರಣವಾಗಿರುವುದು ಅದು ಕೆಲವು ಪ್ರತಿಪಾದನೆಯ ಮನೋಭಾವನೆಗಳಲ್ಲಿ ಸಕಾರಣ ನಂಬಿಕೆಯಿಂದ ಆಧಾರಿತವಾಗಿದ್ದರೆ ಮಾತ್ರ. ಮುಖ್ಯ ವ್ಯತ್ಯಾಸವೆಂದರೆ (ಆಂತರಿಕ ಅಸಂಗತತೆ ಮತ್ತು ಅಪೇಕ್ಷೆಯನ್ನು ಸಾಕಾರಗೊಳಿಸುವ ಸ್ಪಷ್ಟ ಅನುಭವನಿಷ್ಠ ಅಸಾಧ್ಯತೆಯಂತಹ ದೋಷಗಳ ಹೊರತಾಗಿ) ಹ್ಯೂಮ್‌ನ ಸಿದ್ಧಾಂತದ ಅನುಯಾಯಿಗಳಿಗೆ ಯಾವುದೇ ಸಾಧನಭೂತವಲ್ಲದ ಅಪೇಕ್ಷೆಯು ಸಕಾರಣವಾದ ಕ್ರಿಯೆಗೆ ಆಧಾರವನ್ನು ಒದಗಿಸುತ್ತದೆ.

ನಾನು ಚಿತ್ರಿಸಿರುವ ವಸ್ತುನಿಷ್ಠವಾದ ರೀತಿಯ ಸಿದ್ಧಾಂತ ಮತ್ತು ವ್ಯಕ್ತಿನಿಷ್ಠವಾದ ಸಾಧನಭೂತವಾದಗಳ ನಡುವಿನ ವ್ಯತ್ಯಾಸವು ಔಪಾಧಿಕ ಕಡ್ಡಾಯ ನಿಯಮಗಳನ್ನು ಹೇಗೆ ಪರಿಗಣಿಸುತ್ತೇವೆ ಎಂಬುದಕ್ಕೆ ನೇರವಾಗಿ ಸಂಬಂಧಿಸಿದೆ. ನನ್ನ ದೃಷ್ಟಿಯಲ್ಲಿ, ನಿರುಪಾಧಿಕ ಕಡ್ಡಾಯ ನಿಯಮಗಳು ಇಲ್ಲದಿದ್ದರೆ ಯಾವುದೇ ಔಪಾಧಿಕ ಕಡ್ಡಾಯ ನಿಯಮಗಳೂ ಸಹ - ನಿಯಮಾಧೀನ ಸುಸಂಬದ್ಧತೆಯ ತತ್ವಗಳಿಗೆ ವಿರುದ್ಧವಾಗಿ- ಇರುವುದಿಲ್ಲ: ಯಾವುದೋ ಒಂದು ನಿರಪೇಕ್ಷವಾಗಿ ಬೇಕಿದ್ದರೆ ಹೊರತು, ಒಂದು ಷರತ್ತು ಆಗಲೇ ಇದ್ದರೆ ಆಗ ಯಾವುದೂ ಅಗತ್ಯವಿಲ್ಲ. ಅಂತೆಯೇ, ನಮಗೆ ಏನೋ ಒಂದು ಬೇಕೇಬೇಕು ಎಂದಾದಾಗ ನಾವು ಏನೋವೊಂದನ್ನು ಮಾಡಲೇ ಬೇಕಾದ ಅಗತ್ಯವಿದೆ ಹೊರತು, ನಾವು ಬಯಸಿದ್ದು ಇದ್ದರೆ ನಾವು ಮಾಡಬೇಕಾದದು ಏನೂ ಇಲ್ಲ. ನಾವು ಅಸಂಬದ್ಧತೆಯನ್ನು ತಪ್ಪಿಸುವ ಅಸಂದಿಗ್ಧ ಅವಶ್ಯಕತೆಯೂ ಸಹ ನಿಯಮಾಧೀನ ಸುಸಂಬದ್ಧತೆಯ ತತ್ವಗಳ ಪ್ರಮಾಣಕ ಸ್ಥಿತಿಗೆ ಕಾರಣವಾಗಿದೆ. ನಿರುಪಾಧಿಕ ಕಡ್ಡಾಯ ನಿಯಮದ ಚೌಕಟ್ಟಿನ ಅನ್ವಯದ ಬೆಳಕಿನಲ್ಲಿ, ಕ್ಯಾಂಟ್ ನಿರ್ದಿಷ್ಟವಾಗಿ ಒಬ್ಬರು *'ವಿವೇಚನಾಶೀಲರಾಗಿ '* ಇಚ್ಛಿಸಿದ್ದನ್ನು ಸಕಾರಣ ಎಂಬುದಾಗಿ ಪರಿಕಲ್ಪಿಸಿದ್ದರೆ ಆಗ ಅವರ ಆಲೋಚನೆಯೂ ಇದೇ ಇದ್ದಿರಬಹುದು.[27]

ಹ್ಯೂಮ್ ಸಿದ್ಧಾಂತದ ಅನುಯಾಯಿಗಳೂ ಸಹ ನಿರುಪಾಧಿಕ ಕಡ್ಡಾಯ ನಿಯಮಗಳ ಮೇಲೆ ಔಪಾಧಿಕ ಕಡ್ಡಾಯ ನಿಯಮಗಳ ಅವಲಂಬನೆಯನ್ನು ಒಪ್ಪುತ್ತಾರೆ ಎಂದು ತೋರಬಹುದು, ಏಕೆಂದರೆ ಅವರಿಗೆ ಒಂದು ಸೂಕ್ತವಾದ ಸಾಧನಭೂತವಲ್ಲದ ಅಪೇಕ್ಷೆಯ ಇರುವಿಕೆಯೇ "ನಿರಪೇಕ್ಷವಾಗಿ" ಕ್ರಿಯೆಗೆ ಕಾರಣ ಆಧಾರವನ್ನು 'ರೂಪಿಸುತ್ತದೆ.' ಆದರೆ ಇದು ದೋಷಪೂರಿತವಾಗಿರುತ್ತದೆ: ಹ್ಯೂಮ್ ಸಿದ್ಧಾಂತದ ಅನುಯಾಯಿಗಳು ಕಾರಣವನ್ನು ಅದು ನಾವು ನಿರಪೇಕ್ಷವಾಗಿ ಯಾವುದೇ ಅಪೇಕ್ಷೆಗಳನ್ನಾಗಲೀ, ಯಾವುದೇ ನಿರ್ದಿಷ್ಟ ಅಪೇಕ್ಷೆಗಳನ್ನಾಗಲೀ ಹೊಂದಿರುವುದನ್ನು ಬೇಡುತ್ತದೆ ಎಂಬುದಾಗಿ ಪರಿಕಲ್ಪಿಸುವುದಿಲ್ಲ. ಸ್ವಾಭಾವಿಕವಾಗಿಯೇ ಬಯಸುವಂತ ಮೌಲ್ಯಯುಳ್ಳದ್ದು ಏನೂ ಇಲ್ಲ; ನಾವು ಸಕಾರಣವಾಗಿ ಅಪೇಕ್ಷೆಯ ಪೂರೈಸುವಿಕೆಯನ್ನು ಬಯಸುವ ಅಗತ್ಯತೆ ಸಹ ಇಲ್ಲ. ನಾವು ಬಯಸುತ್ತಿರುವುದಾಗಿ ತೋರಬಹುದು, ಏಕೆಂದರೆ ಒಂದು ಅಪೇಕ್ಷೆಯನ್ನು ಹೊಂದಿದ್ದರೆ ಅದರ ಪೂರೈಸುವಿಕೆಯನ್ನು, ನಾವು ಅಪೇಕ್ಷಿಸಿದ್ದನ್ನು ಈಡೇರಿಸಿಕೊಳ್ಳಲು ಬಯಸುತ್ತೇವೆ ಎಂಬರ್ಥದಲ್ಲಿ, ಬಯಸುತ್ತೇವೆ ಎಂಬುದು ಸತ್ಯ. ಆದರೆ ನಮ್ಮ ಒಂದು ಅಥವಾ ಹೆಚ್ಚಿನದ ಅಪೇಕ್ಷೆಗಳ ಈಡೇರುವಿಕೆಗೆ ನಮ್ಮಲ್ಲಿ ಸೂಕ್ತವಾದ ಉನ್ನತ ಮಟ್ಟದ ಕಾರಣವಾದದ ಅಪೇಕ್ಷೆಯನ್ನು ಹೊಂದಿರಬೇಕು ಎಂದು ಹ್ಯೂಮ್ ನ ಸಿದ್ಧಾಂತವು ಬೇಡುವುದಿಲ್ಲ.

ಔಪಾಧಿಕ ಕಡ್ಡಾಯ ನಿಯಮಗಳು ಅವುಗಳ ಪ್ರಮಾಣಕ ಸತ್ವಕ್ಕೆ ನಿರುಪಾಧಿಕ ಕಡ್ಡಾಯ ನಿಯಮಗಳ ಮೇಲೆ ಅವಲಂಬಿತವಾಗಿವೆ, ಅಥವಾ ಹೆಚ್ಚು ನಿಖರವಾಗಿ, ಕ್ರಿಯೆಗೆ ಅಪೇಕ್ಷೆಗಳು ಮಾತ್ರ ಕಾರಣಗಳಾಗುವುದಿಲ್ಲ ಮತ್ತು, ಸ್ವತಃ ಅವು ಕ್ರಿಯೆಗೆ ಪ್ರಮಾಣಕ ಆಧಾರಗಳಿಗಿಂತ ಮನಶ್ಶಾಸ್ತ್ರೀಯ ಆಧಾರಗಳನ್ನು ಮಾತ್ರ ರೂಪಿಸುತ್ತವೆ ಎಂಬುದನ್ನು ನಿರೂಪಿಸಿದ್ದೇನೆ ಎಂದು ನಾನು ಹೇಳುತ್ತಿಲ್ಲ. ಆದರೆ ಒಂದು ಕಡೆ, ವ್ಯಾವಹಾರಿಕ ಮತ್ತು ಸೈದ್ಧಾಂತಿಕ ಸುಸಂಬದ್ಧತೆಯ ತತ್ವಗಳು ಮತ್ತು ಇನ್ನೊಂದೆಡೆ, ಔಪಾಧಿಕ ಕಡ್ಡಾಯ ನಿಯಮಗಳೆಂದು ಸಾಮಾನ್ಯವಾಗಿ ಅರ್ಥಮಾಡಿಕೊಂಡಿರುವಂತಹ ಪ್ರಮಾಣಕ ನಿರ್ಮಿಸುವ ತತ್ವಗಳ ನಡುವೆ ಸ್ಪಷ್ಟವಾಗಿ ಸರ್ವೇಸಾಮಾನ್ಯವಾಗಿ ಗುರುತಿಸದೇ ಉಳಿದಿರುವಂತಹ ಸೂಕ್ಷ್ಮ ವ್ಯತ್ಯಾಸವಿದೆ ಎಂದು ನಾನು ತೋರಿಸಿದ್ದೇನೆ. ಸುಸಂಬದ್ಧತೆಯ ತತ್ವಗಳು ಕಡ್ಡಾಯ ನಿಯಮಗಳಲ್ಲ, ಅಸಂಬದ್ಧತೆಯನ್ನು ತಪ್ಪಿಸಲು ನಾವು ಕಾರಣವನ್ನು 'ಪೂರ್ವಭಾವಿಸಬಹುದು' ಎಂದಾದರೆ ಮಾತ್ರ. ಇದನ್ನೇ ಒಂದು ಅರ್ಥದಲ್ಲಿ ಕಡ್ಡಾಯ ನಿಯಮದ (imperative) ಅಂಶ ಎಂದು ಭಾವಿಸಬಹುದು.

ಸುಸಂಬದ್ಧತೆಯ ತತ್ವಗಳು ಮತ್ತು ನಿಜವಾದ ಪ್ರಮಾಣಕ ನಿರ್ಮಿಸುವ ತತ್ವಗಳ ನಡುವಿನ ವ್ಯತ್ಯಾಸವನ್ನು ಒಮ್ಮೆ ಗಮನಿಸಿದರೆ, $HI_4$ನಂತಹ ಔಪಾಧಿಕ ಕಡ್ಡಾಯ ನಿಯಮಗಳು ಮತ್ತು ಇದೇ ರೀತಿಯ ಇತರ ತತ್ವಗಳು ಪ್ರಮಾಣಕವಾಗಿ ದೃಢವಾಗಿ ತೋರುವ ಸಾಧ್ಯತೆ ಕಡಮೆ. ಅಪೇಕ್ಷೆಗಳೇ ಆಗಲಿ ಅಥವಾ ಉದ್ದೇಶಗಳೇ ಆಗಲಿ ಅವು ಸ್ವತಂತ್ರವಾದ ಪ್ರಮಾಣಕ ಪ್ರಭಾವಿಸುವ ಶಕ್ತಿ ಹೊಂದಿರುವುದಿಲ್ಲ ಎಂದು ತೋರುತ್ತದೆ. ಸೈದ್ಧಾಂತಿಕ ಕ್ಷೇತ್ರದಲ್ಲಿ ಅಂತಹ ಔಪಾಧಿಕ ಕಡ್ಡಾಯ ನಿಯಮಗಳ ಪ್ರತಿರೂಪಗಳು ಸಂಭವನೀಯವಲ್ಲ; ಮತ್ತು ಆ ಕ್ಷೇತ್ರದಲ್ಲಿ, ಅನುಭವ -ವಿಶೇಷವಾಗಿ ಗ್ರಹಿಕೆಯ, ಸ್ಮರಣೆಯ, ಮತ್ತು ಪರ್ಯಾಲೋಚನೆಯ ಅನುಭವವು - ಸಕಾರಣವಾದ ನಂಬಿಕೆಯನ್ನು ಆಧಾರವಾಗಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಅನುಭವಗಳು - ವಿಶೇಷವಾಗಿ ಸಂತೋಷದ ತೃಪ್ತಿಕೊಡುವ ಅನುಭವಗಳು ಮತ್ತು ನೋವು ಮತ್ತು ಸಂಕಟದ ಒಲ್ಲದ ಅನುಭವಗಳು - ಸಕಾರಣದ ಅಪೇಕ್ಷೆಗಳನ್ನು ಮತ್ತು ಸಕಾರಣದ ಉದ್ದೇಶಗಳನ್ನು ಪ್ರಮಾಣಕ ಆಧಾರಗಳನ್ನಾಗಿಸಲು ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂದು ಯೋಚಿಸಲು ಒಂದೇ ರೀತಿಯದ ಕಾರಣಗಳಿವೆ. ಇದು ಹಾಗಿದ್ದಲ್ಲಿ, ವ್ಯಾವಹಾರಿಕ ಕಾರಣವು ವಾಸ್ತವಿಕವಾಗಿರುತ್ತದೆ. ಇದು ಸಕಾರಾಣಕ್ಕೆ ಅಸಂಬದ್ಧತೆಯನ್ನು ತಪ್ಪಿಸುವುದನ್ನು ಬೇಡುವಂತಹವುಗಳನ್ನು ಮೀರಿ ಮಾನದಂಡಗಳನ್ನು ಒದಗಿಸುತ್ತದೆ; ಮತ್ತು ಈ ಮಾನದಂಡಗಳು ವ್ಯಾವಹಾರಿಕ ಕಾರಣವಾದದ ಮೇಲೆ ಮತ್ತು ಹೆಚ್ಚು ಸಾಮಾನ್ಯವಾಗಿ, ಸಕಾರಣದ ಕ್ರಿಯೆಯ ಮೇಲೆ ವಿವಿಧ ನಿರ್ಬಂಧಗಳನ್ನು ಹೇರುತ್ತವೆ. ಸಕಾರಣದ ಕ್ರಿಯೆಯು ಕಾರಣಗಳನ್ನು ಆಧಾರವನ್ನಾಗಿ ಹೊಂದಿರುವ ಕ್ರಿಯೆಯಾಗಿದೆ; ಅದು ವ್ಯಾವಹಾರಿಕ ಕಾರಣವಾದವನ್ನು ಆಧರಿಸಿರಬಹುದು ಅಥವಾ ಆಧರಿಸದೆಯೂ ಇರಬಹುದು; ಆದರೆ ಅದು ಆಧರಿಸಿದ್ದರೆ, ಅದರ ವಿಚಾರಪರತೆಯನ್ನು ನಿಯಂತ್ರಿಸುವ ಮಾನದಂಡಗಳು ವ್ಯಾವಹಾರಿಕ ಕಾರಣದ ಸಾಮಾನ್ಯ ಸಿದ್ಧಾಂತದಲ್ಲಿ ಪ್ರಮುಖವಾಗಿರುವ ಅದೇ ರೀತಿಯದ ಆಧಾರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ತತ್ವಶಾಸ್ತ್ರ ವಿಭಾಗ
ನೋಟರ್ ಡ್ಯಾಮ್ ವಿಶ್ವವಿದ್ಯಾಲಯ
ನೋಟರ್ ಡ್ಯಾಮ್, ಇಲಿನೋಯ್,

ಇಂಡಿಯಾನಾ 46556,
raudi@nd.edu

**Notes:**

1. ಈ ಐದು ರೀತಿಯ ಕಾರಣಗಳನ್ನು ನನ್ನ "Acting for Reasons," *Philosophical Review* XCV (1986) ನಲ್ಲಿ ಪರಿಚಯಿಸಲಾಗಿದೆ ಮತ್ತು ಚರ್ಚಿಸಲಾಗಿದೆ. ನಂತರ ಇದು *ನನ್ನ Action, Intention, and Reason* (Ithaca and London: Cornell University Press, 1993) ನಲ್ಲಿ, ಮತ್ತು *The Architecture of Reason* (Oxford and New York: Oxford University Press, 2001), esp. ch. 5. ನಲ್ಲಿ ವಿಭಿನ್ನ ರೀತಿಯಲ್ಲಿ ಮರುಮುದ್ರಣಗೊಂಡಿದೆ. ಇಲ್ಲಿ ವಿವರಿಸಿರುವಂತೆ ಪ್ರೇರೇಪಿಸುವ ಕಾರಣಗಳು ಕ್ರಿಯೆಯನ್ನು ಪ್ರಚೋದಿಸುವಲ್ಲಿ ಅಥವಾ ಉಳಿಸಿಕೊಳ್ಳುವಲ್ಲಿ ಕಾರ್ಯನಿರ್ವಹಿಸುವುದರಿಂದ, ಅವುಗಳನ್ನು *ಸಕ್ರಿಯಗೊಳಿಸುವ ಕಾರಣಗಳು (activating reasons)* ಎಂದು ಕರೆಯಬಹುದು; ಮತ್ತು ವ್ಯಕ್ತಿನಿಷ್ಠ ಕಾರಣಗಳು ವರ್ತನೆಯನ್ನು ಸಕ್ರಿಯಗೊಳಿಸಬಹುದು ಅಥವಾ ಸಕ್ರಿಯಗೊಳಿಸದಿರಬಹುದಾದರೂ, ಅದನ್ನು ಪ್ರೇರೇಪಿಸಲು ಸೂಕ್ತವಾದ ಪ್ರಕಾರವಾಗಿರುವುದರಿಂದ ನಾವು *ಪ್ರೇರೇಪಿಸುತ್ತದೆ* ಬದಲಾಗಿ ಅವುಗಳನ್ನು *ಪ್ರೇರಕ* ಎಂದು ಕರೆಯಬಹುದು.)
2. ಸ್ವತಃ ಅದರ ಆಧಾರದ ಮೇಲೆ, ಒಂದು ಕ್ರಿಯೆ ಸಕಾರಣವಾಗಿದೆ ಎಂದು ಪರಿಗಣಿಸಲಾಗದಷ್ಟು ಚಿಕ್ಕದಾದ ಒಂದು ಕಾರಣವಿರಬಹುದಾದ ಸಾಧ್ಯತೆಯನ್ನು ಹೇಗೆ ಪರಿಗಣಿಸಬೇಕು? ಅಂತಹ ಒಂದು ಸಣ್ಣ ಕಾರಣ ಸಮರ್ಥ 'ಕಾರಣ' ಎಂದು ಪರಿಗಣಿಸುವುದಕ್ಕೆ ಅರ್ಹವಾಗಿದ್ದರೆ, ಆಗ ಯಾವುದೋ ಒಂದು ಸಂದರ್ಭದಲ್ಲಿ ಆ ಕಾರಣವನ್ನು ಸಕಾರಣವೆಂದು ಪರಿಗಣಿಸಲು ಸಾಧ್ಯವಾಗಿಸುವ ಸಾಕಷ್ಟು ಸಣ್ಣ ಕ್ರಿಯೆಯ ಸಾಧ್ಯತೆ ಇದೆ ಎಂದು ನಾನು ಭಾವಿಸುತ್ತೇನೆ. ಪರ್ವತಾರೋಹಣ ಮಾಡುವಾಗ, ಒಂದು ಎಲೆಯ ಆಕಾರದ ಬಗೆಗಿನ ಸಣ್ಣ ಕುತೂಹಲವು ಸಹ ಅದನ್ನು ಪರೀಕ್ಷಿಸುವುದನ್ನು ಸಕಾರಣವನ್ನಾಗಿ ಮಾಡುತ್ತದೆ.
3. ವ್ಯಕ್ತಿಯು ತಿಳಿದಿರುವ ಅಥವಾ ಅಸಾಧ್ಯವೆಂದು ನಂಬುವ *ಅಪೇಕ್ಷೆಯ* ಇಚ್ಛಾ ವಸ್ತು ವಿಚಾರಹೀನವಾಗಿದೆ ಎಂದು ನಾನು ಹೇಳುವುದಿಲ್ಲ, ಏಕೆಂದರೆ ನನ್ನ ಪ್ರಕಾರ ನಾವು ಪಡೆಯಲು ಅಸಾಧ್ಯವೆಂದು ನಂಬಿರುವ ವಸ್ತುವಿನ ಬಗ್ಗೆ, ನಾವು ಅಪೇಕ್ಷೆಯ (ತಾತ್ಕಾಲಿಕವಾಗಿ ನಂಬಿಕೆಯನ್ನು ಮರೆತುಬಿಡುವಂತಹ ಲೋಪಗಳ ಹೊರತಾಗಿ) ಬದಲಾಗಿ ಕೇವಲ ಆಸೆಯನ್ನು ಮಾತ್ರ ಹೊಂದಬಹುದು. ಅಂತಹ *ಯಾವುದೇ* ಕಾರ್ಯಪ್ರೇರಕ (conative) ಮನೋಭಾವವನ್ನು ನಾವು ವಿಚಾರಹೀನವೆಂದು ಪರಿಗಣಿಸಬಹುದು. ಆದರೆ ಉದಾಹರಣೆಗೆ, ವೃತ್ತವನ್ನು ಚೌಕವನ್ನಾಗಿ (ಅಂದರೆ, ಯಾವುದೇವೊಂದನ್ನು ಮಾಡಲು ಅಸಾಧ್ಯವೆಂದು ಪರಿಗಣಿಸಲಾದ) ಮಾಡಲು ಸಾಧ್ಯವಿಲ್ಲವಾದರೂ ಹಾಗೆ ಮಾಡಲು ಬಯಸುವುದು ಸಕಾರಣವೆಂದು ಹೊಂದಿರುವ ನಂಬಿಕೆಯನ್ನು ಪರಿಗಣಿಸಲು ನಾನು ಸಿದ್ಧ. ಅದೇನೇ ಇದ್ದರೂ, ಅಂತಹ ಆಸೆಯು ತನ್ನ ಇಚ್ಛಾ ವಸ್ತುವನ್ನು ಪಡೆಯಲು ಸಾಧ್ಯವಾಗಿಸಿದ ಕ್ರಿಯೆಯನ್ನು ಸಕಾರಣಗೊಳಿಸುವುದಿಲ್ಲ ಎಂಬುದನ್ನು ಗಮನಿಸುವುದು ಮುಖ್ಯ.
4. ನಂಬಿಕೆಗಳು, ಮುಂದಿನ ನಂಬಿಕೆ ಅಥವಾ ಕ್ರಿಯೆಗೆ, ಎಲ್ಲಾ ಐದು ರೀತಿಯ ಕಾರಣವನ್ನು ಒದಗಿಸಬಹುದಾದರೂ ಸಹ, ಕೇವಲ ಒಬ್ಬರು ಏನು ಮಾಡುತ್ತಾರೆ ಅಥವಾ 'ಮಾಡಲು ಬಯಸಬೇಕು' ಎನ್ನುವುದು ಸಕಾರಣವಾಗಿರುವ ಸಂದರ್ಭದಲ್ಲಿ ಮಾಡಲು ಬಯಸಬೇಕು ಎಂಬ ಕಾರಣಕ್ಕೆ ಅವು ಕ್ರಿಯೆಗೆ ಹಾಗೆ ಮಾಡಬಹುದು. ಖಚಿತವಾಗಿ ಹೇಳಬೇಕೆಂದರೆ, ಬಯಕೆಗಳಿಗೆ ತದ್ವಿರುದ್ಧವಾಗಿ ನಂಬಿಕೆಗಳು, ಸಾಕಷ್ಟು ಸಹಜವಾಗಿ ಕ್ರಿಯೆಗೆ ಕಾರಣಗಳಾಗಿ ವಿವರಿಸಲ್ಪಡುವುದಿಲ್ಲ. ನನ್ನ ಪ್ರಕಾರ ಇದು ಹೀಗೇಕೆ ಎಂದರೆ, ನಮಗೆ ಏನು ಬೇಕು ಅಥವಾ ಸಂಭಾವ್ಯವಾಗಿ ಯಾವುದೋ ಒಂದು ವಸ್ತುನಿಷ್ಠ ಅರ್ಥದಲ್ಲಿ ಮಾಡ ಬಯಸಲೇಬೇಕು ಎಂಬುದನ್ನು ಹೊರತುಪಡಿಸಿ ಕ್ರಿಯೆಗೆ

ಕಾರಣಗಳು ಇರಲು ಸಾಧ್ಯವಿಲ್ಲ. ಉದಾಹರಣೆಗೆ, ಒಂದು ವೇಳೆ, ಸ್ವತಃ ತನ್ನದೇ ಆದ ಕಾರಣಕ್ಕೆ ನೀಳ ಗೀತೆ (aria) ಯನ್ನು ಕೇಳುವುದು ಆನಂದದಾಯಕವಾಗಿರುತ್ತದೆ ಎಂಬ ನಂಬಿಕೆಯು ಅದನ್ನು ಕೇಳಲು ಕಾರಣವನ್ನು ಒದಗಿಸಿದರೆ, ಅದನ್ನು ಕೇಳಬಯಸುವುದಕ್ಕೂ ಸಹ ಒಂದು ಕಾರಣವನ್ನು ಒದಗಿಸುತ್ತದೆ, ಮತ್ತು ನಂತರದಕ್ಕೆ ಕಾರಣವನ್ನು ಒದಗಿಸುವುದರ ಹೊರತಾಗಿ ಮೊದಲನೆಯದಕ್ಕೆ ಕಾರಣವನ್ನು ಅದು ನೀಡಲು ಸಾಧ್ಯವಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಒಬ್ಬರಿಗೆ ಏನು ಬೇಕು ಅಥವಾ ಬಯಸಲೇ ಬೇಕು ಎನ್ನುವುದಕ್ಕೆ, ಅಥವಾ ಸಂಜ್ಞಾನಾತ್ಮಕ - ಸಂಬಂಧಿತವಲ್ಲದ ಮನೋಭಾವನೆಗಳಿಗೆ ಹೊರತಾಗಿ ಒಂದು ನಂಬಿಕೆಯು ಮುಂದಿನ ಒಂದು ನಂಬಿಕೆಗೆ ಕಾರಣವನ್ನು ವ್ಯಕ್ತಪಡಿಸಬಹುದು; ಮತ್ತು ನಂಬಿಕೆಗಳ ಈ ಸಾಕ್ಷ್ಯಾಧಾರವಾದ ಪಾತ್ರವನ್ನು ಸಾಮಾನ್ಯವಾಗಿ ಅವುಗಳ ಪ್ರಮುಖ ಕಾರಣ-ನೀಡುವ ಕಾರ್ಯವೆಂದು ಪರಿಗಣಿಸಲಾಗುತ್ತದೆ.

5. A comprehensive theory of rationality is set out in my *Architecture of Reason*.
6. I have explicated and critically assessed Humean instrumentalism in "Prospects for a Naturalization of Practical Reason: Humean Instrumentalism and the Normative Authority of Desire," *International Journal of Philosophical Studies* 10 (2002).
7. For accounts of constructivism, see John Rawls, *Lectures on the History of Moral Philosophy* (Cambridge: Harvard University Press, 2000) and "Kantian Constructivism in Moral Theory," *Journal of Philosophy* 77 (1980); Christine Korsgaard, *Sources of Normativity* (Cambridge: Cambridge University Press, 1996); and Onora O'Neill, "Kantian Constructivism," in Samuel Freeman, ed., *The Cambridge Companion to Kant* (Cambridge: Cambridge University Press, 2003).
8. For an instrumentalistic view of the qualified kind I have in mind, see Richard B. Brandt, *A Theory of the Good and the Right* (Oxford: Oxford University Press, 1979).
9. In my *Architecture of Reason*, esp. chs 3–5.
10. ಸೈದ್ಧಾಂತಿಕ ಕಾರಣಕ್ಕೆ ದೊರೆಯಬಹುದಾದ ದೃಢ ನಂಬಿಕೆಗಳಿಂದ ಕ್ರಿಯೆಗೆ ಕಾರಣಗಳನ್ನು ಪಡೆಯಲು ಅನುಮತಿಸುವ ಒಂದು ರೀತಿಯ ಉದಾಹರಣೆಯಾಗಿ ದೈವಿಕ ಆಜ್ಞೆಯ ಸಿದ್ಧಾಂತವಿದೆ. ಅಂತಹ ಒಂದು ಸಿದ್ಧಾಂತವು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ವಿವರಣೆಗೆ, Robert Merrihew Adams, *Finite and Infinite Goods* (Oxford: Oxford University Press, 2000) ನೋಡಿ. ಪ್ಲೇಟೋವಿನ ಸರಳೀಕರಣ ತತ್ವದ ಆಧಾರದ ಮೇಲೆ ಹೇಗೆ ಪ್ರಾಯೋಗಿಕ ಕಾರಣವನ್ನು ಸೈದ್ಧಾಂತಿಕ ಕಾರಣವನ್ನಾಗಿ ಪರಿವರ್ತಿಸಲು ಸಾಧ್ಯ ಎಂಬುದನ್ನು ನನ್ನ "Moral Judgment and Reasons for Action," in my *Moral Knowledge and Ethical Character* (Oxford: Oxford University Press, 1997) ನಲ್ಲಿ ತೋರಿಸಲಾಗಿದೆ. ಕ್ಯಾಂಟ್‌ನ ಸಿದ್ಧಾಂತವಾದ ರಾಚನಿಕವಾದದ ವಿವರಣೆಗಳಿಗಾಗಿ, ಮೇಲೆ ಉಲ್ಲೇಖಿಸಲಾದ ರಾಲ್ಸ್ ಅವರ ಕೃತಿಗಳನ್ನು ನೋಡಿ. ಕ್ರಿಸ್ಟೀನ್ ಕೋರ್ಸ್ಗಾರ್ಡ್‌ನ ದೃಷ್ಟಿಕೋನವಾದ "...ನಿಜವಾದ ಕ್ಯಾಂಟ್‌ನ ಸಿದ್ಧಾಂತದ ತಂತ್ರವೇನೆಂದರೆ ಮೊದಲು ಸಕಾರಣತೆಗೆ ಒಂದು ವಿವರಣೆಯನ್ನು ನೀಡುವುದು - ನಾವು ಮುಂದೆ ನೋಡುವಂತೆ, ಮಾನವ ಮನಸ್ಸಿನ ಇಚ್ಛಾ-ಸ್ವಾತಂತ್ರ್ಯವನ್ನಾಗಿ – ಮತ್ತು ತದನಂತರ ವಿಚಾರಪರತೆಯ ಪರಿಭಾಷೆಯಲ್ಲಿ ಕಾರಣಗಳನ್ನು ವ್ಯಾಖ್ಯಾನಿಸುವುದು, ಅಂದರೆ ಇಚ್ಛಾ-ಸ್ವಾತಂತ್ರ್ಯವಾಗಿ ಇಚ್ಛಿಸಲಾಗುವಂತಹವು ಆಗಿರಬಹುದು ಅಥವಾ ಇಚ್ಛಾ-ಸ್ವಾತಂತ್ರ್ಯ ಸಂಕಲ್ಪಕ್ಕೆ ಅನುಗುಣವಾಗಿ ಪರಿಗಣಿಸುವಂತಹವುಗಳು ಆಗಿರಬಹುದು ಎಂದು ತಿಳಿಯೋಣ." ನೋಡಿ "The Normativity of Practical Reason," in Garrett Cullity and Berys Gaut, *Ethics and Practical Reason* (Oxford: Oxford University Press, 1997), p. 243. ಇದು ಸೈದ್ಧಾಂತಿಕ ಕಾರಣದ ಪ್ರಾಮುಖ್ಯತೆಯನ್ನು ಸೂಚಿಸಿದರೂ, ಅದನ್ನು ಅಗತ್ಯವಾಗಿಸುವುದಿಲ್ಲ; ಆದರೆ ಇದು ಸ್ಪಷ್ಟವಾಗಿ ವ್ಯಾವಹಾರಿಕ ಕಾರಣವನ್ನು ಅರ್ಥಮಾಡಿಕೊಳ್ಳಲು ಬಹಿರ್ಗಣನೆಯ (extrapolative - ಜ್ಞಾತದಿಂದ ಅಜ್ಞಾತವನ್ನು ಊಹಿಸುವ) ತಂತ್ರದ ರೇಖಾಚಿತ್ರವಾಗಿದೆ.
11. ಆರ್.ಜೆ.ವಾಲೇಸ್‌ನಂತಹ ಒಬ್ಬ ಜಾಗರೂಕ ಬರಹಗಾರ ಕೂಡ ಕೆಲವೊಮ್ಮೆ ಅವುಗಳ ನಡುವಿನ ವ್ಯತ್ಯಾಸವನ್ನು ಗಮನಿಸದೆ ವ್ಯಾವಹಾರಿಕ ಕಾರಣದ ಅಂಶಗಳನ್ನು ವ್ಯಾವಹಾರಿಕ ಕಾರಣವಾದದ ಅಂಶಗಳಿಗೆ ಸಮನಾರ್ಥಕವಾಗಿ ಬಳಸುತ್ತಾರೆ (ಅವರು ಅವುಗಳನ್ನು ಸಮಾನವೆಂದು ಪರಿಗಣಿಸುವುದಿಲ್ಲ ಎಂಬುದರಲ್ಲಿ ಯಾವುದೇ

ಸಂದೇಹವಿಲ್ಲದಿದ್ದರೂ ಸಹ). ನೋಡಿ "How to Argue about Practical Reason," *Mind* 99 (1990), e.g. pp. 356 and 380–81.

12. I have defended these views in "Weakness of Will and Rational Action, "*Australasian Journal of Philosophy* 68 (1990) and "Moral Judgment and Reasons for Action," in *Moral Knowledge*. In the former, however, I indicate why the failure – as in certain cases of weakness of will – is only prima facie.
13. My *Practical Reasoning* (London and New York: Routledge, 1989) contains much discussion of what makes practical reasoning practical. See esp. ch 4.

14. ಮತ್ತೊಂದು ಸಮಸ್ಯೆಯೆಂದರೆ, ಸ್ವತಃ ತನ್ನ (*de se* first-person) ನಂಬಿಕೆಯ ವಿಷಯವನ್ನು ಹೇಗೆ ನಿರೂಪಿಸುವುದು ಎಂಬುದು. ಉದಾಹರಣೆಗೆ, ನಾನು ನನಗೆ ಏರ್‌ಲೈನ್ ಟಿಕೆಟ್ ಬೇಕು ಎಂದಾಗ ನಾನು ನನ್ನನ್ನು ಸ್ಪಷ್ಟವಾಗಿ ವೈಯಕ್ತಿಕ ರೀತಿಯಲ್ಲಿ ಕಲ್ಪಿಸಿಕೊಳ್ಳುತ್ತೇನೆ. ಈ ಲೇಖನವು ಈ ಸಮಸ್ಯೆಯನ್ನು ಪರಿಹರಿಸಲು ವಿವಿಧ ವಿಧಾನಗಳಿಗೆ ಅವಕಾಶ ನೀಡುತ್ತದಾದರೂ ಅಂತಹ ಒಂದು ನಿರ್ದಿಷ್ಟ ವಿಧಾನವನ್ನು ಪ್ರಸ್ತಾಪಿಸಲು ಸಾಧ್ಯವಿಲ್ಲ.

15. See G. E. M. Anscombe, *Intention* (2nd edn, Ithaca: Cornell University Press, 1963).
16. In *Practical Reasoning*, on which I draw substantially in this section, I called this the simplest "basic schema" (ch 4).
17. Korsgaard, "The Normativity of Practical Reason," p. 245.
18. James Dreier, "Humean Doubts about the Practical Justification of Morality", in Cullity and Gaut p. 98 (his variables have been altered to correspond with mine).

19. ಡ್ರಯರ್, ಈಗಾಗಲೇ ಉಲ್ಲೇಖಿಸಿರುವ ಕೃತಿಯಲ್ಲಿ ಪು. 98. "h ಅದು ನಿಜ ಆದರೆ ಅದನ್ನು ನಾನು ನಂಬುವುದಿಲ್ಲ ("h is true but I don't believe it")" ಎಂಬ ಮೂರ್ ಅವರ ವಿರುದ್ಧೋಕ್ತಿಯನ್ನು "*E* ಅದು ನನ್ನ ಗುರಿ, ಆದರೆ ನನ್ನ ಆಲೋಚನೆಯಲ್ಲಿ ಅಮುಖ್ಯ ("*E* is an end of mine, but that's nothing to me in my deliberation")" (ಪು. 68), ಎನ್ನುವ ಹೇಳಿಕೆಯೊಂದಿಗೆ ಪೀಟರ್ ರೇಲ್ಟನ್ ಅವರು (in "On the Hypothetical and Non-Hypothetical in Reasoning about Belief and Action," in Cullity and Gaut) ಮಾಡಿರುವ ಹೋಲಿಕೆಯಲ್ಲಿ, ನಾನು 'ನಿಜ' ಕ್ಕೆ ಸಮನಾಗಿರುವ 'ಒಳ್ಳೆಯದು' ಎಂಬ ಪದ ಅಥವಾ ಅಂತಹದೇ ಆದ ಕಲ್ಪನೆಯನ್ನು ವ್ಯಕ್ತಪಡಿಸುವ ಪದವನ್ನು ಬಳಸುತ್ತೇನೆ. ಹೆಚ್ಚು ಸುಸಂಬದ್ಧವಾಗಿ, ಅವರು ಹೀಗೆ ಹೇಳುತ್ತಾರೆ,

    E ನನ್ನ ಗುರಿ;

    ವಿಧಾನ M, E ಅನ್ನು ಸಾಧಿಸುತ್ತದೆ;

    ಆದ್ದರಿಂದ: ನಾನು M ಅನ್ನು ಬಳಸುತ್ತಿದ್ದೇನೆ ಎನ್ನುವುದಕ್ಕೂ ಅಥವಾ ನಾನು E ಅನ್ನು ಹೊಂದುವುದರ ವಿರುದ್ಧ ಹೇಳುವುದಕ್ಕೆ ಬಹಳಷ್ಟು ಇದೆ. (ಪುಟ 77)

ಈ ಮೇಲಿನದು ಒಂದು ಸ್ವೀಕಾರಾರ್ಹ ರೂಪುರೇಷೆ ಮತ್ತು ಲೂವಿಸ್ ಕ್ಯಾರೋಲ್‌ನ ದೃಷ್ಟಿಯಿಂದ ಸಮರ್ಥಿತ. ಒಂದು ಗುರಿಯನ್ನು ಹೊಂದಿರುವುದು ಯಾವುದೇ ಕಾರಣವನ್ನು ಒದಗಿಸುತ್ತದೆಯೇ ಎಂಬ ಪ್ರಶ್ನೆಯನ್ನು ಅವರು ಎತ್ತುವುದಿಲ್ಲ ಮತ್ತು ಆದ್ದರಿಂದ ನಿರ್ಣಯಗಳನ್ನು ಹೊಂದಲು ಅನುಮತಿಸುತ್ತಾರೆ. M ಅನ್ನು ಬಳಸಲು ಏನೋ ಒಂದು "ಪ್ರಯೋಜನವಿದೆ" ಎನ್ನುವುದು ಒಂದು ಕಾರಣವನ್ನು ಒದಗಿಸುತ್ತಿರುವಂತೆ ತೋರುತ್ತದೆ. ಅದು ಹಾಗೆ ಒದಗಿಸದಿದ್ದಲ್ಲಿ, ನಾವು ಏಕಕಾಲದಲ್ಲಿ ಗುರಿ, ನಂಬಿಕೆಯನ್ನು ಹೊಂದಲು ಆದರೆ ಯಾವುದೇ ಅಪೇಕ್ಷೆಯನ್ನು ಹೊಂದದೆ ಇರುವುದರ ವಿರುದ್ಧ ತಡೆಗಳನ್ನು ಎದುರಿಸುತ್ತೇವೆ ಅಷ್ಟೇ (ಇದು ಕೇವಲ ಮನಶ್ಶಾಸ್ತ್ರೀಯ ಅರ್ಥದಲ್ಲಿ ಗುರಿಗಳಿಗೆ ಒಂದು ವೈಚಾರಿಕತೆಯನ್ನು ಒದಗಿಸಬಹುದು).

20. John Broome, "Are Intentions Reasons? And How Should We Cope with Incommensurable Values?", in Christopher Morris and Arthur Ripstein, eds., *Practical Rationality and*

*Preference: Essays for David Gauthier* (Cambridge: Cambridge University Press, 2001), p. 112.

21. ಬ್ರೂಮ್ (ಈಗಾಗಲೇ ಉಲ್ಲೇಖಿಸಿದ ಕೃತಿಯ ಪು. 106) ನಿಯಮಾಧೀನ ವಾಸ್ತವವಾಗಿದೆ ಎಂದು ನಿರ್ದಿಷ್ಟಪಡಿಸುತ್ತಾರೆ, ಇದು ಅದರ ಜ್ಞೇಯ ವಸ್ತುವನ್ನು ರೂಪಿಸುವ ಕ್ರಿಯೆಗೆ ಕಾರಣವನ್ನು ಸೃಷ್ಟಿಸಲು ಉದ್ದೇಶವೊಂದನ್ನು ಹೊಂದಿರಬೇಕು ಎಂದು ಮೇಲ್ನೋಟಕ್ಕೆ ಹೋಲುವ ತತ್ವವನ್ನು ಪ್ರತ್ಯೇಕಿಸುವ ತತ್ವದಲ್ಲಿ ಪ್ರಮುಖ ಅಂಶವಾಗಿದೆ. ಇಲ್ಲಿ ಚರ್ಚಾ ವಿಷಯವಾಗಿರುವ ತತ್ವದ ಬಗೆಗಿನ ಹೆಚ್ಚಿನ ಸಂಬಂಧಿತ ಚರ್ಚೆಯು ಅವರ "Normative Requirements," *Ratio* 12 (1999)ನಲ್ಲಿ ಕಂಡುಬರುತ್ತದೆ.
22. ಒಬ್ಬರು *B* ಅನ್ನು ಮಾಡಬಹುದು ಎಂಬುದನ್ನು ಪರಿಗಣಿಸುವಲ್ಲಿ ವಿಫಲವಾಗುವ ಸಾಧ್ಯತೆ ಇದೆ; ಆದರೆ ಒಬ್ಬರು ಒಂದು ವೇಳೆ *A* ಅನ್ನು ಸಾಧಿಸಲು ಉದ್ದೇಶಿಸಿದರೆ ಮತ್ತು ಹಾಗೆ ಮಾಡಲು *B* ಅಗತ್ಯ ಎಂದು ನಂಬಿದರೂ *B*-ಮಾಡುವಿಕೆಗೆ ತಾವು ಸ್ವತಃ ಅಸಮರ್ಥರು ಎಂದು ಭಾವಿಸಿದರೆ, ಇದೇ ಸ್ವತಃ ಸ್ಪಷ್ಟವಾಗಿ ಸಕಾರಣತೆಯಲ್ಲಿ ಏನೋ ಒಂದು ಕೊರತೆ ಇರುವುದನ್ನು ಸೂಚಿಸುವುದು.
23. ನಾನು $P_4$ ನಲ್ಲಿನ *S*ನ ಸಮರ್ಥನೆ ಮತ್ತು ಅನುಸರಿಸಬೇಕಾದ ತತ್ವಗಳು ಅಸಮರ್ಥನೀಯ ಎಂದು ಪರಿಗಣಿಸುತ್ತೇನೇಯಾದಾರೂ, ಎಲ್ಲವನ್ನೂ ಪರಿಗಣಿಸಿದ ಆಧಾರದ ಮೇಲೆ ಅದು ಇನ್ನೂ ಸಮರ್ಥನೆಯಾಗಿರಬಹುದು ಮತ್ತು ಸಾಕಷ್ಟು ಬಲವಾಗಿರಬಹುದು.
24. ಕಾರಣವಾದದ ಮತ್ತು ಪರಿಗಣಿಸಲಾಗುತ್ತಿರುವ ಸಮಯದ ನಡುವೆ ದೀರ್ಘಕಾಲ ಸಮಯದ ಅಂತರವಿದೆ ಎಂದು ಭಾವಿಸೋಣ. ಅದರ *ಪ್ರಮೇಯಗಳ* ಆಧಾರದ ಮೇಲೆ ತೀರ್ಮಾನವನ್ನು ಮಾಡಲಾಗಿದೆಯೇ ಅಥವಾ ಇಲ್ಲವೇ ಎಂದು ನಾವು ಹೇಗೆ ಹೇಳಬಹುದು? ಸಂಬಂಧಿತ ಪ್ರತಿಪಾದನೆಗಳ ಆಧಾರದ ಮೇಲೆ (ನಂಬಿಕೆಯ)ತೀರ್ಮಾನವನ್ನು ಹೊಂದುವುದು ಸಮರ್ಪಕವಾಗುವುದಿಲ್ಲ; ಸ್ವತಃ ಕಾರಣವಾದದ ಪ್ರಕ್ರಿಯೆಯು ಯಾವುದಾದರೊಂದು ರೀತಿಯಲ್ಲಿ ಆಧಾರದಲ್ಲಿ ಅಂತರ್ಗತವಾಗಿರಬೇಕು, ಹಾಗೆ ಇಲ್ಲದಿದ್ದಲ್ಲಿ ನಾವು ಕೇವಲ ಅದೇ ಕಾರಣಗಳ ಆಧಾರದ ಮೇಲೆ ಒಂದು ಅಭಿಪ್ರಾಯವನ್ನು ಹೊಂದಿರುತ್ತೇವೆಯೇ ಹೊರತು, ಅದೇ *ಕಾರಣವಾದವನ್ನು* ಅಲ್ಲ. ಹೇಗೆ ಗುರುತಿಸಬಹುದು ಎನ್ನುವುದು ತತ್ವಶಾಸ್ತ್ರೀಯ ಸಿದ್ಧಾಂತ ಮತ್ತು ಪ್ರಾಯೋಗಿಕ ಪರಿಶೋಧನೆ ಎರಡಕ್ಕೂ ಒಂದು ಸವಾಲಾಗಿದೆ, ಆದರೆ ಆ ಕಾರ್ಯ ಸಾಧ್ಯವೆಂದು ತೋರುತ್ತದೆ.
25. I have developed this view in detail in *Architecture* and draw on that book in the next few paragraphs.

26. ಇದು ಅಸಂಬದ್ಧತೆಯು ಸಮರ್ಥನೆಯನ್ನು *ನಿರರ್ಥಕಗೊಳಿಸುತ್ತದೆ ಎನ್ನುವ ಆಧಾರದ ಮೇಲೆ* ಸುಸಂಬದ್ಧತೆಯೇ ಸಮರ್ಥನೆಯ *ಆಧಾರ* ಎಂಬ ನಿರ್ಣಯದ ಜ್ಞಾನಮೀಮಾಂಸೆಯಲ್ಲಿನ ದೋಷವನ್ನು ನೆನಪಿಸುತ್ತದೆ. ಇಲ್ಲಿರುವ ತಪ್ಪಾದ ನಿರ್ಣಯಗಳನ್ನು ತಳ್ಳಿಹಾಕುವುದು, ಸಹಜವಾಗಿ, ನಾವು ಅತಿಯಾಗಿ ಒತ್ತು ಕೊಡುವ ಪ್ರಯತ್ನವನ್ನಾದರೂ ಮಾಡಬೇಕು ಅಥವಾ ಸುಸಂಬದ್ಧತೆಯು ಸಮರ್ಥನೆಯಲ್ಲಿ ಯಾವುದೇ ಸಕಾರಾತ್ಮಕ ಪಾತ್ರವನ್ನು ವಹಿಸುವುದಿಲ್ಲ ಎಂಬುದನ್ನು ನಿರಾಕರಿಸುವುದಕ್ಕೆ ಒಬ್ಬರನ್ನು ಬದ್ಧವಾಗಿಸುವುದಿಲ್ಲ. ಜ್ಞಾನಮೀಮಾಂಸೆಯ ದಾಹರಣೆಯ ವಿಶ್ಲೇಷಣೆಯನ್ನು ನನ್ನ *Structure of Justification* ಕೃತಿಯಲ್ಲಿ ಒದಗಿಸಲಾಗಿದೆ (Cambridge: Cambridge University Press, 1993), esp. chs 3–4.
27. *Groundwork* ನಲ್ಲಿನ ಕೆಲವು ಕೇಂದ್ರ ಭಾಗಗಳು ಇದನ್ನು ಕ್ಯಾಂಟ್ ಈ ರೀತಿ ನೋಡುತ್ತಾರೆ ಎಂದು ಸ್ಪಷ್ಟಪಡಿಸುವುದಿಲ್ಲ ಮತ್ತು ಸಾಮಾನ್ಯವಾಗಿ ಒಪ್ಪಿಕೊಂಡಿರವುದಕ್ಕಿಂತ ಹೆಚ್ಚು ಇಲ್ಲಿ ಅವರು ಹ್ಯೂಮ್‌ನಿಂದ ಅಥವಾ ಕನಿಷ್ಠ ಸಾಧನಭೂತವಾದದ ಕಲ್ಪನೆಗಳಿಂದ ಪ್ರಭಾವಿತರಾಗಿದ್ದಾರೆಯೇ ಎಂದು ನಾವು ಕುತೂಹಲಪಡಬಹುದು. ಕೋರ್ಸ್ಗಾರ್ಡ್, ಮೇಲೆ ಮತ್ತು ಇದೇ ಲೇಖನದ ಇತರೆಡೆಗಳಲ್ಲಿ ಉಲ್ಲೇಖಿಸಿದಂತೆ, ನಾವು ಏನನ್ನು ಇಚ್ಛಿಸಿತ್ತೇವೆಯೋ ಅದು ಒಂದು ಅರ್ಥದಲ್ಲಿ ಸಕಾರಣವಾಗಿದೆ ಎಂದು ಕ್ಯಾಂಟ್ ಪೂರ್ವಭಾವಿಸುತ್ತಿದ್ದಾರೆ ಎಂದು ಭಾವಿಸಿದಂತೆ ತೋರುತ್ತದೆ; ಆದರೆ ಇಚ್ಛಾ-ಸ್ವಾತಂತ್ರ್ಯ ಸಂಕಲ್ಪವನ್ನು ಅದು ಕಾರಣಗಳನ್ನು ಪ್ರತಿಬಿಂಬಿಸುವುದರ ಬದಲಾಗಿ ಅವುಗಳ ಮೂಲವೆಂದು ಪರಿಗಣಿಸುವುದರಿಂದ ಇದು ಸಂಪೂರ್ಣವಾಗಿ ಸ್ಪಷ್ಟವಾಗಿಲ್ಲ. ಸಾಧನಭೂತವಾದ

ದೃಷ್ಟಿಕೋನವು ಅಪೇಕ್ಷೆಗಳಿಗೆ ಪಾತ್ರ ನೀಡುವ ಅದೇ ರೀತಿಯಲ್ಲಿ ಇದು ಇಚ್ಛಾ-ಸ್ವಾತಂತ್ರ್ಯ ಸಂಕಲ್ಪಕ್ಕೆ ಒಂದು ಪಾತ್ರವನ್ನು ನೀಡುತ್ತದೆಯಾದರೂ, ಅದು ಖಚಿತವಾಗಿ *Treatise* ನಲ್ಲಿನ ಹ್ಯೂಮ್‌ನ ಸಾಧನಭೂತವಾದಕ್ಕಿಂತ ಹೆಚ್ಚಾಗಿ ಬ್ರಾಂಟ್‌ನ ನಿರ್ಬಂಧಿತ ಮಿತಿಯುಳ್ಳ ಸಾಧನಭೂತವಾದದಂತೆಯೇ ಇದೆ.

28. Earlier versions of this paper were presented at Texas A and M University and at the University of Reading. Comments from the audiences in both universities were of much help in revising. I particularly want to thank John Cottingham, Jonathan Dancy, Brad Hooker, Michael Meyer, Christian Miller, Elizabeth Radcliffe, and Philip Stratton-Lake.

**Glossary**

1. ಪ್ರಮಾಣಕ: Normative (ಇದರ ಅರ್ಥ ಪ್ರಮಾಣಗಳನ್ನು ಸ್ಥಾಪಿಸುವ, creating norms ಎಂದು)
2. ತಾರ್ಕಿಕ: Logical
3. ನಿರ್ಣಯಾತ್ಮಕ: Inferential
4. ಜ್ಞಾನದ: Epistemic; ಜ್ಞಾನಪ್ರಮಾಣ: Episteme ಜ್ಞಾನಮೀಮಾಂಸೆ: Epistemology
5. ವಾಸ್ತವಿಕ/ ವಸ್ತುಭೂತ: Material
6. ಔಪಾಧಿಕ ಕಡ್ಡಾಯ ನಿಯಮಗಳು: Hypothetical imperatives
7. ನಿರುಪಾಧಿಕ ಕಡ್ಡಾಯ ನಿಯಮಗಳು/ ನಿರುಪಾಧಿಕ ವಿಧಿ/ ನೈತಿಕ ಕರ್ತವ್ಯ: Categorical imperatives
8. ಪ್ರಮೇಯ: Premise
9. ತೀರ್ಮಾನ: Conclusion
10. ನಿರ್ಣಯ: Inference
11. ಅನುಗಮನಾತ್ಮಕ: Inductive
12. ನಿಗಮನಾತ್ಮಕ: Deductive
13. ಸೂಚಕ: Tokening
14. ರೂಪುರೇಷೆ: Schemata
15. ಅಗತ್ಯ ನಿಯಮದ ರೂಪುರೇಷೆ: Necessary condition schema
16. ಸಮರ್ಪಕ ನಿಯಮದ ರೂಪುರೇಷೆ: Sufficient condition schema
17. ಅತ್ಯುತ್ತಮತೆಯ ಮಾದರಿ: Optimality pattern
18. ಸಕಾರಣ ನಿರ್ಣಯ: Reasonable inference
19. ಕನಿಷ್ಠತಮ ಸಮರ್ಪಕತೆಯ ಮಾದರಿ: Mimimal adequacy pattern
20. ಪ್ರಮಾಣಿತ ಸಮರ್ಪಕತೆಯ ಮಾದರಿ: Standard adequacy pattern
21. ಸಮಂಜಸ: Cogent
22. ಸಮಂಜಸತೆಯ ಮಾದರಿ: Cogency pattern
23. ನಿರ್ಣಯಾತ್ಮಕ ಮಾನದಂಡ: Inferential criterion
24. ಕಾಲಸೂಚಕ/ಕಾಲೀನ/ಕಾಲಬದ್ಧ/ ಕಾಲದ: Temporal
25. ವ್ಯತ್ಯಯಗಳು: Variables

26. ನಿರ್ಣಾಯಕ ತತ್ವ: Closure principle (a conclusive principle)
27. ನಿರ್ಮಿಸುವ ತತ್ವ: Generation principle
28. ಸುಸಂಬದ್ಧತೆಯ ತತ್ವ: Coherence principle
29. ಪ್ರಾಸಂಗಿಕ ನಿರ್ಣಯ: Episodic inference
30. ಹೊರಹೊಮ್ಮುತ್ತಿರುವ ನಿರ್ಣಯ: Emergent inference
31. ರೂಢಮಾದರಿ: paradigm
32. ಕಾರ್ಯಪ್ರೇರಕ: conative
33. ಸಾಧನಭೂತವಾದ: instrumentalism
34. ಅರ್ಹ,ವಿಶೇಷಿತ( ವಿಶೇಷಣಗಳನ್ನು ಪಡೆದಿರುವ), ಸೀಮಿತ: qualified; ಅನರ್ಹ,ಅವಿಶೇಷಿತ: unqualified